ಶುಕ್ರವಾರ, ನವೆಂಬರ್ 26, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 327 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ಗೋವಿಂದ ಗೋವಿಂದ'ದ ಪದ್ಮಾವತಿ ಭಾವನಾ ಮೆನನ್ ಅವರಿಗೆ ಈಗ ಚಂದನವನದಲ್ಲೇ ಕೈತುಂಬಾ ಕೆಲಸ



ಆಳ-ಅಗಲ
ಕ್ಷೀರಕ್ರಾಂತಿಯ ಹರಿಕಾರನ ಜನ್ಮಶತಮಾನ

'ಗೊಂದಲ ಮೂಡಿಸಿದ ಪಕ್ಷೇತರ ಅಭ್ಯರ್ಥಿ ಸ್ಪರ್ಧೆ' 8

ರಿಲಯನ್ಸ್–ಆರಾಮ್ಕೊ ಒಪ್ಪಂದ ರದ್ದು? 10

ಸೆನ್ಸೆಕ್ಸ್	ನಿಫ್ಟಿ	₹/$
58,795 ▲	17,536 ▲	74.52 ▼

ಪಿಂಚಣಿ ವಿಷಯ ಕಂದಾಯ ಇಲಾಖೆ ವ್ಯಾಪ್ತಿಗೆ • 'ಖಜಾನೆ' ತೆಕ್ಕೆಗೆ ಕೆಜಿಐಡಿ

ಮಾತೃ ಇಲಾಖೆಗೇ ನೌಕರಿ ಸೀಮಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಸಿಬ್ಬಂದಿ ನಿಯೋಜನೆ ಅಥವಾ ಹುದ್ದೆ ವರ್ಗಾವಣೆಗೆ ನಿಷೇಧ ವಿಧಿಸಬೇಕು ಎಂದು ಶಿಫಾರಸು ಮಾಡಲು ಕಂದಾಯ ಸಚಿವ ಆರ್. ಅಶೋಕ ಅಧ್ಯಕ್ಷತೆಯ ಸಚಿವ ಸಂಪುಟ ಉಪ ಸಮಿತಿ ನಿರ್ಧರಿಸಿದೆ.

ಇದಕ್ಕೆ ಪೂರಕವಾಗಿ, 'ವೃಂದ ಮತ್ತು ನೇಮಕಾತಿ ನಿಯಮ'ಗಳಿಗೆ ತಿದ್ದುಪಡಿ ತರುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ (ಡಿಪಿಎಆರ್) ಸಮಿತಿ ಸೂಚಿಸಿದೆ.

ವಿವಿಧ ಇಲಾಖೆ, ಕಚೇರಿಗಳ ವಿಲೀನ ಅಥವಾ ರದ್ದು, ಮಂಜೂರಾಗಿರುವ ವಿವಿಧ ವೃಂದ ಬಲದ ವೈಜ್ಞಾನಿಕ ಪರಿಷ್ಕರಣೆ, ಹುದ್ದೆಗಳ ರದ್ದತಿ, ಮರುವಿನ್ಯಾಸ ಹಾಗೂ ಆರನೇ ವೇತನ ಆಯೋಗವು ಆಡಳಿತದಲ್ಲಿ ಸುಧಾರಣೆ ತರಲು ಮಾಡಿರುವ ಶಿಫಾರಸುಗಳನ್ನು ಪರಿಶೀಲಿಸಲು ಈ ಸಮಿತಿ ರಚಿಸಲಾಗಿತ್ತು.

'ಅವಧಿಪೂರ್ವ ವರ್ಗಾವಣೆ ಇಲ್ಲ'

'ಮುಂದಿನ ಸಾರ್ವತ್ರಿಕ ವರ್ಗಾವಣೆ ಅವಧಿಯವರೆಗೆ ಯಾವುದೇ ಅವಧಿಪೂರ್ವ ವರ್ಗಾವಣೆ ಮಾಡುವಂತಿಲ್ಲ. ಇಂತಹ ವರ್ಗಾವಣೆ ಪ್ರಸ್ತಾವನೆಗಳನ್ನು ಮುಖ್ಯಮಂತ್ರಿಗೆ ಸಲ್ಲಿಸುವಂತಿಲ್ಲ' ಎಂದು ಡಿಪಿಎಆರ್ ಆದೇಶಿಸಿದೆ.

ಲಭ್ಯ ಇರುವ ಖಾಲಿ, ರಿಕ್ತ ಸ್ಥಾನಗಳಿಗೆ ಮಾತ್ರ ಕನಿಷ್ಠ ಸೇವಾ ಅವಧಿ ಪೂರೈಸಿರುವ ಅಧಿಕಾರಿ, ಸಿಬ್ಬಂದಿಯ ವರ್ಗಾವಣೆಯನ್ನು ಅನುಮೋದಿಸಲು ಆಯಾ ಇಲಾಖೆಗಳ ಸಚಿವರಿಗೆ ಅಧಿಕಾರ ಇದೆ. ಈ ಅಧಿಕಾರ ನ.24ರಿಂದ ಒಂದು ತಿಂಗಳ ಅವಧಿಗೆ ಸೀಮಿತ. ಈ ರೀತಿಯ ವರ್ಗಾವಣೆಯಿಂದ ತೆರವಾಗುವ ಸ್ಥಾನವನ್ನು ಮತ್ತೊಂದು ವರ್ಗಾವಣೆ ಮೂಲಕ ಭರ್ತಿ ಮಾಡುವಂತೆ ಇಲ್ಲ' ಎಂದೂ ಆದೇಶ ಸ್ಪಷ್ಟಪಡಿಸಿದೆ.

ಗ್ರೂಪ್ 'ಬಿ', 'ಸಿ' ಮತ್ತು 'ಡಿ' ಶ್ರೇಣಿಯ ಸಿಬ್ಬಂದಿಗೆ ಈ ಆದೇಶ ಅನ್ವಯ ಆಗಲಿದೆ.

ಸಾರ್ವತ್ರಿಕ ವರ್ಗಾವಣೆ ಅವಧಿ ಜುಲೈ 22ಕ್ಕೆ ಮುಕ್ತಾಯಗೊಂಡಿದೆ. ಕೆಲವು ವಿಶೇಷ ಪ್ರಕರಣಗಳಲ್ಲಿ ಮುಖ್ಯಮಂತ್ರಿಯ ಅನುಮೋದನೆ ಪಡೆದು ವರ್ಗಾವಣೆ ಮಾಡಲು ಅವಕಾಶ ಇದೆ. ಇದನ್ನು ಬಳಸಿಕೊಂಡು, ಕೆಲವು ನಿಯಮಿತ (ರೆಗ್ಯುಲರ್) ಸ್ವರೂಪದ ವರ್ಗಾವಣಾ ಪ್ರಸ್ತಾವನೆಗಳನ್ನೂ ಮುಖ್ಯಮಂತ್ರಿ ಅನುಮೋದನೆಗೆ ಸಲ್ಲಿಸಲಾಗುತ್ತಿದೆ. ಈ ಪ್ರವೃತ್ತಿಯಿಂದ ಕೆಲವು ಇಲಾಖೆಗಳಲ್ಲಿ ಕೆಲಸಗಳು ಕುಂಠಿತಗೊಳ್ಳುತ್ತಿವೆ ಎಂಬ ಕಾರಣಕ್ಕೆ ಈ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಪ್ರಮುಖ ಶಿಫಾರಸುಗಳು

- ಎಲ್ಲ ಇಲಾಖೆಗಳ ಪಿಂಚಣಿ ವಿಷಯ, ತಗಾದೆಗಳನ್ನು ನಿರ್ವಹಿಸುವ ಹೊಣೆ ಕಂದಾಯ ಇಲಾಖೆಯ ಪಿಂಚಣಿ ನಿರ್ದೇಶನಾಲಯಕ್ಕೆ
- ಖಜಾನೆ ಇಲಾಖೆ ಜೊತೆ ಕರ್ನಾಟಕ ಸರ್ಕಾರಿ ವಿಮಾ ಇಲಾಖೆ (ಕೆಜಿಐಡಿ) ವಿಲೀನ
- ಕೆಲಸದ ಒತ್ತಡ ಕಡಿಮೆ ಇರುವುದರಿಂದ ನಾಲ್ಕು ಪ್ರಾದೇಶಿಕ ಆಯುಕ್ತ (ಕಲಬುರಗಿ, ಮೈಸೂರು, ಬೆಳಗಾವಿ, ಬೆಂಗಳೂರು) ಹುದ್ದೆ ರದ್ದು
- ಸಾಮಾಜಿಕ ಅರಣ್ಯ ಸಂರಕ್ಷಣಾಧಿಕಾರಿ (ಎಸ್‌ಎಫ್‌ಒ) ಹುದ್ದೆ, ವಲಯ ಅರಣ್ಯಾಧಿಕಾರಿ (ಆರ್‌ಎಫ್‌ಒ) ಹುದ್ದೆ ಜೊತೆ ವಿಲೀನಗೊಳಿಸುವುದು
- ಸಚಿವಾಲಯದಲ್ಲಿ ಇ– ಆಫೀಸ್ ಜಾರಿಗೆ ಬಂದಿರುವುದರಿಂದ ಅಲ್ಲಿನ 542 ಕಿರಿಯ ಸಹಾಯಕರ ಹುದ್ದೆಗಳಲ್ಲಿ 164 ಕಾರ್ಯನಿರತ ಹುದ್ದೆಗಳನ್ನು ಮುಂದುವರಿಸಿ, ಖಾಲಿ ಹುದ್ದೆಗಳ ರದ್ದು
- ಬಿಡಿಎ ಮತ್ತು ಸ್ಥಳೀಯ ಯೋಜನಾ ಪ್ರಾಧಿಕಾರಗಳನ್ನು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ (ಬಿಎಂಆರ್‌ಡಿಎ) ಜೊತೆ ವಿಲೀನಗೊಳಿಸುವುದು. ಅದು ಸಾಧ್ಯವಾಗದ ಪಕ್ಷದಲ್ಲಿ ಕನಿಷ್ಠ ಬಿಡಿಎಯನ್ನು ಬಿಎಂಆರ್‌ಡಿಎ ಜೊತೆ ಬಿಬಿಎಂಪಿ ವ್ಯಾಪ್ತಿಯಲ್ಲಿ ವಿಲೀನ.

ವಿವಿಧ ಸಚಿವಾಲಯಗಳಲ್ಲಿ ಬಹಳಷ್ಟು ಹುದ್ದೆಗಳು ಖಾಲಿ ಇವೆ. ಸಚಿವಾಲಯದ ಅಧಿಕಾರಿಗಳು ಬೇರೆ ಇಲಾಖೆಗೆ ಹಾಗೂ ವಿವಿಧ ಇಲಾಖೆಗಳಿಂದ ಬೇರೆ ಬೇರೆ ಇಲಾಖೆಗಳಿಗೆ ನಿಯೋಜನೆಯಲ್ಲಿ ತೆರಳುತ್ತಿರುವುದರಿಂದ ಸಮಸ್ಯೆಗಳಾಗುತ್ತಿದೆ. ನಿಯೋಜನೆ ಮೇಲೆ ತೆರಳುವ ಸಿಬ್ಬಂದಿಯ ವಿವರಗಳನ್ನು ಇಲಾಖಾವಾರು ಸಂಗ್ರಹಿಸಿ ಮಂಡಿಸಬೇಕು ಎಂದು ಡಿಪಿಎಆರ್ ಮತ್ತು ಎಲ್ಲ ಇಲಾಖೆಗಳಿಗೆ ಸಮಿತಿ ಸೂಚಿಸಿದೆ. ಇದನ್ನು ನಿರ್ಬಂಧಿಸಲು ಸಾಮಾನ್ಯ ನೇಮಕಾತಿ ನಿಯಮ 16 (2) ನಿಯೋಜನೆ ಮೇಲೆ ತೆರಳುವ ನಿಯಮಕ್ಕೆ ತಿದ್ದುಪಡಿ ತರುವ ಅಗತ್ಯವಿದೆ ಎಂದು ಸಮಿತಿ ಅಭಿಪ್ರಾಯ-ಪಟ್ಟಿದೆ.

'ಸರ್ಕಾರ ವಜಾ ಮಾಡಿ'

ಶೇ 40ರಷ್ಟು ಲಂಚ: ರಾಜ್ಯಪಾಲರಿಗೆ ಕಾಂಗ್ರೆಸ್ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾವಿರಾರು ಕೋಟಿ ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ರಾಜ್ಯ ಸರ್ಕಾರವನ್ನು ವಜಾಗೊಳಿಸಿ, ಕೂಡಲೇ ರಾಷ್ಟ್ರಪತಿ ಆಡಳಿತ ಹೇರಬೇಕು' ಎಂದು ಕಾಂಗ್ರೆಸ್ ನಾಯಕರ ನಿಯೋಗವು ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರನ್ನು ಒತ್ತಾಯಿಸಿದೆ.

ನಿಯೋಗದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ ಇದ್ದರು.

'ಗುತ್ತಿಗೆ ಟೆಂಡರ್‌ಗಳಲ್ಲಿ ಶೇ 40ರಷ್ಟು ಲಂಚ ನಡೆಯುತ್ತಿದೆ ಎಂದು ಗುತ್ತಿಗೆದಾರರ ಸಂಘವು ಪ್ರಧಾನಿ ನರೇಂದ್ರ ಮೋದಿ ಅವರಿಗೆ 2021ರ ಜೂನ್ ತಿಂಗಳಲ್ಲಿ ದೂರು ನೀಡಿದೆ. ರಾಜ್ಯದಲ್ಲಿನ ವ್ಯಾಪಕ ಭ್ರಷ್ಟಾಚಾರ ಮತ್ತು ದುರಾಡಳಿತದಿಂದ ಸರ್ಕಾರದ ಬೊಕ್ಕಸಕ್ಕೆ ಭಾರಿ ನಷ್ಟವಾಗುತ್ತಿದೆ. ಕೆಲವು ಸಚಿವರು, ಶಾಸಕರು ಮತ್ತು ಅಧಿಕಾರಿಗಳು ಈ ಅಕ್ರಮ ಹಣವನ್ನು ನುಂಗಿದ್ದಾರೆ. ರಾಜ್ಯದಲ್ಲಿ ಸಾಂವಿಧಾನಿಕ ಆಡಳಿತ ವಿಫಲವಾಗಿದೆ' ಎಂದೂ ಕಾಂಗ್ರೆಸ್ ದೂರಿದೆ.

'ಸಂವಿಧಾನ ಅನ್ವಯ ರಾಜ್ಯ ಸರ್ಕಾರ ನಡೆಯುತ್ತಿಲ್ಲ. ಹೀಗಾಗಿ, ಸಂವಿಧಾನದ 356ನೇ ವಿಧಿಯನ್ನು ಜಾರಿಗೊಳಿಸಲು ರಾಷ್ಟ್ರಪತಿಗೆ ವರದಿ ಸಲ್ಲಿಸಬೇಕು' ಎಂದೂ ಮನವಿ ಮಾಡಿದೆ.

'ಲೋಕೋಪಯೋಗಿ, ಸಣ್ಣ ನೀರಾವರಿ, ಜಲಸಂಪನ್ಮೂಲ, ಪಂಚಾಯತ್‌ರಾಜ್, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ, ಬಿಬಿಎಂಪಿ ಹೀಗೆ ಎಲ್ಲ ಇಲಾಖೆಗಳ ಕಾಮಗಾರಿಗಳಲ್ಲಿ ಶೇ 40ರಷ್ಟು ಕಮಿಷನ್ ಪಡೆಯಲಾಗುತ್ತಿದೆ' ಎಂದು ಗುತ್ತಿಗೆದಾರರ ಸಂಘ ಪ್ರಧಾನಿಗೆ ಪತ್ರ ಬರೆದಿದೆ. ಈ ಆರೋಪಗಳ ಬಗ್ಗೆ ಸುಪ್ರೀಂ ಕೋರ್ಟ್‌ನ ಹಾಲಿ ನ್ಯಾಯಮೂರ್ತಿಯಿಂದ ನ್ಯಾಯಾಂಗ ತನಿಖೆ ನಡೆಸಬೇಕು. ಆರೋಪದ ಬಗ್ಗೆ ಎಫ್‌ಐಆರ್ ದಾಖಲಿಸಿಕೊಂಡು ಕಾನೂನು ಕ್ರಮ ತೆಗೆದುಕೊಳ್ಳುವಂತೆ ರಾಜ್ಯ ಪೊಲೀಸರಿಗೆ ನಿರ್ದೇಶನ ನೀಡಬೇಕು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿನ ಅಕ್ರಮಗಳ ಬಗ್ಗೆಯೂ ತನಿಖೆಗೆ ಸೂಚಿಸಬೇಕು' ಎಂದೂ ನಿಯೋಗ ಒತ್ತಾಯಿಸಿದೆ.

3ನೇ ಪುಟ ನೋಡಿ

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಕಾಂಗ್ರೆಸ್ ನಿಯೋಗ ಗುರುವಾರ ಮನವಿ ಸಲ್ಲಿಸಿತು. ಶಾಸಕ ಅಜಯ್ ಸಿಂಗ್, ವಿಧಾನ ಪರಿಷತ್ ಸದಸ್ಯ ನಜೀರ್ ಅಹ್ಮದ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಮಾಜಿ ಸಂಸದ ವಿ.ಎಸ್. ಉಗ್ರಪ್ಪ, ಶಾಸಕರಾದ ರಾಮಲಿಂಗಾರೆಡ್ಡಿ, ಕೃಷ್ಣ ಬೈರೇಗೌಡ ಇದ್ದರು

ಎಲ್ಲ ಟೆಂಡರ್‌ಗಳ ತನಿಖೆ: ಬೊಮ್ಮಾಯಿ



'ನಮ್ಮ ಸರ್ಕಾರ ಬಂದ ಮೇಲೆ ವಿವಿಧ ಇಲಾಖೆಗಳಲ್ಲಿ ಅಂತಿಮಗೊಳಿಸಿರುವ ಎಲ್ಲ ಟೆಂಡರ್‌ಗಳ ತನಿಖೆ ನಡೆಸುವಂತೆ ಮುಖ್ಯಕಾರ್ಯದರ್ಶಿಯವರಿಗೆ ಪತ್ರ ಬರೆದಿದ್ದೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಸೌಧದಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಅವರು ಸ್ವಯಂ ಪ್ರೇರಣೆಯಿಂದ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು. ಟೆಂಡರ್‌ಗಳಿಗೆ ಶೇ 40 ರಷ್ಟು ಕಮಿಷನ್ ಪಡೆಯಲಾಗು-ತ್ತಿದೆ ಎಂದು ಗುತ್ತಿಗೆದಾರರ ಸಂಘ ಪ್ರಧಾನಿಯವರಿಗೆ ಪತ್ರ ಬರೆದಿತ್ತು.

'ಗುತ್ತಿಗೆದಾರರ ಸಂಘದವರು ಜುಲೈ ತಿಂಗಳಲ್ಲಿ ಪ್ರಧಾನಿಯವರಿಗೆ ಪತ್ರ ಬರೆದಿದ್ದರು. ಪತ್ರದಲ್ಲಿ ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ ಯಾವುದೇ ಆಧಾರ ಅಥವಾ ನಿರ್ದಿಷ್ಟ ನಿದರ್ಶನಗಳನ್ನು ನೀಡಿಲ್ಲ. ಆದರೂ, ಸರ್ಕಾರ ಪಾರದರ್ಶಕವಾಗಿರಬೇಕು ಎಂಬ ಕಾರಣಕ್ಕೆ ತನಿಖೆ ನಡೆಸಲು ಮತ್ತು ತಪ್ಪಿತಸ್ಥರನ್ನು ಶಿಕ್ಷಿಸಲು ಸೂಚಿಸಿದ್ದೇನೆ' ಎಂದರು.

ಟೆಂಡರ್‌ನಲ್ಲಿ ಪಾರದರ್ಶಕತೆ ತರಲು ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಎರಡು ಸಮಿತಿಗಳನ್ನು ರಚಿಸಲಾಗುವುದು. ಈ ಸಮಿತಿಗಳಿಗೆ ಟೆಂಡರ್ ಅಂದಾಜು ಮತ್ತು ಷರತ್ತುಗಳನ್ನು ಪರಿಶೀಲಿಸಿ ಒಪ್ಪಿಗೆ ಕೊಡುವ ಅಧಿಕಾರ ನೀಡಲು ಕಳೆದ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಅಧಿಕೃತ ಆದೇಶವನ್ನು ಹೊರಡಿಸಲಾಗುವುದು ಎಂದು ಬೊಮ್ಮಾಯಿ ಹೇಳಿದರು.

ಒಂದೇ ಶಾಲೆಯ 33 ವಿದ್ಯಾರ್ಥಿಗಳಿಗೆ ಕೋವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ದೊಮ್ಮಸಂದ್ರದಲ್ಲಿನ ಖಾಸಗಿ ಶಿಕ್ಷಣ ಸಂಸ್ಥೆಯೊಂದರಲ್ಲಿ 33 ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಯೊಬ್ಬರು ಕೋವಿಡ್ ಪೀಡಿತರಾಗಿದ್ದಾರೆ.

'ದಿ ಇಂಟರ್‌ನ್ಯಾಷನಲ್ ಸ್ಕೂಲ್ ಬೆಂಗಳೂರು' ಶಿಕ್ಷಣ ಸಂಸ್ಥೆಯಲ್ಲಿ ಕೋವಿಡ್ ಪ್ರಕರಣಗಳು ವರದಿಯಾಗಿವೆ. ಅಲ್ಲಿ ಈವರೆಗೆ ವಿದ್ಯಾರ್ಥಿಗಳು ಸೇರಿದಂತೆ 497 ಮಂದಿಗೆ ಕೋವಿಡ್ ಪರೀಕ್ಷೆ ನಡೆಸಲಾಗಿದೆ. 8ನೇ ತರಗತಿಯ ಒಬ್ಬ ವಿದ್ಯಾರ್ಥಿ, 9ನೇ ತರಗತಿಯ 12 ವಿದ್ಯಾರ್ಥಿಗಳು, 10ನೇ ತರಗತಿಯ 8 ವಿದ್ಯಾರ್ಥಿಗಳು, 11ನೇ ತರಗತಿಯ 3 ವಿದ್ಯಾರ್ಥಿಗಳು ಹಾಗೂ 12 ತರಗತಿಯ 9 ವಿದ್ಯಾರ್ಥಿಗಳು ಕೋವಿಡ್ ಪೀಡಿತರಾಗಿದ್ದಾರೆ. 32 ವಿದ್ಯಾರ್ಥಿಗಳಿ-ಗೆ ಸಂಸ್ಥೆಯ ವೈದ್ಯಕೀಯ ಕೇಂದ್ರದಲ್ಲಿಯೇ ಆರೈಕೆ ಮಾಡಲಾಗುತ್ತಿದೆ.

3ನೇ ಪುಟ ನೋಡಿ

ಡಿ ಗ್ರೂಪ್ ನೌಕರ ಬಿ.ವಿ.ಗಿರಿ ಬಳಿ ₹6.24 ಕೋಟಿ ಆಸ್ತಿ

28 ಮನೆ ಮಾಲೀಕ ವಾಸುದೇವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಿರ್ಮಿತಿ ಕೇಂದ್ರದ ನಿವೃತ್ತ ಯೋಜನಾ ನಿರ್ದೇಶಕ ಆರ್.ಎನ್. ವಾಸುದೇವ ಅವರು 28 ಮನೆ ಸೇರಿ ₹18.20 ಕೋಟಿ ಮೌಲ್ಯದ ಆಸ್ತಿಗೆ ಒಡೆಯನಾಗಿದ್ದರೆ, ಬಿಬಿಎಂಪಿ ಶಾಲೆಯ ಡಿ ಗ್ರೂಪ್ ನೌಕರ ಬಿ.ವಿ. ಗಿರಿ ₹6.24 ಕೋಟಿ ಮೌಲ್ಯದ ಆಸ್ತಿಗೆ ಮಾಲೀಕ..!

ಆದಾಯ ಮೀರಿ ಆಸ್ತಿ ಸಂಪಾದನೆ ಬಗ್ಗೆ ಮಾಹಿತಿ ಸಂಗ್ರಹಿಸಿ ರಾಜ್ಯದ 15 ಅಧಿಕಾರಿಗಳು, ಸಿಬ್ಬಂದಿ ಮನೆ ಮೇಲೆ ಬುಧವಾರ ಏಕಕಾಲದಲ್ಲಿ ದಾಳಿ ನಡೆಸಿದ್ದ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಅಧಿಕಾರಿಗಳು, ದಾಳಿ ಪೂರ್ಣಗೊಳಿಸಿ ಗುರುವಾರ ಮಾಧ್ಯಮ ಪ್ರಕಟಣೆ ಹೊರಡಿಸಿದ್ದಾರೆ.

ವಾಸುದೇವ್ ಅವರು ಕೆಂಗೇರಿ, ಮಲ್ಲೇಶ್ವರ, ಯಲಹಂಕದಲ್ಲಿ ಪತ್ನಿ, ಮಕ್ಕಳ ಹೆಸರಿನಲ್ಲಿ ಅಪಾರ್ಟ್‌ಮೆಂಟ್ ರೀತಿಯ ಕಟ್ಟಡಗಳನ್ನು ನಿರ್ಮಿಸಿದ್ದಾರೆ. ನೆಲಮಂಗಲ ತಾಲ್ಲೂಕಿನ ಸೋಂಪುರದಲ್ಲಿ 4 ಮನೆ ಸೇರಿ ಒಟ್ಟು 28 ಮನೆಗಳು ವಾಸುದೇವ್ ಸುಪರ್ದಿಯಲ್ಲಿವೆ ಎಂಬುದನ್ನು ಎಸಿಬಿ ಅಧಿಕಾರಿಗಳು ಪತ್ತೆ ಮಾಡಿದ್ದಾರೆ. 1 ಬೆಂಜ್ ಮತ್ತು 1 ವೊಲ್ವೊ ಕಾರು ಅವರ ಬಳಿ ಇದೆ. ಬೆಂಗಳೂರಿನಲ್ಲಿ 8 ನಿವೇಶನ, ನೆಲಮಂಗಲ ಮತ್ತು ಮಾಗಡಿ ತಾಲ್ಲೂಕಿನಲ್ಲಿ 10 ಎಕರೆ 20 ಗುಂಟೆ ಕೃಷಿ ಜಮೀನು, 850 ಗ್ರಾಂ ಚಿನ್ನ, 9.5 ಕೆ.ಜಿ ಬೆಳ್ಳಿ ಆಭರಣ ಹೊಂದಿದ್ದಾರೆ. ದಾಳಿ ವೇಳೆ ₹15 ಲಕ್ಷ ನಗದು ದೊರೆತಿದೆ. ಆದಾಯಕ್ಕೂ ಮೀರಿ ಶೇ 879.53ರಷ್ಟು ಆಸ್ತಿ ಹೊಂದಿದ್ದಾರೆ ಎಂದು ಎಸಿಬಿ ವಿವರಿಸಿದೆ.

ಯಶವಂತಪುರ ಮಾರಪ್ಪನಪಾಳ್ಯದ ಬಿಬಿಎಂಪಿ ಬಾಲಕ ಮತ್ತು ಬಾಲಕಿಯರ ಪ್ರೌಢಶಾಲೆಯಲ್ಲಿ ಡಿ ಗ್ರೂಪ್ ನೌಕರನಾಗಿರುವ ಬಿ.ವಿ. ಗಿರಿ, ಬೆಂಗಳೂರು ನಗರದಲ್ಲಿ 6 ಮನೆ, ವಿವಿಧ ಕಂಪನಿಯ 4 ಕಾರು, 4 ದ್ವಿಚಕ್ರ ವಾಹನ, 8 ಕೆ.ಜಿ ಬೆಳ್ಳಿ ಆಭರಣ ಹೊಂದಿದ್ದಾರೆ. ₹1.18 ಲಕ್ಷ ನಗದು ಮತ್ತು ₹15 ಲಕ್ಷ ಬೆಲೆ ಬಾಳುವ ಗೃಹೋಪಯೋಗಿ ವಸ್ತುಗಳು ಪತ್ತೆಯಾಗಿವೆ. ಆದಾಯಕ್ಕೂ ಮೀರಿ ಶೇ 533.85ರಷ್ಟು ಆಸ್ತಿ ಹೊಂದಿದ್ದಾರೆ ಎಂದು ತಿಳಿಸಿದೆ.



ಎಲ್‌ಸಿ. ನಾಗರಾಜ್ ಮನೆಯಲ್ಲಿ ಶೋಧ ನಡೆಸುತ್ತಿರುವುದು

ಕೃಷಿ ಇಲಾಖೆಯ ಗದಗ ಜಿಲ್ಲೆಯ ಜಂಟಿ ನಿರ್ದೇಶಕ ಟಿ.ಎಸ್. ರುದ್ರೇಶಪ್ಪ ಮತ್ತು ಲೋಕೋಪಯೋಗಿ ಇಲಾಖೆ ಜೇವರ್ಗಿಯ ಕಿರಿಯ ಎಂಜಿನಿಯರ್ ಶಾಂತಗೌಡ ಬಿರಾದಾರ್ ಅವರನ್ನು ಎಸಿಬಿ ಅಧಿಕಾರಿಗಳು ಬುಧವಾರ ವಶಕ್ಕೆ ಪಡೆದಿದ್ದರು. ಇಬ್ಬರನ್ನೂ ಬಂಧಿಸಲಾಗಿದೆ ಎಂದು ಎಸಿಬಿ ಮೂಲಗಳು ತಿಳಿಸಿವೆ.

8ನೇ ಪುಟ ನೋಡಿ

11 ಅಧಿಕಾರಿಗಳಿಗೆ ಐಎಎಸ್‌ಗೆ ಬಡ್ತಿ

ಬೆಂಗಳೂರು: ಕರ್ನಾಟಕ ಆಡಳಿತ ಸೇವೆ (ಕೆಎಎಸ್)11 ಹಿರಿಯ ಅಧಿಕಾರಿಗಳಿಗೆ ಐಎಎಸ್‌ಗೆ ಬಡ್ತಿ ಸಿಕ್ಕಿದೆ.

ರಾಜ್ಯ ಸರ್ಕಾರದ ಶಿಫಾರಸು ಅನ್ವಯ ಕೇಂದ್ರ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆ (ಡಿಒಪಿಟಿ) ಈ ಬಡ್ತಿ ನೀಡಿ, ನ.25ರಂದು ಗೆಜೆಟ್ ಅಧಿಸೂಚನೆ ಹೊರಡಿಸಿದೆ.

ಬಡ್ತಿ ಪಡೆದವರು: ಎನ್. ಚಂದ್ರಶೇಖರ್, ಎ.ಬಿ. ಬಸವರಾಜ, ಎಂ. ಶಿಲ್ಪಾ, ಎಸ್. ನವೀನ್‌ಕುಮಾರ್ ರಾಜು ಅರಸ್, ಡಾ. ಎಂ. ಮಹೇಶ್, ಎಸ್.ಜೆ. ಸೋಮಶೇಖರ್, ಡಾ. ಬಿ.ವಿ. ವಾಸಂತಿ ಅಮರ್, ಜಿ. ಲಿಂಗಮೂರ್ತಿ, ಎಸ್. ರಂಗಪ್ಪ, ಎಚ್. ಪ್ರಸನ್ನ, ಇಬ್ರಾಹಿಂ ಮೈಗೂರ್.

ಮುಂದಿನ ವರ್ಷ 16 ದಿನ ಸಾರ್ವತ್ರಿಕ ರಜೆ

ಬೆಂಗಳೂರು: 2022ನೇ ಇಸವಿಯಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ 16 ದಿನ ಸಾರ್ವತ್ರಿಕ ರಜೆ ಹಾಗೂ 22 ದಿನ ನಿರ್ಬಂಧಿತ ರಜೆಗಳು ಸಿಗಲಿವೆ. ಮುಂದಿನ ವರ್ಷದ ಸರ್ಕಾರಿ ರಜಾದಿನಗಳ ಪಟ್ಟಿಗೆ ಸಚಿವ ಸಂಪುಟ ಸಭೆ ಗುರುವಾರ ಒಪ್ಪಿಗೆ ಸೂಚಿಸಿದೆ.

ಮೇ 01–ಕಾರ್ಮಿಕ ದಿನಾಚರಣೆ, ಜುಲೈ 10–ಬಕ್ರೀದ್, ಸೆ.25–ಮಹಾಲಯ ಅಮಾವಾಸ್ಯೆ, ಅ.02–ಗಾಂಧಿಜಯಂತಿ, ಅ.09–ವಾಲ್ಮೀಕಿ ಜಯಂತಿ ಮತ್ತು ಈದ್ ಮಿಲಾದ್, ಡಿ.25–ಕ್ರಿಸ್‌ಮಸ್ ಭಾನುವಾರ ಬರಲಿವೆ. ಹೀಗಾಗಿ, ಈ ದಿನಗಳು ಸಾರ್ವತ್ರಿಕ ರಜಾ ದಿನಗಳ ಪಟ್ಟಿಯಲ್ಲಿಲ್ಲ ಎಂದು ಸರ್ಕಾರದ ಆದೇಶ ಹೇಳಿದೆ.

ಹಾಗೆಯೇ, ಏ.10–ಶ್ರೀರಾಮ-ನವಮಿಯು ಭಾನುವಾರ ಹಾಗೂ ಸೆ.10–ಬ್ರಹ್ಮಶ್ರೀ ನಾರಾಯಣಗುರು ಜಯಂತಿಯು ಎರಡನೇ ಶನಿವಾರ ಮತ್ತು ಡಿ.24–ಕ್ರಿಸ್‌ಮಸ್ ಈವ್ ನಾಲ್ಕನೇ ಶನಿವಾರ ಬರಲಿವೆ. ಹೀಗಾಗಿ, ನಿರ್ಬಂಧಿತ ರಜೆಗಳ ಪಟ್ಟಿಯಲ್ಲಿಲ್ಲ.

ರಜಾ ಪಟ್ಟಿ 10

ಚಿನಕುರಳಿ

ಪ್ರಕಾಶ್ ಶೆಟ್ಟಿ

ಹೊರಮಾವು ವಾರ್ಡ್‌ನ ಬಂಜಾರ ಲೇಔಟ್ ಮುಖ್ಯ ರಸ್ತೆಯಲ್ಲಿ ಸಂಚಾರ ಅಯೋಮಯ

ಹೊಂಡಮಯ ರಸ್ತೆಯಲ್ಲಿ ವಾಹನಗಳ ಈಜಾಟ

• ವಿಜಯಕುಮಾರ್ ಎಸ್.ಕೆ.

ಹೊಂಡದಿಂದ ಕೂಡಿರುವ ರಸ್ತೆಯಲ್ಲಿ ಸಂಚರಿಸುತ್ತಿರುವ ಆಟೋರಿಕ್ಷಾ –ಪ್ರಜಾವಾಣಿ ಚಿತ್ರಗಳು/ ಅನೂಪ್ ರಾಘ ಟಿ.

ಬೆಂಗಳೂರು: ಕೆರೆಯಂತಾದ ರಸ್ತೆ, ಹೊಂಡಗಳ ನಡುವೆ ವಾಹನಗಳ ಈಜಾಟ, ದಿನವೂ ಬಿದ್ದು- ಎದ್ದು ಹೋಗುವ ಬೈಕ್ ಸವಾರರು...

ಇದು ಹೊರಮಾವು ವಾರ್ಡ್‌ನ ಬಂಜಾರ ಲೇಔಟ್ ಮುಖ್ಯರಸ್ತೆಯ ಸ್ಥಿತಿ ಇದು. ವಾಹನಗಳ ಸಂಚಾರಕ್ಕಷ್ಟೇ ಅಲ್ಲ, ಪಾದಚಾರಿಗಳ ಸಂಚಾರಕ್ಕೂ ಸಾಧ್ಯವಾಗದಷ್ಟು ಹದಗೆಟ್ಟಿರುವ ರಸ್ತೆ ಇದು.

ಕಲ್ಕೆರೆ–ಅಗರ ಮುಖ್ಯರಸ್ತೆಯಿಂದ ಹೊರಮಾವು ಮುಖ್ಯರಸ್ತೆಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆ ಇದಾಗಿದೆ. ನಿತ್ಯ ಸಾವಿರಾರು ವಾಹನಗಳು ಸಂಚರಿಸುವ ಈ ರಸ್ತೆ ಅತ್ಯಂತ ಹೀನಾಯ ಸ್ಥಿತಿಗೆ ತಲುಪಿದೆ. ಒಂದೂವರೆ ಕಿ. ಮೀ. ಉದ್ದದ ಇಡೀ ರಸ್ತೆಯೇ ಹೊಂಡವಾಗಿ ಮಾರ್ಪಟ್ಟಿದೆ. ಅಲ್ಲಲ್ಲಿ ದೊಡ್ಡ ಗುಂಡಿಗಳಿದ್ದರೆ, ಮ್ಯಾನ್‌ಹೋಲ್‌ಗಳು ಎದ್ದು ನಿಂತಿವೆ. ಇವುಗಳನ್ನು ತಪ್ಪಿಸಿ ವಾಹನ ಚಾಲನೆ ಮಾಡಲು ಸಾಧ್ಯವಾಗದೆ ಜನ ಪರದಾಡುತ್ತಿದ್ದಾರೆ.

‘ಹೊಂಡಗಳ ನಡುವೆ ಮೊಳಕಾಲುದ್ದಕ್ಕೆ ನೀರು ಇಡೀ ರಸ್ತೆಯಲ್ಲಿ ಅಲ್ಲಲ್ಲಿ ನಿಂತಿದೆ. ಇದರ ನಡುವೆ ವಾಹನ ಚಾಲನೆ ಮಾಡುವಾಗ ಕೆಸರು ಮತ್ತು ನೀರಿನೊಳಗೆ ದ್ವಿಚಕ್ರ ವಾಹನಗಳ ಸವಾರರು ಪ್ರತಿನಿತ್ಯ ಬೀಳುತ್ತಿದ್ದಾರೆ. ಬೆಳಿಗ್ಗೆ ಕಚೇರಿ ತಲುಪುವ ಕಾತುರದಲ್ಲಿ ಸ್ವಲ್ಪ ವೇಗವಾಗಿ ಚಾಲನೆ ಮಾಡಿದರೂ ಬೀಳುವ ಅಪಾಯ ಇದೆ. ಕೆಲಸಕ್ಕೆಂದು ಹೊರಟವರು ರಸ್ತೆಯಲ್ಲಿನ ಕೆಸರಿನಲ್ಲಿ ಬಿದ್ದು ವಾಪಸ್ ಹೋಗುವುದು ನಿತ್ಯ ಸಾಮಾನ್ಯವಾಗಿದೆ’ ಎನ್ನುತ್ತಾರೆ ಸ್ಥಳೀಯರು.

ಇದೇ ರಸ್ತೆಯಲ್ಲೇ ಹಾದು ಹೋಗುವ ಶಾಲಾ ಮಕ್ಕಳೂ ಬೈಸಿಕಲ್‌ನಲ್ಲಿ ಬಂದು ಗುಂಡಿಗಳಲ್ಲಿ ಬೀಳುತ್ತಿದ್ದಾರೆ. ಕೈಕಾಲು ಮುರಿದುಕೊಂಡು ಆಸ್ಪತ್ರೆ ಸೇರುವುದು ನಿತ್ಯದ ಗೋಳಾಗಿದೆ ಎಂದು ಹೇಳಿದರು.

‘ನೀರಿನೊಳಗಿನ ಗುಂಡಿ ಮತ್ತು ಮ್ಯಾನ್‌ಹೋಲ್‌ಗಳಿಗೆ ಕಾರುಗಳು ಸಿಲುಕಿಕೊಳ್ಳುವುದು ನಿತ್ಯ ತಪ್ಪಿಲ್ಲ. ಎರಡು ವರ್ಷಗಳಿಂದಲೂ ರಸ್ತೆ ಹಾಳಾಗಿ ವಾಹನ ಸಂಚಾರಕ್ಕೆ ಯೋಗ್ಯವಾಗಿರಲಿಲ್ಲ. ದುರಸ್ತಿ ಮಾಡುವುದಾಗಿ ಹೇಳಿ ಎಲ್ಲವನ್ನೂ ಕಿತ್ತು ಬಿಸಾಡಲಾಗಿದೆ. ಬಳಿಕ ಮಳೆ ಶುರುವಾಗಿದ್ದು, ಕನಿಷ್ಠ ಸಂಚಾರ ಯೋಗ್ಯಗೊಳಿಸುವ ಗೋಜಿಗೂ ಬಿಬಿಎಂಪಿ ಅಧಿಕಾರಿಗಳು ಹೋಗಿಲ್ಲ’ ಎಂದು ದೂರಿದರು.

‘ಮೊದಲೇ ಪೆಟ್ರೋಲ್, ಡೀಸೆಲ್ ಮತ್ತು ಆಟೋಗ್ಯಾಸ್ ದರ ಹೆಚ್ಚಳವಾಗಿದೆ. ಈ ರಸ್ತೆಯಲ್ಲಿ ಮೊದಲ ಗೇರ್‌ನಲ್ಲೇ ಒಂದು ಕಿಲೋ ಮೀಟರ್ ತನಕ ಓಡಿಸಬೇಕು. ಗುಂಡಿಗೆ ಇಳಿದು ವಾಹನಗಳೂ ಹಾಳಾಗುತ್ತಿವೆ. ನಮ್ಮ ಕಷ್ಟ ಹೇಳ ತೀರದಾಗಿದೆ’ ಎಂದು ಆಟೋರಿಕ್ಷಾ ಚಾಲಕರು ಅಸಮಾಧಾನ ವ್ಯಕ್ತಪಡಿಸಿದರು.

‘ಅನಾರೋಗ್ಯಕ್ಕೆ ತುತ್ತಾದವರನ್ನು ತುರ್ತಾಗಿ ಆಸ್ಪತ್ರೆಗೆ ಕರೆದೊಯ್ಯಬೇಕೆಂದರೂ ಸಾಧ್ಯವಾಗುವುದಿಲ್ಲ. ಹೆರಿಗೆ ನೋವು ಕಾಣಿಸಿಕೊಂಡು ಮಹಿಳೆಯನ್ನು ಆಟೋರಿಕ್ಷಾದಲ್ಲಿ ಕೂರಿಸಿಕೊಂಡು ಈ ರಸ್ತೆಯಲ್ಲಿ ಹೋದರೆ ರಸ್ತೆ ಮಧ್ಯದಲ್ಲೇ ಹೆರಿಗೆಯಾಗುವ ಅಪಾಯ ಇದೆ’ ಎಂದರು.

ಹೊರ ವಲಯ ಒಳ ಬೇಗುದಿ

ಇರುವ ರಸ್ತೆಯನ್ನು ಕಿತ್ತು ಸಂಚಾರಕ್ಕೆ ಯೋಗ್ಯವಿಲ್ಲದಂತೆ ಮಾಡಲಾಗಿದೆ. ಸುತ್ತಮುತ್ತಲ ಬಡಾವಣೆ ಜನರ ಸಂಚಾರಕ್ಕೆ ಇದ್ದ ಮುಖ್ಯರಸ್ತೆಯಲ್ಲಿ ಸಂಚಾರ ಮಾಡುವುದೆಂದರೆ ಕಣ್ಣೀರು ಬರುತ್ತವೆ

–**ರವಿ,** ಬಂಜಾರ ಲೇಔಟ್ ನಿವಾಸಿ

ಹೊಂಡ, ಗುಂಡಿಗಳ ನಡುವೆ ರಸ್ತೆ ಎಲ್ಲಿದೆ ಎಂದು ಹುಡುಕಾಡಬೇಕಿದೆ. ಈ ರಸ್ತೆಯಲ್ಲಿ ಪ್ರಯಾಣಿಕರನ್ನು ಕೂರಿಸಿಕೊಂಡು ಆಟೋರಿಕ್ಷಾ ಚಾಲನೆ ಮಾಡಿದರೆ ನರಕ ನೆನಪಾಗುತ್ತದೆ

–**ಸುಬ್ರಹ್ಮಣ್ಯಗೌಡ,** ಆಟೋಚಾಲಕ

ರಸ್ತೆಗಳ ಅಭಿವೃದ್ಧಿಗೆ ₹3 ಕೋಟಿ ಮೊತ್ತದ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಮಳೆಯಿಂದಾಗಿ ಕಾಮಗಾರಿ ಸ್ಥಗಿತಗೊಂಡಿದೆ

–**ಚಂದ್ರಶೇಖರ್,** ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಹೊರಮಾವು

ಬಂಜಾರ ಲೇಔಟ್ ಮುಖ್ಯ ರಸ್ತೆಯಲ್ಲಿನ ಹೊಂಡದಲ್ಲಿ ಸಂಚರಿಸುತ್ತಿರುವ ವಾಹನಗಳು

ಕಲ್ಕೆರೆ– ಅಗರ ರಸ್ತೆಯೂ ಗುಂಡಿಮಯ

ಹೊರಮಾವು ಮುಖ್ಯರಸ್ತೆಯಿಂದ ಅಗರ ಮಾರ್ಗದಲ್ಲಿ ಹೆಣ್ಣೂರು ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯೂ ಗುಂಡಿಗಳ ಮಯವಾಗಿದೆ.

ಹೊರಮಾವು ಮುಖ್ಯ ರಸ್ತೆಯಿಂದ ಹೊರಟರೆ ನಾಲ್ಕು ಪಥದ ರಸ್ತೆಯೊಂದು ಎದುರಾಗುತ್ತದೆ. ಅದು 200 ಮೀಟರ್‌ಗೆ ಮುಕ್ತಾಯವಾಗುತ್ತದೆ. ಅಲ್ಲಿಂದ ಮುಂದಕ್ಕೆ ರಸ್ತೆ ಸಂಪೂರ್ಣ ಹಾಳಾಗಿದ್ದು, ಸಂಚಾರ ದುಸ್ತರವಾಗಿದೆ.

ಹೊಂಡದಲ್ಲಿ ಸಂಚರಿಸುತ್ತಿರುವ ಮಾರುತಿ ವ್ಯಾನ್

‘ತಳವಾರ ವಿರುದ್ಧ ಪುನಃ ತನಿಖೆ ಅನಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರಾಗಿದ್ದ ಎಚ್.ಯು.ತಳವಾರ ವಿರುದ್ಧದ ಭ್ರಷ್ಟಾಚಾರ ಮತ್ತು ಕರ್ತವ್ಯ ನಿರ್ಲಕ್ಷ್ಯ ಆರೋಪದ ಕುರಿತಂತೆ ಲೋಕಾಯುಕ್ತ ಸಂಸ್ಥೆ ತನಿಖೆ ನಡೆಸಿ ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಯಾವುದೇ ಆರೋಪಗಳು ಸಾಬೀತಾಗಿಲ್ಲ ಎಂಬ ಕಾರಣಕ್ಕೆ ತಳವಾರ ಅವರಿಗೆ ನಿಯಮಾನುಸಾರ ನಿವೃತ್ತಿ ಉಪದಾನಗಳನ್ನು ಬಿಡುಗಡೆ ಮಾಡುವಂತೆ ಉನ್ನತ ಶಿಕ್ಷಣ ಇಲಾಖೆಯು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಶಿಫಾರಸು ಮಾಡಿದೆ.

ಈ ಕುರಿತಂತೆ 2021ರ ಅಕ್ಟೋಬರ್ 8ರಂದು ಸಿಬ್ಬಂದಿ ಮತ್ತು ಸುಧಾರಣಾ ಇಲಾಖೆಗೆ ಬರೆಯಲಾದ ಎರಡು ಪುಟಗಳ ಟಿಪ್ಪಣಿಯಲ್ಲಿ, ‘ತಳವಾರ ವಿರುದ್ಧ ಪುನಃ ಇಲಾಖಾ ವಿಚಾರಣೆ ಅಗತ್ಯವಿಲ್ಲ’ ಎಂದು ಅಭಿಪ್ರಾಯ ಪಡಲಾಗಿದೆ.

‘ತಳವಾರ ವಿರುದ್ಧ ಕ್ರಮ ಜರುಗಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿ ನಿವೃತ್ತ ಉಪನ್ಯಾಸಕ ಆರ್. ನಾರಾಯಣ ಸ್ವಾಮಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಲೇವಾರಿ ವೇಳೆ, ‘ತಳವಾರ ವಿರುದ್ಧ ತನಿಖಾ ವರದಿಗಳನ್ನು ಆಧರಿಸಿ ಸರ್ಕಾರ ಮುಂದಿನ ಕ್ರಮ ಕೈಗೊಳ್ಳಬಹುದು’ ಎಂದು ಇತ್ತೀಚೆಗಷ್ಟೇ ಹೈಕೋರ್ಟ್, ಸರ್ಕಾರಕ್ಕೆ ಸೂಚಿಸಿತ್ತು.

‘ಸರ್ಕಾರ ವಜಾ ಮಾಡಿ’

ಒಂದನೇ ಪುಟದಿಂದ

‘ಎಲ್ಲ ಇಲಾಖೆಗಳ ಕಾಮಗಾರಿಗಳಲ್ಲಿ ಶೇ 40ರಷ್ಟು ಕಮಿಷನ್ ವಸೂಲು ಮಾಡಲಾಗುತ್ತಿದ್ದು, ಈ ಹಣ ಸಂಬಂಧಪಟ್ಟ ಇಲಾಖೆಗಳ ಸಚಿವರಿಗೆ ಹಾಗೂ ಶಾಸಕರು, ಸಂಸದರು ಮತ್ತು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳಿಗೆ ಸಲ್ಲಿಕೆಯಾಗುತ್ತಿದೆ ಎಂದು ಗುತ್ತಿಗೆದಾರರ ಸಂಘ ಆರೋಪಿಸಿದೆ. ಇದು ಕಾನೂನಿನ ಪ್ರಕಾರ ಲಂಚವಲ್ಲದೇ ಮತ್ತೇನು ಅಲ್ಲ. ಈ ಎಲ್ಲ ಸಂಗತಿಗಳನ್ನು ಇದೇ ಜುಲೈ 6ರಂದು ಪ್ರಧಾನಿಗೆ ಬರೆದ ಪತ್ರದಲ್ಲಿ ತಿಳಿಸಿರುವ ಸಂಘ, ಈ ಹಗರಣದ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದೂ ಆಗ್ರಹಿಸಿತ್ತು. ಪ್ರಧಾನಿಗೆ ಬರೆದ ಪತ್ರದಲ್ಲಿದ್ದ ವಿವರಗಳನ್ನು ಇದೇ 19 ಮತ್ತು 20ರಂದು ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಸೇರಿದಂತೆ ಮುದ್ರಣ ಮತ್ತು ಸುದ್ದಿ ಮಾಧ್ಯಮಗಳು ಪ್ರಕಟಿಸಿವೆ’ ಎಂದು ರಾಜ್ಯಪಾಲರಿಗೆ ಬರೆದ ಪತ್ರದಲ್ಲಿ ತಿಳಿಸಿರುವ ನಿಯೋಗ, ಈ ಹಗರಣದ ಕುರಿತು 19ರ ‘ಪ್ರಜಾವಾಣಿ’ ಸಂಚಿಕೆಯಲ್ಲಿ ಪ್ರಕಟವಾದ ವಿಶೇಷ ವರದಿ ಮತ್ತು ಡೆಕ್ಕನ್ ಹೆರಾಲ್ಡ್ ನ. 24ರ ಸಂಚಿಕೆಯಲ್ಲಿ ಪ್ರಕಟವಾದ ಸಂಪಾದಕೀಯದ ಪ್ರತಿಯನ್ನು ಮನವಿ ಜೊತೆ ಸಲ್ಲಿಸಿದೆ.

’ಗುತ್ತಿಗೆದಾರರು ದೂರು ಸಲ್ಲಿಸಿ ನಾಲ್ಕು ತಿಂಗಳು ಕಳೆದರೂ ಪ್ರಧಾನಿ ಮೌನ ವಹಿಸಿದ್ದಾರೆ. ರಾಜ್ಯ ಸರ್ಕಾರದ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳಲು ಮುಂದಾಗಿಲ್ಲ. ಇದನ್ನು ನೋಡಿದರೆ ಅಕ್ರಮದಲ್ಲಿ ಕೇಂದ್ರ ಸರ್ಕಾರ ಕೂಡ ಕೈ ಜೋಡಿಸಿದಂತೆ, ಭ್ರಷ್ಟಾಚಾರದ ಜೊತೆ ರಾಜಿ ಮಾಡಿಕೊಂಡಂತೆ ಕಾಣುತ್ತಿದೆ. ಇಲ್ಲದೇ ಇದ್ದರೆ, ಈ ದೂರನ್ನು ಗಂಭೀರವಾಗಿ ಪರಿಗಣಿಸಿ ಕೇಂದ್ರ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿತ್ತು ಎಂದೂ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

‘ಅಕ್ರಮ ಹಣ ವರ್ಗಾವಣೆ ಮತ್ತು ಬೃಹತ್ ಭ್ರಷ್ಟಾಚಾರದ ಬಗ್ಗೆ ಕಾನೂನು ಕ್ರಮ ತೆಗೆದುಕೊಳ್ಳಲು ರಾಜ್ಯ ಸರ್ಕಾರ, ರಾಜ್ಯ ಪೊಲೀಸ್, ಸಿಬಿಐ, ಇಡಿ, ಆದಾಯ ತೆರಿಗೆ ಇಲಾಖೆ ಮತ್ತು ಇತರ ಸಂಬಂಧಿಸಿದ ಇಲಾಖೆಗಳು ಕೂಡ ವಿಫಲವಾಗಿವೆ. ಅಕ್ರಮ ಹಣ ವರ್ಗಾವಣೆ, ಕಮಿಷನ್ ಪರ್ಸಂಟೇಜ್ ಅಥವಾ ಕಿಕ್ ಬ್ಯಾಕ್ ಪಡೆಯುವುದು ಭ್ರಷ್ಟಾಚಾರ ತಡೆ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆ ಅನ್ವಯ ಅಪರಾಧ. ಪ್ರಧಾನಿ ಮತ್ತು ಇತರ ಸಂಬಂಧಿಸಿದ ಇಲಾಖೆಗಳು ಯಾವುದೇ ಕ್ರಮ ತೆಗೆದುಕೊಳ್ಳದಿರುವುದು ರಾಜ್ಯದ ಜನರ ಆತಂಕಕ್ಕೆ ಕಾರಣವಾಗಿದೆ’ ಎಂದೂ ಕಾಂಗ್ರೆಸ್ ಹೇಳಿದೆ.

33 ವಿದ್ಯಾರ್ಥಿಗಳಿಗೆ ಕೋವಿಡ್

ಒಂದನೇ ಪುಟದಿಂದ

ಮಹದೇವಪುರ ವಲಯದಲ್ಲಿ ವಾಸವಿದ್ದ ಇಬ್ಬರು ವಿದ್ಯಾರ್ಥಿಗಳಿಗೆ ಕೋವಿಡ್ ಲಕ್ಷಣಗಳು ಕಾಣಿಸಿಕೊಂಡಿದ್ದವು. ಅವರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಯಿತು. ಕೋವಿಡ್ ಪೀಡಿತರಾಗಿರುವುದು ದೃಢಪಡುತ್ತಿದ್ದಂತೆ ಎಲ್ಲ ನೇರ ಹಾಗೂ ಪರೋಕ್ಷ ಸಂಪರ್ಕಿತರನ್ನು ಪರೀಕ್ಷೆ ಮಾಡಲಾಗಿದೆ.

‘ಶಿಕ್ಷಣ ಸಂಸ್ಥೆಯ ಎಲ್ಲ ಸಿಬ್ಬಂದಿ ಕೋವಿಡ್ ಲಸಿಕೆ ಪಡೆದಿದ್ದಾರೆ. ಸೋಂಕಿತರು ಲಕ್ಷಣ ರಹಿತರಾಗಿದ್ದಾರೆ. ಹೀಗಾಗಿ, ಆಸ್ಪತ್ರೆಗೆ ದಾಖಲಿಸಲಿಲ್ಲ. ಸಂಪರ್ಕಿತರಿಗೆ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದ್ದು, ಶಿಕ್ಷಣ ಸಂಸ್ಥೆಯನ್ನು ಸೀಲ್‌ಡೌನ್ ಮಾಡಲಾಗಿದೆ. ಸೋಂಕಿತ ವಿದ್ಯಾರ್ಥಿಗಳಿಗೆ ಆರೈಕೆ ಒದಗಿಸುತ್ತಿರುವ ಕೇಂದ್ರ ಹಾಗೂ ವಸತಿ ನಿಲಯವನ್ನು ಪ್ರತ್ಯೇಕಿಸಲಾಗಿದೆ’ ಎಂದು ಬೆಂಗಳೂರು ನಗರ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಜಿ. ಶ್ರೀನಿವಾಸ್ ತಿಳಿಸಿದರು.

‘ಕೋವಿಡ್ ಮಾರ್ಗಸೂಚಿ ಅನುಸಾರ ಕೆಲ ಪಾಲಕರು ಸಂಸ್ಥೆಯಿಂದ ವಿದ್ಯಾರ್ಥಿಗಳನ್ನು ಮನೆಗೆ ಕರೆದೊಯ್ದಿದ್ದಾರೆ. ವೈದ್ಯಕೀಯ ತಂಡವು ಪರಿಶೀಲನೆ ನಡೆಸಿ, ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದೆ’ ಎಂದು ವಿವರಿಸಿದರು.

ನೀಟ್ ಪಿ.ಜಿ: ಆದಾಯಮಿತಿ ಪರಿಷ್ಕರಣೆಗೆ ಸಮಿತಿ– ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಸ್ನಾತಕೋತ್ತರ ವೈದ್ಯಕೀಯ (ಪಿ.ಜಿ) ಕೋರ್ಸ್‌ಗೆ ‘ನೀಟ್’ ಮೂಲಕ ಪ್ರವೇಶಾತಿಗೆ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ (ಇಡಬ್ಲ್ಯುಎಸ್) ನಿಗದಿಪಡಿಸಿರುವ ವಾರ್ಷಿಕ ₹ 8 ಲಕ್ಷ ಆದಾಯ ಮಿತಿಯನ್ನು ನಾಲ್ಕು ವಾರಗಳ ಅವಧಿಯಲ್ಲಿ ಪರಿಷ್ಕರಿಸಲಾಗುವುದು ಎಂದು ಕೇಂದ್ರ ಸರ್ಕಾರ ಗುರುವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ಸೂರ್ಯಕಾಂತ್, ವಿಕ್ರಂ ನಾಥ್ ಅವರಿದ್ದ ಪೀಠಕ್ಕೆ ಈ ಮಾಹಿತಿ ನೀಡಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ‘ಆದಾಯ ಮಿತಿ ಮಾನದಂಡ ಪರಿಷ್ಕರಿಸಲು ಸಮಿತಿ ರಚಿಸಲಾಗುವುದು’ ಎಂದು ತಿಳಿಸಿದರು.

ಪಿ.ಜಿ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಅಲ್ಲಿಯವರೆಗೂ ಮುಂದೂಡಲಾಗುವುದು ಎಂದೂ ತಿಳಿಸಿದರು. ಈ ಹಂತದಲ್ಲಿ ಪೀಠವು, ಶೈಕ್ಷಣಿಕ ವರ್ಷ ವಿಳಂಬವಾಗುವ ಕಾರಣ ಮೀಸಲಾತಿ ಪರಿಷ್ಕರಣೆಯನ್ನು ಮುಂದಿನ ವರ್ಷದಿಂದ ಜಾರಿಗೊಳಿಸಬಹುದು ಎಂದು ಸಲಹೆ ಮಾಡಿತು. ಇದಕ್ಕೆ ‘ತಾವು ಸರ್ಕಾರದಿಂದ ಸೂಚನೆ ಪಡೆಯಬೇಕಿದೆ’ ಎಂದು ಮೆಹ್ತಾ ಪ್ರತಿಕ್ರಿಯಿಸಿದರು.

‘ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವುದು ಪ್ರಗತಿಪರ ಮತ್ತು ಪ್ರಾಯೋಗಿಕವಾದುದು. ಆದರೆ, ಇದರ ಸ್ವರೂಪ ಯಾವ ರೀತಿ ಇರಬೇಕು ಎಂಬುದೇ ಈಗಿರುವ ಪ್ರಶ್ನೆ’ ಎಂದೂ ಪೀಠ ಅಭಿಪ್ರಾಯಪಟ್ಟಿತು.

ಅರ್ಜಿದಾರರನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಅರವಿಂದ ದಾತಾರ್ ಅವರು, ಮಾಸಿಕ ₹ 70 ಸಾವಿರ ಆದಾಯ ಉಳ್ಳವರನ್ನು ಇಡಬ್ಲ್ಯುಎಸ್ ಎಂದು ಗುರುತಿಸಬಹುದೇ ಎಂಬ ಪ್ರಶ್ನೆಯೂ ಇದೆ ಎಂದು ಅಹವಾಲು ಸಲ್ಲಿಸಿದರು.

ಇದನ್ನು ಜನವರಿ ತಿಂಗಳಲ್ಲಿ ವಿಚಾರಣೆಗೆ ತೆಗೆದುಕೊಳ್ಳಲಾಗುವುದು ಎಂದು ಪೀಠವು ತಿಳಿಸಿತು.

ಅಖಿಲ ಭಾರತ ಕೋಟಾ ಸೀಟುಗಳಿಗೆ ಒಬಿಸಿ ಮತ್ತು ಇಡಬ್ಲ್ಯುಎಸ್ ವರ್ಗದ ಮೀಸಲಾತಿ ಸಿಂಧುತ್ವ ಕುರಿತು ತೀರ್ಮಾನ ಕೈಗೊಳ್ಳುವವರೆಗೂ ನೀಟ್–ಪಿ.ಜಿ ಕೌನ್ಸೆಲಿಂಗ್ ಮುಂದೂಡಬೇಕು ಎಂದು ಕೋರ್ಟ್ ಅ. 25 ರಂದು ಕೇಂದ್ರಕ್ಕೆ ನಿರ್ದೇಶಿಸಿತ್ತು.

ನೌಕಾಪಡೆಗೆ ‘ಐಎನ್‌ಎಸ್ ವೇಲಾ’ ಹಸ್ತಾಂತರ

ಮುಂಬೈ: ಮಜಗಾಂವ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್ (ಎಂಡಿಎಲ್) ನಿರ್ಮಿತ ‘ಸ್ಕಾರ್ಪಿಯಾನ್’ ಸರಣಿಯ ನಾಲ್ಕನೇ ಜಲಾಂತರ್ಗಾಮಿ ‘ಐಎನ್‌ಎಸ್ ವೇಲಾ’ವನ್ನು ಭಾರತೀಯ ನೌಕಾಪಡೆಗೆ ಹಸ್ತಾಂತರಿಸಲಾಗಿದೆ.

‘ಪ್ರಾಜೆಕ್ಟ್ ಪಿ–75’ಅಡಿ ನಿರ್ಮಿಸಲಾಗಿರುವ ಈ ಜಲಾಂತರ್ಗಾಮಿ ಕಾರ್ಯಾಚರಣೆಗೆ ಶೀಘ್ರವೇ ಚಾಲನೆ ನೀಡಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಕೋವಿಡ್ ಎರಡನೇ ಡೋಸ್ ನೀಡಿಕೆ ಹೆಚ್ಚಿಸಲು ಸಿ.ಎಂ ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಲಸಿಕೆ ಎರಡನೇ ಡೋಸ್ ನೀಡಿಕೆಯ ಸರಾಸರಿ ಪ್ರಮಾಣ ಹೆಚ್ಚಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದರು.

ಕೋವಿಡ್ ಲಸಿಕೆ ಅಭಿಯಾನದ ಪ್ರಗತಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳ ಜತೆ ಗುರುವಾರ ವಿಡಿಯೊ ಸಂವಾದ ನಡೆಸಿದ ಅವರು, ಮೊದಲ ಡೋಸ್ ನೀಡಿಕೆ ಸರಾಸರಿ ಶೇ 90 ರಷ್ಟು ಇದೆ. ಎರಡನೇ ಡೋಸ್ ಶೇ 57 ರಷ್ಟಿದೆ. ಡಿಸೆಂಬರ್ ಕೊನೆಯೊಳಗೆ ಎರಡನೇ ಡೋಸ್ ಶೇ 70 ಕ್ಕೆ ತಲುಪಬೇಕು ಎಂದು ಹೇಳಿದರು.

ಎರಡನೇ ಡೋಸ್ ಲಸಿಕೆ ಹಾಕುವಲ್ಲಿ ಕಲಬುರಗಿ ಜಿಲ್ಲೆ ಹಿಂದುಳಿದಿದೆ. ಬೆಂಗಳೂರು ನಗರ ಜಿಲ್ಲೆ ಪ್ರಥಮ ಸ್ಥಾನದಲ್ಲಿದೆ. ಎಲ್ಲ ಜಿಲ್ಲಾಧಿಕಾರಿಗಳು ಒಂದು ಗಂಟೆ ಸಮಯವನ್ನು ಲಸಿಕಾ ಕಾರ್ಯಕ್ರಮದ ಪ್ರಗತಿಗೆ ಮೀಸಲಿಡಬೇಕು. ತಂಡಗಳನ್ನು ರಚಿಸಿ ಗ್ರಾಮಗಳಿಗೆ ಕಳುಹಿಸಿ ಲಸಿಕೆ ಪಡೆಯಲು ಜನರ ಮನವೊಲಿಸಬೇಕು ಎಂದು ಬೊಮ್ಮಾಯಿ ತಿಳಿಸಿದರು.

ಗ್ರಾಮ ಲೆಕ್ಕಿಗರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕಂದಾಯ ನಿರೀಕ್ಷಕರು ಹಾಗೂ ಅಗತ್ಯ ಬಿದ್ದಲ್ಲಿ ತಹಶೀಲ್ದಾರರನ್ನು ಈ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ಜನರೊಂದಿಗೆ ನಿತ್ಯ ವ್ಯವಹರಿಸುವ ಸ್ವಯಂ ಸೇವಕರು, ಶಿಕ್ಷಕರು, ಧಾರ್ಮಿಕ ಗುರುಗಳು, ಸಹಕಾರಿ ಸಂಘಗಳ ಕಾರ್ಯದರ್ಶಿಗಳು, ಬ್ಯಾಂಕಿನ ವ್ಯವಸ್ಥಾಪಕರನ್ನು ಬಳಸಿಕೊಂಡು ಲಸಿಕಾ ಕಾರ್ಯದ ಮಹತ್ವ ತಿಳಿಸುವ ಕಾರ್ಯ ಆಗಬೇಕು ಎಂದರು.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,55,611 ▲ ಒಟ್ಟು ಸೋಂಕಿತರು (12,55,440 ನಿನ್ನೆಯ ವಿವರ)

5,141 ▲	12,34,143 ▲	16,326
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	171	▲
ಗುಣಮುಖ	147	▼
ಸಾವು	00	▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ರಾಜ್ಯ ಕೋವಿಡ್ ಅಂಕಿ–ಅಂಶ

29,94,561 ▲ ಒಟ್ಟು ಸೋಂಕಿತರು (29,94,255 ನಿನ್ನೆಯ ವಿವರ)

6,492 ▲ ಸಕ್ರಿಯ ಪ್ರಕರಣಗಳು

29,49,853 ▲ ಗುಣಮುಖರಾದವರು

38,187 ಒಟ್ಟು ಸಾವು ▲

ದಿನದ ಏರಿಕೆ

ಹೊಸ ಪ್ರಕರಣ	306	▲
ಗುಣಮುಖ	224	▼
ಸಾವು	02	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	26 ಕೋಟಿ ▲	3.45ಕೋಟಿ
ಸಕ್ರಿಯ ಪ್ರಕರಣ	1.97 ಕೋಟಿ ▲	1.09 ಲಕ್ಷ ▼
ಗುಣಮುಖ	23.51 ಕೋಟಿ ▲	3.39 ಕೋಟಿ
ಸಾವು	51.97 ಲಕ್ಷ ▲	4.66 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	6.38 ಲಕ್ಷ ▲	9,119 ▼
ಗುಣಮುಖ	4.73 ಲಕ್ಷ ▲	10,264 ▼
ಸಾವು	8,270 ▲	296 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 1.04 ಲಕ್ಷ ಅಮೆರಿಕ ▲; 43,676 ಬ್ರಿಟನ್ ▲; 73,966 ಜರ್ಮನಿ ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 93.86 ಅಮೆರಿಕ ▲; 9.96 ಬ್ರಿಟನ್; 10.40 ರಷ್ಯಾ

(*ರಾತ್ರಿ 12 ಗಂಟೆಯವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು: 1.40 ಲಕ್ಷ ಮಹಾರಾಷ್ಟ್ರ; 36,415 ತಮಿಳುನಾಡು ▲; 38,353 ಕೇರಳ ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 66.32 ಮಹಾರಾಷ್ಟ್ರ ▲; 51.13 ಕೇರಳ ▲; 27.22 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

66 ವಿದ್ಯಾರ್ಥಿಗಳಲ್ಲಿ ಕೋವಿಡ್ ದೃಢ

ಧಾರವಾಡ: ಇಲ್ಲಿನ ಸತ್ತೂರಿನಲ್ಲಿರುವ ಎಸ್‌ಡಿಎಂ ವೈದ್ಯಕೀಯ ಕಾಲೇಜಿನಲ್ಲಿ ಗುರುವಾರದವರೆಗೆ 66 ವಿದ್ಯಾರ್ಥಿಗಳಲ್ಲಿ ಕೋವಿಡ್ ದೃಢಪಟ್ಟಿದೆ. ಹೀಗಾಗಿ ಎರಡು ವಿದ್ಯಾರ್ಥಿನಿಲಯಗಳನ್ನು ಜಿಲ್ಲಾಡಳಿತ ಸೀಲ್‌ಡೌನ್ ಮಾಡಿದೆ.

ಸೋಂಕಿತರ ಪ್ರಮಾಣ ಹೆಚ್ಚಳವಾಗುತ್ತಿರುವುದರಿಂದ ಕಾಲೇಜು ಆವರಣಕ್ಕೆ ಗುರುವಾರ ಜಿಲ್ಲಾಧಿಕಾರಿ ನಿತೇಶ್ ಕೆ.ಪಾಟೀಲ ಭೇಟಿ ನೀಡಿದ್ದು, ಕಾಲೇಜು ಆಡಳಿತ ಮಂಡಳಿಯೊಂದಿಗೆ ಚರ್ಚಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ‘ಮೂರು ದಿನಗಳಿಂದ ಕಾಲೇಜಿನಲ್ಲಿ ಸೋಂಕಿತರ ಪ್ರಮಾಣ ಏರಿಕೆಯಾಗುತ್ತಿದೆ. ಕಾಲೇಜಿನ ಎಲ್ಲಾ 400ವಿದ್ಯಾರ್ಥಿಗಳು, 3 ಸಾವಿರ ಸಿಬ್ಬಂದಿಯ ಮೂಗು, ಗಂಟಲು ದ್ರವದ ಮಾದರಿ ಸಂಗ್ರಹಿಸಿ ತಪಾಸಣೆಗೆ ಒಳಪಡಿಸಲಾಗಿದೆ. 300 ವಿದ್ಯಾರ್ಥಿಗಳ ವರದಿ ಬಂದಿದ್ದು, 66 ವಿದ್ಯಾರ್ಥಿಗಳಿಗೆ ಸೋಂಕು ದೃಢಪಟ್ಟಿದೆ. ಉಳಿದವರ ವರದಿ ಬರಬೇಕಾಗಿದೆ’ ಎಂದರು.

‘ಕಳೆದ 17ರಂದು ಕಾಲೇಜಿನ ಕಲಾಕ್ಷೇತ್ರದಲ್ಲಿ ನಡೆದಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಹಲವರಲ್ಲಿ ಸೋಂಕು ಕಾಣಿಸಿಕೊಂಡಿದೆ. ಸೋಂಕಿತರು ಎರಡು ಡೋಸ್ ಲಸಿಕೆ ಪಡೆದಿದ್ದು, ತೀವ್ರತರದ ರೋಗ ಲಕ್ಷಣಗಳು ಕಂಡುಬಂದಿಲ್ಲ’ ಎಂದು ಮಾಹಿತಿ ನೀಡಿದರು.

ನಗರದಲ್ಲಿ ಇಂದು

ಚಿಂತನ ಗೋಷ್ಠಿ: ‘ಸಂವಿಧಾನ ಬಂದು 72 ವರ್ಷ, ಬದಲಾಗದ ಶೋಷಿತರ ಬದುಕು, ಸಾನಿಧ್ಯ: ಬೇಲಿಮಠದ ಶಿವರುದ್ರ ಸ್ವಾಮೀಜಿ, ಅಧ್ಯಕ್ಷತೆ: ಡಾ.ಸಿ. ಸೋಮಶೇಖರ, ಉದ್ಘಾಟನೆ: ಚಿ.ನಾ.ರಾಮು, ಉಪಸ್ಥಿತಿ: ನಾಗರಾಜ ಬಳ್ಳೇಕೆರೆ, ಆಯೋಜನೆ: ಅಖಿಲ ಭಾರತ ದಲಿತ ಕ್ರಿಯಾ ಸಮಿತಿ, ಸ್ಥಳ: ಮೌರ್ಯ ಹೋಟೆಲ್, ಗಾಂಧಿನಗರ, ಬೆಳಿಗ್ಗೆ 10.30.

ಕನ್ನಡ ರಾಜ್ಯೋತ್ಸವ: ಉದ್ಘಾಟನೆ: ಸುನಿಲ್ ಕುಮಾರ್, ಮುಖ್ಯ ಅತಿಥಿಗಳು: ನೀರಜ್ ಪಾಟೀಲ, ಕಮಲಾ ಹಂಪನಾ, ಗೀತಾ ರಾಮಾನುಜಮ್, ಭುವನೇಶ್ವರಿ ಹೆಗಡೆ, ಅಧ್ಯಕ್ಷತೆ: ವನಮಾಲಾ ಸಂಪನ್ನಕುಮಾರ್, ಕೇಶವ ಪ್ರಸಾದ್ ಮುಳಿಯ, ಆಯೋಜನೆ: ಮುಳಿಯ ಫೌಂಡೇಷನ್ ಮತ್ತು ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ಮಣಿಪಾಲ್ ಸೆಂಟರ್, ಡಿಕೆನ್ಸನ್ ರಸ್ತೆ, ಬೆಳಿಗ್ಗೆ 10.30

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ: ಮಹೇಶ ಜೋಶಿ, ಉಪಸ್ಥಿತಿ: ಸುನಿಲ್ ಕುಮಾರ್, ಮನು ಬಳಿಗಾರ್, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ಕಚೇರಿ, ಚಾಮರಾಜಪೇಟೆ, ಬೆಳಿಗ್ಗೆ 11

‘ಸಂವಿಧಾನ ಗೌರವ ಅಭಿಯಾನ’: ಗೋವಿಂದ ಕಾರಜೋಳ, ಎಸ್. ಮುನಿಸ್ವಾಮಿ, ಪಿ. ರಾಜೀವ್, ಅರುಣ್ ಕುಮಾರ್, ಛಲವಾದಿ ನಾರಾಯಣ ಸ್ವಾಮಿ, ಆಯೋಜನೆ: ಬಿಜೆಪಿ, ಸ್ಥಳ: ಜಗನ್ನಾಥ ಭವನ, ಮಲ್ಲೇಶ್ವರ, ಬೆಳಿಗ್ಗೆ 11

ಮಂಡಿಚಿಪ್ಪು ಬದಲಾವಣೆ ಕುರಿತು ವೆಬಿನಾರ್: ಅತ್ಯಾಧುನಿಕ ತಂತ್ರಜ್ಞಾನದ ಬಳಕೆ, ಮಾತನಾಡುವವರು: ಡಾ.ಆರ್.ಡಿ. ಚಕ್ರವರ್ತಿ, ಡಾ. ಸಂಜಯ್ ಪ್ರಸಾದ್ ಹೆಗಡೆ, ಡಾ.ವೈ.ಎಸ್. ಶಿವಕುಮಾರ್, ಡಾ. ರಾಘವೇಂದ್ರ, ಆಯೋಜನೆ: ಮಣಿಪಾಲ್ ಆಸ್ಪತ್ರೆಗಳ ಸಮೂಹ, ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’, ಸಂಜೆ 5.30 (ಆನ್‌ಲೈನ್ ಕಾರ್ಯಕ್ರಮ)

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ (ಎಐಸಿಸಿ) ಶಿಸ್ತು ಪಾಲನಾ ಸಮಿತಿ ಸದಸ್ಯರಾಗಿ ಆಯ್ಕೆಯಾಗಿರುವ ಶಾಸಕ ಜಿ. ಪರಮೇಶ್ವರ ಅವರನ್ನು ಕಾಂಗ್ರೆಸ್ ಮುಖಂಡರಾದ ಮಾಗಡಿ ಜಯರಾಮ್, ಪುನೀತ್, ಜಗದೀಶ್ ಹಾಗೂ ಉದ್ಯಮಿ ಗೌತಮ್ ನಾರಾಯಣಮೂರ್ತಿ ಅಭಿನಂದಿಸಿದರು.

ಎರಡನೇ ದಿನವೂ ಐ.ಟಿ ಶೋಧ

ತಿಪಟೂರು: ನಗರದ ಎಪಿಎಂಸಿಯ ಹಲವು ವರ್ತಕರ ಮನೆ, ಕಚೇರಿ ಮತ್ತು ಅಂಗಡಿಗಳಲ್ಲಿ ಆದಾಯ ತೆರಿಗೆ (ಐ.ಟ) ಅಧಿಕಾರಿಗಳ ದಾಖಲೆ ಪರಿಶೀಲನೆ ಎರಡನೇ ದಿನವಾದ ಗುರುವಾರವೂ ಮುಂದುವರಿದಿದೆ.

ಎಪಿಎಂಸಿ ಮಾರುಕಟ್ಟೆಯ ಕೊಬ್ಬರಿ ವರ್ತಕ ಹಾಗೂ ರವಾನೆದಾರ ಬಿ.ನಂಜಾಮರಿ, ಜಿ.ರುದ್ರಯ್ಯ ಟ್ರೇಡರ್ಸ್, ಸಂಪಿಗೆ ಟ್ರೇಡರ್ಸ್, ವಿ.ಪಿ ಟೇಡರ್ಸ್, ಗಣೇಶ್ ಟ್ರೇಡರ್ಸ್ ಅಂಡ್ ಕೊ–ಅಪರೇಟಿವ್, ಬಿ.ಆರ್. ಸುಂದ್ರಣ್ಣ ಟ್ರೇಡರ್ಸ್ ಮಾಲೀಕ ಉಮೇಶ್ ಬೆಳ್ಳೂರ್ ಅವರ ಮನೆ ಹಾಗೂ ಅಂಗಡಿಗಳ ಮೇಲೆ ಬುಧವಾರ ಬೆಳಿಗ್ಗೆ ಏಕಕಾಲಕ್ಕೆ ಐ.ಟಿ ಅಧಿಕಾರಿಗಳು ಪರಿಶೀಲನೆ ಆರಂಭಿಸಿದ್ದಾರೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಔಷಧ ಕೊರತೆ

ಬೆಂಗಳೂರು: ಪ್ರಸಕ್ತ ಹಣಕಾಸು ವರ್ಷದ ಔಷಧ ಖರೀದಿಸುವಲ್ಲಿ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮವು (ಕೆಎಸ್‌ಎಂಎಸ್‌ಸಿಎಲ್) ವಿಫಲವಾಗಿದೆ. ಇದರಿಂದಾಗಿ, ಸಮುದಾಯ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಲವು ಔಷಧಗಳ ಕೊರತೆಯಾಗಿದೆ.

ರಾಜ್ಯ ಸರ್ಕಾರದ ಎಲ್ಲ ಆರೋಗ್ಯ ಕೇಂದ್ರಗಳಿಗೆ ಪೂರೈಸಲು ವೈದ್ಯಕೀಯ ಉಪಕರಣಗಳು ಮತ್ತು ಔಷಧಗಳನ್ನು ಕೆಎಸ್‌ಎಂಎಸ್‌ಸಿಎಲ್ ಖರೀದಿಸುತ್ತದೆ. ಆದರೆ, 2021–22ನೇ ಸಾಲಿನಲ್ಲಿ ಬೇಕಾಗಿದ್ದ ಅಗತ್ಯ ಔಷಧಗಳನ್ನು ಕೆಎಸ್‌ಎಂಎಸ್‌ಸಿಎಲ್ ಇನ್ನೂ ಖರೀದಿಸಬೇಕಾಗಿದೆ.

ಹೀಗಾಗಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮಧುಮೇಹ ರೋಗಿಗಳಿಗೆ ನೀಡುವ ಇನ್ಸುಲಿನ್ ಮತ್ತು ಪ್ಯಾರಾಸಿಟಮಾಲ್ ಸೇರಿದಂತೆ ಹಲವು ಔಷಧಗಳು ಲಭ್ಯವಾಗುತ್ತಿಲ್ಲ.

ಅಗತ್ಯ ಔಷಧಗಳ ಖರೀದಿ ಕುರಿತು ಬುಧವಾರವಷ್ಟೇ ಸರಬರಾಜುದಾರರಿಂದ ಟೆಂಡರ್ ಕೋಟೇಷನ್‌ಗಳನ್ನು ಸ್ವೀಕರಿಸಲು ಕೆಎಸ್‌ಎಂಎಸ್‌ಸಿಎಲ್ ಅಧಿಕಾರಿಗಳು ಸಭೆ ನಡೆಸಿದರು.

ರಾಷ್ಟ್ರೀಯ ಉಚಿತ ಔಷಧಿ ಯೋಜನೆ (ಎನ್‌ಎಫ್‌ಡಿಎಸ್) ಅಡಿಯಲ್ಲಿ 2021–22ನೇ ಸಾಲಿನಲ್ಲಿ ಮಂಜೂರಾಗಿದ್ದ ₹130 ಕೋಟಿ ಮೊತ್ತದಲ್ಲಿ ಕೇವಲ ₹16 ಕೋಟಿ ಬಿಡುಗಡೆ ಮಾಡಲಾಗಿದೆ.

ಔಷಧಗಳ ಕೊರತೆಯನ್ನು ನೀಗಿಸಲು ಜಿಲ್ಲೆಗಳಿಗೆ ನೇರವಾಗಿ ಹಣ ಬಿಡುಗಡೆ ಮಾಡಲಾಗುತ್ತಿದೆ. ಎನ್‌ಎಫ್‌ಡಿಎಸ್ ಅಡಿಯಲ್ಲಿ ಶೇಕಡ 20ರಷ್ಟು ಮಾತ್ರ ಹಣ ಬಿಡುಗಡೆ ಮಾಡಬಹುದು. ಅಂದರೆ, ₹26 ಕೋಟಿ ನೀಡಬಹುದು ಎಂದು ಆರೋಗ್ಯ ಇಲಾಖೆ ಮೂಲಗಳು ತಿಳಿಸಿವೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್, ‘ಕೋವಿಡ್‌ನಿಂದಾಗಿ ಔಷಧ ಸಂಗ್ರಹ ವಿಳಂಬವಾಗಿದೆ. 2019–20ರ ಮೊತ್ತವನ್ನು 2021ರ ಜನವರಿಯಿಂದ ಬಿಡುಗಡೆ ಮಾಡಲಾಗುತ್ತಿದೆ. 2021ರ ಬಜೆಟ್‌ಗೆ ಇತ್ತೀಚೆಗೆ ಅನುಮೋದನೆ ನೀಡಲಾಗಿದ್ದು, ಟೆಂಡರ್‌ಗಳನ್ನು ಇನ್ನೂ ಕರೆಯಬೇಕಾಗಿದೆ’ ಎಂದು ತಿಳಿಸಿದರು.

ಸಂಪುಟ ಸಭೆಯಲ್ಲಿ ಪ್ರಸ್ತಾವನೆ ಮುಂದಿಟ್ಟ ಆರೋಗ್ಯ ಸಚಿವ

ಚಿಕ್ಕಬಳ್ಳಾಪುರಕ್ಕೆ 2 ಆಸ್ಪತ್ರೆ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರಿನಲ್ಲಿ ತಾಲ್ಲೂಕು ಮಟ್ಟದ ಆಸ್ಪತ್ರೆ ಮತ್ತು ಸಿಬ್ಬಂದಿಗೆ ವಸತಿ ನಿಲಯ ಸ್ಥಾಪಿಸಬೇಕೆಂಬ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅವರ ಪ್ರಸ್ತಾವನೆಯ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಸಚಿವರಿಂದಲೇ ತೀವ್ರ ಆಕ್ಷೇಪ ವ್ಯಕ್ತವಾಯಿತು.

ಗುರುವಾರ ಸಂಜೆ ನಡೆದ ಸಂಪುಟ ಸಭೆಯಲ್ಲಿ ಪ್ರಸ್ತಾವನೆ ಮುಂದಿಟ್ಟ ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ಗೌರಿಬಿದನೂರು ಆಸ್ಪತ್ರೆ ಜತೆಗೆ, ತಮ್ಮ ಉಸ್ತುವಾರಿ ಜಿಲ್ಲೆಯ ಮಂಚೇನಹಳ್ಳಿಯಲ್ಲಿ ಹೊಸ ತಾಲ್ಲೂಕು ಆಸ್ಪತ್ರೆ, ತಾಯಿ ಮಕ್ಕಳ ಆಸ್ಪತ್ರೆ ಕಟ್ಟಡ ನಿರ್ಮಿಸುವ ಕಾಮಗಾರಿಯ ಪ್ರಸ್ತಾವನೆಗಳನ್ನೂ ಮಂಡಿಸಿದರು.

ಈ ವಿಷಯ ಪ್ರಸ್ತಾಪಿಸುತ್ತಿದ್ದಂತೆ ಆಕ್ಷೇಪ ಎತ್ತಿದ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಕ್ರೀಡಾ ಸಚಿವ ನಾರಾಯಣಗೌಡ, ‘ನಿಮ್ಮ ಜಿಲ್ಲೆಗೆ ಎಲ್ಲವನ್ನು ತೆಗೆದುಕೊಂಡು ಹೋದರೆ ನಾವು ಏನು ಮಾಡಬೇಕು. ಯಡಿಯೂರಪ್ಪ ಅವಧಿಯಲ್ಲಿ ನಿಮ್ಮ ಜಿಲ್ಲೆಗೆ ವೈದ್ಯಕೀಯ ಕಾಲೇಜು, ಈಗ ಆಸ್ಪತ್ರೆ ಪಡೆದುಕೊಳ್ಳುತ್ತಿದ್ದೀರಿ. ಇದು ಸರಿಯಲ್ಲ. ಎಲ್ಲ ಜಿಲ್ಲೆಗಳಿಗೂ ನ್ಯಾಯ ಒದಗಿಸಬೇಕು’ ಎಂದು ಏರಿದ ಧ್ವನಿಯಲ್ಲಿ ಹೇಳಿದರು.

ಡಾ.ಸಿ.ಎನ್.ಅಶ್ವತ್ಥನಾರಾಯಣ, ಎಂ.ಟಿ.ಬಿ.ನಾಗರಾಜ್, ಜೆ.ಸಿ. ಮಾಧುಸ್ವಾಮಿ ಸೇರಿ ಹಲವರು ಧ್ವನಿಗೂಡಿಸಿದರು. ಪ್ರತಿರೋಧ ಹೆಚ್ಚಾಗುತ್ತಿರುವುದನ್ನು ನೋಡಿದ ಮುಖ್ಯಮಂತ್ರಿ ಬೊಮ್ಮಾಯಿ ವಿಷಯ ತಡೆ ಹಿಡಿಯಲು ಮುಂದಾದರು. ಆಗ ಮಧ್ಯಪ್ರವೇಶಿಸಿದ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ, ತಡೆ ಹಿಡಿದರೆ ತಪ್ಪು ಸಂದೇಶ ಹೋಗುತ್ತದೆ. ಉಳಿದ ಸಚಿವರಿಂದ ಪ್ರಸ್ತಾವನೆ ತರಿಸಿಕೊಳ್ಳಿ ಎಂದು ಸಲಹೆ ನೀಡಿದರು ಎಂದು ಮೂಲಗಳು ಹೇಳಿವೆ.

ರಾಷ್ಟ್ರೋತ್ಥಾನಕ್ಕೆ 9.32 ಎಕರೆ ಜಮೀನು

ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಅಂಗಸಂಸ್ಥೆ ರಾಷ್ಟ್ರೋತ್ಥಾನ ಪರಿಷತ್‌ಗೆ 9 ಎಕರೆ 32 ಗುಂಟೆ ಜಮೀನು ನೀಡಲು ಸರ್ಕಾರ ನಿರ್ಧರಿಸಿದೆ.

ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು ಹೆಸರಘಟ್ಟ ಹೋಬಳಿಯ ಹುರುಳಿಚಿಕ್ಕನಹಳ್ಳಿ ಗ್ರಾಮದಲ್ಲಿ ರಾಷ್ಟ್ರೋತ್ಥಾನವು ಶಾಲೆ ಆರಂಭಿಸುವ ಉದ್ದೇಶ ಹೊಂದಿದೆ ಎಂದು ಮೂಲಗಳು ತಿಳಿಸಿವೆ.

ಕೆನರಾ ಬ್ಯಾಂಕ್ केनरा बैंक Canara Bank
ಸಿಂಡಿಕೇಟ್ सिंडिकेट Syndicate Together We Can

ಪ್ರಾಂಗಣ ಮತ್ತು ವಸತಿ ವಿಭಾಗ, ವೃತ್ತ ಕಛೇರಿ
ನಂ. 86, ಎಂ.ಜಿ ರಸ್ತೆ, ಬೆಂಗಳೂರು– 560001. ಫೋನ್: 25310039 / 25310038

ಸ್ಥಳಾವಕಾಶ ಬೇಕಾಗಿದೆ

ಈ ಕೆಳಕಂಡ ಸ್ಥಳಗಳಲ್ಲಿ ಶಾಖೆ/ಕಛೇರಿ ಸ್ಥಳಾವಕಾಶಕ್ಕಾಗಿ ವಾಣಿಜ್ಯ ಸ್ಥಳಾವಕಾಶ ಹೊಂದಿರುವ ಮಾಲೀಕರಿಂದ ಮೊಹರಾದ ಆಫರ್‌ಗಳನ್ನು ಆಹ್ವಾನಿಸಲಾಗಿದೆ:

ಕ್ರ ಸಂ	ಸ್ಥಳ	ಕ್ರ ಸಂ	ಸ್ಥಳ
1	ಆರ್‌ಎಂವಿ ಲೇಔಟ್ 1ನೇ ಹಂತ/ ಸದಾಶಿವನಗರ, ಬೆಂಗಳೂರು	5	ಹೆಚ್ ಎಸ್ ಆರ್ ಲೇಔಟ್, ಬೆಂಗಳೂರು
2	ಬಸವೇಶ್ವರ ರಸ್ತೆ, ಬೆಂಗಳೂರು	6	ಹಲಸೂರು, ಬೆಂಗಳೂರು
3	ಶೇಷಾದ್ರಿಪುರಂ, ಬೆಂಗಳೂರು	7	ಬ್ರೂಕ್ ಫೀಲ್ಡ್, ಬೆಂಗಳೂರು
4	ಬಸವೇಶ್ವರನಗರ, ಬೆಂಗಳೂರು	8	ಜಯನಗರ 5ನೇ ಬ್ಲಾಕ್, ಬೆಂಗಳೂರು

ವಿವರಗಳನ್ನು ಬ್ಯಾಂಕ್‌ನ ಸದರಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. http://www.canarabank.com. ಅಗತ್ಯ ಅರ್ಜಿ ನಮೂನೆಗಳನ್ನು ಮೇಲ್ಕಾಣಿಸಿದ ಕಛೇರಿಯಲ್ಲಿ ಪಡೆದುಕೊಳ್ಳಬಹುದು ಅಥವಾ ಬ್ಯಾಂಕ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ನಮ್ಮ ಕಛೇರಿಗೆ ಅರ್ಜಿಗಳು ತಲುಪಲು ಅಂತಿಮ ದಿನಾಂಕವು 11–12–2021 ರಂದು ಅಪರಾಹ್ನ 3.00 ಆಗಿರುತ್ತದೆ. ಮುಂದುವರಿದಂತೆ, ಯಾವುದೇ ಸಂವಹನ, ತಿದ್ದುಪಡಿ. ಮಾರ್ಪಾಡು ಎದುರಾದಲ್ಲಿ ಅಂತಹುದನ್ನು ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ. “ಮಧ್ಯವರ್ತಿಗಳಿಗೆ ಅವಕಾಶವಿಲ್ಲ”

ಸ್ಥಳ: ಬೆಂಗಳೂರು
ದಿನಾಂಕ: 26–11–2021
ಸಹಾಯಕ ಮಹಾ ಪ್ರಬಂಧಕರು

ಡ್ರೋನ್‌ಡೆಕ್ ಜೊತೆ ಬಿಇಎಲ್ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಕಂಪನಿಯು ಡ್ರೋನ್‌ಡೆಕ್ ಕಾರ್ಪೊರೇಷನ್ ಜೊತೆ ಒಪ್ಪಂದ ಮಾಡಿಕೊಂಡಿದ್ದು, ಡ್ರೋನ್‌ಡೆಕ್ ಅಭಿವೃದ್ಧಿಪಡಿಸಿರುವ, 'ಚೂಟ ಮೇಲ್‌ಬಾಕ್ಸ್' ತಯಾರಿಕೆಯಲ್ಲಿ ನೆರವು ನೀಡಲಿದೆ. ಬಿಇಎಲ್ ಜೊತೆಗಿನ ಸಹಭಾಗಿತ್ವದಲ್ಲಿ ತಯಾರಾಗುವ ಡ್ರೋನ್‌ಡೆಕ್ ಮೇಲ್‌ಬಾಕ್ಸ್‌ಅನ್ನು ವಿಶ್ವದಾದ್ಯಂತ ಮಾರಾಟಕ್ಕೆ ಬಳಸಿಕೊಳ್ಳಲಾಗುತ್ತದೆ.

ಡ್ರೋನ್‌ಡೆಕ್ ಮೇಲ್‌ಬಾಕ್ಸ್‌ಗಳು ಡ್ರೋನ್ ಮೂಲಕ ರವಾನೆ ಆಗುವ ವಸ್ತುಗಳನ್ನು ಸ್ವೀಕರಿಸುವಲ್ಲಿ, ಅವುಗಳನ್ನು ಸುರಕ್ಷಿತವಾಗಿ ಇರಿಸಿಕೊಳ್ಳುವಲ್ಲಿ ನೆರವಾಗುತ್ತವೆ. ಈ ಬಗ್ಗೆ ಬಿಇಎಲ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಆನಂದಿ ರಾಮಲಿಂಗಂ ಸಂತಸ ವ್ಯಕ್ತಪಡಿಸಿದ್ದಾರೆ.

ಜಾಮೀನು ಮೇಲೆ ಹೊರಗಿರುವ ಶ್ರೀಕಿ; ಅಗತ್ಯಬಿದ್ದರಷ್ಟೇ ನೋಟಿಸ್

ಅಜ್ಞಾತ ಸ್ಥಳದಲ್ಲಿ ಹ್ಯಾಕರ್ ಶ್ರೀಕಿ

ಪ್ರಜಾವಾಣಿ ವಾರ್ತೆ

ಶ್ರೀಕೃಷ್ಣ

ಬೆಂಗಳೂರು: ಡ್ರಗ್ಸ್ ಸೇವಿಸಿದ್ದ ಪ್ರಕರಣದಲ್ಲಿ ಜಾಮೀನು ಪಡೆದು ಜೈಲಿನಿಂದ ಹೊರಬಂದಿರುವ ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (26) ಅಜ್ಞಾತ ಸ್ಥಳ ಸೇರಿದ್ದಾನೆ. ಆತನ ವಿಚಾರದ ಬಗ್ಗೆ ಪೊಲೀಸರಿಂದ ಇದುವರೆಗೂ ಯಾವುದೇ ಸುಳಿವು ಲಭ್ಯವಾಗಿಲ್ಲ.

'ಬಿಟ್ ಕಾಯಿನ್ ಹಗರಣದ ಪ್ರಮುಖ ಸೂತ್ರಧಾರ ಶ್ರೀಕೃಷ್ಣನ ಜೀವಕ್ಕೆ ಅಪಾಯವಿದೆ. ಆತನಿಗೆ ರಕ್ಷಣೆ ಕೊಡಬೇಕು' ಎಂದು ವಿಧಾನಸಭೆಯ ವಿರೋಧ ಪಕ್ಷ ನಾಯಕ ಸಿದ್ದರಾಮಯ್ಯ ಇತ್ತೀಚೆಗಷ್ಟೇ ಹೇಳಿದ್ದರು. ಇದೇ ಕಾರಣಕ್ಕೆ, ಶ್ರೀಕೃಷ್ಣ ಹಾಗೂ ಆತನ ಕುಟುಂಬದವರ ಭದ್ರತೆಗೆ ಇನ್‌ಸ್ಪೆಕ್ಟರ್ ಒಬ್ಬರನ್ನು ನಿಯೋಜಿಸಲಾಗಿದೆ.

'ಜಾಮೀನು ಪಡೆದ ದಿನ ಜೈಲಿನಿಂದ ಹೊರಬಂದಿದ್ದ ಶ್ರೀಕೃಷ್ಣ, ಅದಾದ ನಂತರ ಅಜ್ಞಾತ ಸ್ಥಳಕ್ಕೆ ಹೋಗಿದ್ದಾನೆ. ಆತ ಎಲ್ಲಿದ್ದಾನೆ ಎಂಬುದು ಇದುವರೆಗೂ ಗೊತ್ತಾಗಿಲ್ಲ. ಶ್ರೀಕೃಷ್ಣ ಪೋಷಕರು ವಾಸವಿರುವ ಜಯನಗರದ ಮನೆಗೆ ಮಾತ್ರ ಭದ್ರತೆ ನೀಡಲಾಗಿದೆ. ಶ್ರೀಕೃಷ್ಣನಿಗಾಗಿ ಹುಡುಕಾಟವೂ ನಡೆದಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹೋಟೆಲೊಂದರಲ್ಲಿ ಶ್ರೀಕಿ ಉಳಿದುಕೊಂಡಿದ್ದ ಮಾಹಿತಿ ಇತ್ತು. ಪೊಲೀಸರು ಅಲ್ಲಿಗೆ ಹೋಗುವ ಮೊದಲೇ ಶ್ರೀಕಿ ಕೊಠಡಿ ಖಾಲಿ ಮಾಡಿಕೊಂಡು ಹೋಗಿದ್ದಾನೆ. ಜೊತೆಗೆ, ಆತ ಎಲ್ಲಿದ್ದರೂ ಚಿಕಿತ್ಸೆ ಪಡೆಯುತ್ತಿರುವ ಮಾಹಿತಿಯೂ ಇದೆ.'

'ಶ್ರೀಕಿಗೆ ಭದ್ರತೆ ನೀಡುವುದು ನಮ್ಮ ಕರ್ತವ್ಯವೆಂದು ಪೋಷಕರಿಗೆ ತಿಳಿಸಲಾಗಿದೆ. ಅವರ ಮೂಲಕವೇ ಶ್ರೀಕಿಯನ್ನು ಸಂಪರ್ಕಿಸಲು ಯತ್ನಿಸಲಾಗುತ್ತಿದೆ. ಪೋಷಕರ ಸಂಪರ್ಕಕ್ಕೂ ಶ್ರೀಕಿ ಲಭ್ಯವಾಗುತ್ತಿಲ್ಲ' ಎಂದೂ ತಿಳಿಸಿವೆ.

ಅಗತ್ಯಬಿದ್ದರಷ್ಟೇ ನೋಟಿಸ್: 'ಹೋಟೆಲೊಂದರಲ್ಲಿ ಶ್ರೀಕೃಷ್ಣ ಹಾಗೂ ವಿಷ್ಣು ಭಟ್ ಎಂಬುವವರನ್ನು ಜೀವನ್‌ಭಿಮಾ ನಗರ ಠಾಣೆ ಪೊಲೀಸರು ಬಂಧಿಸಿದ್ದರು. ಎನ್‌ಡಿಪಿಎಸ್ ಕಾಯ್ದೆಯಡಿ ಇಬ್ಬರ ವಿರುದ್ಧವೂ ಪ್ರಕರಣ ದಾಖಲಿಸಿಕೊಂಡಿದ್ದರು. ಇದೇ ಪ್ರಕರಣದಲ್ಲಿ ಶ್ರೀಕೃಷ್ಣನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಆತನ ಮೇಲೆ ಡ್ರಗ್ ಸೇವಿಸಿದ್ದ ಆರೋಪವಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪ್ರಕರಣದಲ್ಲಿ ಜಾಮೀನು ಪಡೆದುಕೊಂಡಿರುವ ಶ್ರೀಕೃಷ್ಣ, ಜೈಲಿನಿಂದ ಹೊರಬಂದಿದ್ದಾನೆ. ಜೀವನ್‌ಭಿಮಾ ನಗರ ಠಾಣೆ ಪೊಲೀಸರ ತನಿಖೆಯಲ್ಲಿ ಸದ್ಯಕ್ಕೆ ಆತನ ವಿಚಾರಣೆ ಅವಶ್ಯತೆ ಇಲ್ಲ. ಅಗತ್ಯಬಿದ್ದರಷ್ಟೇ ಪೋಷಕರು ಅಥವಾ ಸಂಬಂಧಿಕರ ಮೂಲಕ ನೋಟಿಸ್ ಜಾರಿ ಮಾಡಲಾಗುವುದು' ಎಂದೂ ತಿಳಿಸಿವೆ.

'ತನಿಖೆಗೆ ಸಹಕರಿಸದಿದ್ದರೆ ಆಕ್ಷೇಪಣೆ'

'ಜಾಮೀನು ರದ್ದು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವ ಪರಿಸ್ಥಿತಿ ಸದ್ಯಕ್ಕೆ ಇಲ್ಲ. ವಿಚಾರಣೆ ಅಗತ್ಯವಿದ್ದರೆ ನೋಟಿಸ್ ನೀಡುತ್ತೇವೆ. ಅದಾದ ಬಳಿಕವೂ ಶ್ರೀಕೃಷ್ಣ ತನಿಖೆಗೆ ಸಹಕರಿಸದಿದ್ದರೆ ಮಾತ್ರ ಜಾಮೀನು ರದ್ದು ಮಾಡುವಂತೆ ಕೋರಿ ನ್ಯಾಯಾಲಯಕ್ಕೆ ಆಕ್ಷೇಪಣೆ ಸಲ್ಲಿಸಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು

ಸುದ್ದಿ 2 ನಿಮಿಷ

ಹಂಪಿ ವಿವಿ ಹಗರಣ: ತನಿಖೆಗೆ ಸಿದ್ದರಾಮಯ್ಯ ಆಗ್ರಹ

ಬೆಂಗಳೂರು: 'ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಗರಣಗಳ ಕುರಿತ ಆರೋಪಗಳ ಬಗ್ಗೆ ವಿಚಾರಣೆಗೆ ತಜ್ಞರು ಮತ್ತು ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಸಮಿತಿ ರಚಿಸಬೇಕು' ಎಂದು ಆಗ್ರಹಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

ವಿಶ್ವವಿದ್ಯಾಲಯದ ಹಗರಣಗಳ ಕುರಿತು ಇತ್ತೀಚೆಗೆ 'ಪ್ರಜಾವಾಣಿ'ಯಲ್ಲಿ ವಿಶೇಷ ವರದಿಗಳು ಪ್ರಕಟವಾಗಿದ್ದವು.

'ವಿಶ್ವವಿದ್ಯಾಲಯದಲ್ಲಿ ಹುದ್ದೆಗಳ ನೇಮಕಾತಿಗೆ ನಡೆಯುತ್ತಿರುವ ಪ್ರಕ್ರಿಯೆಯಲ್ಲಿ ಮೀಸಲಾತಿ ಉಲ್ಲಂಘನೆ ಆರೋಪವಿದೆ. ಈ ಬಗ್ಗೆ ಸಮಾಜ ಕಲ್ಯಾಣ ಇಲಾಖೆ ಮತ್ತು ಕಲ್ಯಾಣ ಕರ್ನಾಟಕ ಅಭಿವೃದ್ಧಿ ಕೋಶಗಳು ವಿಚಾರಣೆ ನಡೆಸಿ ವರದಿ ನೀಡಬೇಕು. ಅಲ್ಲಿಯವರೆಗೆ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಳಿಸಬೇಕು' ಎಂದು ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

'ಇತ್ತೀಚೆಗೆ ವಿಶ್ವವಿದ್ಯಾಲಯದಲ್ಲಿ ಕಲವು ಬೋಧಕ ಹುದ್ದೆಗಳಿಗೆ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿದೆ. ಮಾಧ್ಯಮ ವರದಿಗಳ ಪ್ರಕಾರ ಪ್ರತಿ ಹುದ್ದೆಯನ್ನು ₹ 50 ಲಕ್ಷಕ್ಕೆ ಹರಾಜು ಮಾಡಲಾಗುತ್ತಿದೆ. ಹಣ ಕೊಟ್ಟವರಿಗೆ ಪರೀಕ್ಷೆಗೆ ಮೊದಲೇ ಪ್ರಶ್ನೆಪತ್ರಿಕೆ ನೀಡಲಾಗುತ್ತಿದೆ- ಯೆಂಬ ಗಂಭೀರ ಆರೋಪಗಳೂ ಇವೆ. ವಿಶ್ವವಿದ್ಯಾಲಯಗಳು ಹುದ್ದೆಗಳನ್ನು ಹರಾಜಿಗಿಟ್ಟರೆ ಬಡ ಪ್ರತಿಭಾವಂತರು ಆಯ್ಕೆಯಾಗಲು ಸಾಧ್ಯವೆ' ಎಂದೂ ಪ್ರಶ್ನಿಸಿದ್ದಾರೆ.

ಆದ್ದರಿಂದ ನೇಮಕಾತಿ ಪ್ರಕ್ರಿಯೆ ನಿಲ್ಲಿಸಿ ಈ ಕುರಿತು ವಿಚಾರಣೆ ನಡೆಸಬೇಕು ಎಂದಿರುವ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ವಿದ್ಯುತ್ ಕಾಮಗಾರಿ ಮತ್ತು ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ವಿವಿಧ ಪ್ರದೇಶಗಳಲ್ಲಿ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಇದೇ 26ರಂದು ಸುಪ್ರಭಾತ ನಗರ, ಉತ್ತರಹಳ್ಳಿ ರೋಡ್, ಸಿದ್ಧಿ ವಿನಾಯಕ ಬಡಾವಣೆ, ಅನ್ನಪೂರ್ಣೇಶ್ವರಿ ಬಡಾವಣೆ, ಬಿಇಎಲ್ ಒಂದನೇ ಮತ್ತು ಎರಡನೇ ಹಂತ, ಹನುಮಂತ ನಗರ, ಸುಂಕೇನಹಳ್ಳಿ, ವಿಜಯನಗರ, ಗೋವಿಂದರಾಜ ನಗರ, ಲಕ್ಷ್ಮಣ ನಗರ, ಸಂಜೀವಿನಿ ನಗರ, ವಿಘ್ನೇಶ್ವರ ನಗರ, ಹೆಗ್ಗನಹಳ್ಳಿ, ಪ್ರಶಾಂತ ನಗರ, ಅಮರಜ್ಯೋತಿ ನಗರ, ಪಂಚಶೀಲ ನಗರ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

26ರಿಂದ 30ರವರೆಗೆ ವಿ ನಾಗನಾಥಪುರ, ದೇವರಬೀಸನಹಳ್ಳಿ, ಅಂಜನಾಪುರ, ಕಿಯೋನಿಕ್ಸ್, ಎಚ್‌ಎಸ್‌ಆರ್ ಬಡಾವಣೆ, ಅಂಜನಾಪುರ, ಬಿಟಿಎಂ ಬಡಾವಣೆ ವಿದ್ಯುತ್ ವ್ಯತ್ಯಯವಾಗಲಿದೆ.

ಕತ್ತು, ಕೈ ಮೇಲೆ ಚಾಕು ಇರಿತದ ಗುರುತು • ಕೊಲೆ ಶಂಕೆಯಡಿ ಪ್ರಕರಣ ದಾಖಲು

'ಐಎಸ್‌ಬಿ' ನಿವೃತ್ತ ಪ್ರಾಧ್ಯಾಪಕನ ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಹೈದರಾಬಾದ್‌ನಿಂದ ನಗರಕ್ಕೆ ಬಂದಿದ್ದ ರಾವ್
- ತೆಲುಗು ಚಿತ್ರರಂಗದ ಗಾಯಕಿ ಹರಿಣಿ ತಂದೆ
- ಕೊಲೆ, ಆತ್ಮಹತ್ಯೆ ಆಯಾಮದಲ್ಲಿ ತನಿಖೆ

ಬೆಂಗಳೂರು: ಹೈದರಾಬಾದ್‌ನ ಇಂಡಿಯನ್ ಸ್ಕೂಲ್ ಆಫ್ ಬಿಸಿನೆಸ್ (ಐಎಸ್‌ಬಿ) ನಿವೃತ್ತ ಪ್ರಾಧ್ಯಾಪಕ ಡಾ.ಎ.ಕೆ. ರಾವ್ (65) ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದಾರೆ. ಚಾಕುವಿನಿಂದ ಇರಿದ ಗಾಯದ ಗುರುತುಗಳಿರುವ ಸ್ಥಿತಿಯಲ್ಲಿ ಅವರ ಮೃತದೇಹ ನಗರದ ರೈಲು ಹಳಿ ಮೇಲೆ ಪತ್ತೆಯಾಗಿದೆ.

'ಯಲಹಂಕ ಹಾಗೂ ರಾಜಾನುಕುಂಟೆ ನಿಲ್ದಾಣಗಳ ನಡುವಿನ ಹಳಿ ಮೇಲೆ ರಾವ್ ಮೃತ ದೇಹ ಪತ್ತೆಯಾಗಿತ್ತು. ದೇಹದ ಮೇಲೆ ಚಾಕುವಿನಿಂದ ಇರಿದ ಗುರುತುಗಳಿವೆ. ಕೊಲೆ ಶಂಕೆ ವ್ಯಕ್ತಪಡಿಸಿ ಅವರ ಕುಟುಂಬಸ್ಥರು ದೂರು ನೀಡಿದ್ದಾರೆ. ಅದರನ್ವಯ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ರೈಲ್ವೆ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಅಪರಾಧ ಸುದ್ದಿ

'ಬೆಂಗಳೂರಿನ ಕಾಲೇಜೊಂದರಲ್ಲಿ ಎಂಜಿನಿಯರಿಂಗ್ ಪದವಿ ಪೂರ್ಣಗೊಳಿಸಿದ್ದ ರಾವ್, ಬಾಂಬೆಯ ಭಾರತೀಯ ತಂತ್ರಜ್ಞಾನ ಸಂಸ್ಥೆಯಲ್ಲಿ (ಐಐಟಿ) ಪಿಎಚ್‌ಡಿ ಪಡೆದಿದ್ದರು. ಹೈದರಾಬಾದ್‌ನ ಐಎಸ್‌ಬಿ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿ ನಿವೃತ್ತರಾಗಿದ್ದರು. ಬಳಿಕ ಹೈದಾರಾಬಾದ್‌ನಲ್ಲಿ ನೆಲೆಸಿದ್ದರು. ಉದ್ಯಮದಲ್ಲೂ ತೊಡಗಿಸಿಕೊಂಡಿದ್ದರು. ಆಗಾಗ ಬೆಂಗಳೂರಿಗೆ ಅವರು ಬಂದು ಹೋಗುತ್ತಿದ್ದರು. ಅವರ ಮಗಳು ಹರಿಣಿ, ತೆಲುಗು ಚಿತ್ರರಂಗದ ಗಾಯಕಿ' ಎಂದೂ ತಿಳಿಸಿದರು.

'ಹೈದರಾಬಾದ್‌ನ ಮನೆಯಿಂದ ರಾವ್ ನಾಪತ್ತೆ ಆಗಿದ್ದರು.ಗಾಬರಿಗೊಂಡಿದ್ದ ಕುಟುಂಬಸ್ಥರು, ಸ್ಥಳೀಯ ಠಾಣೆಯಲ್ಲಿ ನಾಪತ್ತೆ ಬಗ್ಗೆ ದೂರು ನೀಡಿದ್ದರು. ಯಾರಿಗೂ ಹೇಳದೇ ನಗರಕ್ಕೆ ಬಂದಿದ್ದ ರಾವ್, ಹೋಟೆಲೊಂದರಲ್ಲಿ ನೆಲೆಸಿದ್ದರು ಎಂದು ಗೊತ್ತಾಗಿದೆ. ಇದರ ನಡುವೆಯೇ ನ. 23ರಂದು ಬೆಂಗಳೂರಿನಲ್ಲಿ ಹಳಿ ಮೇಲೆ ಅವರ ಮೃತದೇಹ ಪತ್ತೆಯಾಗಿದೆ' ಎಂದೂ ವಿವರಿಸಿದರು.

ಹಣಕಾಸು ವ್ಯವಹಾರಕ್ಕಾಗಿ ಹಲವರ ಭೇಟಿ: 'ಹಣಕಾಸು ವ್ಯವಹಾರದ ಸಂಬಂಧ ಬೆಂಗಳೂರಿನ ಹಲವರನ್ನು ರಾವ್ ಭೇಟಿ ಆಗುತ್ತಿದ್ದರು. ವ್ಯವಹಾರ ಸಂಬಂಧ ಹಲವರ ಜೊತೆ ವೈಷಮ್ಯ ಕಟ್ಟಿಕೊಂಡಿದ್ದ ಬಗ್ಗೆ ಶಂಕೆ ಇದೆ' ಎಂದೂ ಅಧಿಕಾರಿ ಹೇಳಿದರು.

'ಸುದ್ದಗುಂಟೆಪಾಳ್ಯ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವೊಂದರಲ್ಲಿ ರಾವ್ ಅವರೇ ಸಾಕ್ಷಿ ಆಗಿದ್ದರೆಂಬ ಮಾಹಿತಿ ಲಭ್ಯವಾಗಿದೆ. ಆ ಪ್ರಕರಣದ ಬಗ್ಗೆಯೂ ಮಾಹಿತಿ ಪಡೆಯುತ್ತಿದ್ದೇವೆ' ಎಂದೂ ತಿಳಿಸಿದರು.

ಕೊಲೆಯೋ ಆತ್ಮಹತ್ಯೆಯೋ: 'ಕತ್ತು ಹಾಗೂ ಕೈ ಮೇಲೆ ಚಾಕುವಿನಿಂದ ಇರಿದ ಗುರುತುಗಳಿವೆ. ಹೀಗಾಗಿ, ಅನುಮಾನಗೊಂಡಿರುವ ಕುಟುಂಬಸ್ಥರು ಕೊಲೆ ಶಂಕೆ ವ್ಯಕ್ತಪಡಿಸಿದ್ದಾರೆ. ಆದರೆ, ರಾವ್ ಅವರೇ ಚಾಕುವಿನಿಂದ ಚುಚ್ಚಿಕೊಂಡಿರುವ ಸಾಧ್ಯತೆಯನ್ನೂ ತಳ್ಳಿಹಾಕುವಂತಿಲ್ಲ. ಎರಡೂ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ' ಎಂದೂ ಅಧಿಕಾರಿ ಹೇಳಿದರು.

'ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ, ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ. ಪರೀಕ್ಷೆ ವರದಿ ಬಂದ ನಂತರ ಕೆಲ ಸುಳಿವುಗಳು ಸಿಗಬಹುದು' ಎಂದೂ ತಿಳಿಸಿದರು.

'ವಂಚನೆ ದೂರಿನ ಪ್ರತಿ ಪತ್ತೆ'

ಡಾ. ಎ.ಕೆ. ರಾವ್

'ರಾವ್ ಅವರ ಮೃತದೇಹ ಸಿಕ್ಕ ಸ್ಥಳದಲ್ಲಿ ಕೆಲ ದಾಖಲೆಗಳು ಸಿಕ್ಕಿದ್ದು, ಅವುಗಳನ್ನು ಸುಪರ್ದಿಗೆ ಪಡೆದು ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಂಚನೆ ಬಗ್ಗೆ ಪೊಲೀಸರಿಗೆ ನೀಡಲು ಸಿದ್ಧಪಡಿಸಿದ್ದ ದೂರಿನ ಪ್ರತಿ, ಆಧಾರ್ ಹಾಗೂ ಹಣದ ವಹಿವಾಟಿನ ದಾಖಲೆಗಳು ಪತ್ತೆ ಆಗಿವೆ. ವಂಚನೆ ಪ್ರಕರಣಕ್ಕೂ ಸಾವಿಗೂ ಏನಾದರೂ ಸಂಬಂಧವಿದೆಯಾ ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದೂ ತಿಳಿಸಿವೆ.

ಆರೋಪಿಗೆ ನಿರೀಕ್ಷಣಾ ಜಾಮೀನು ನಿರಾಕರಣೆ

ಬೆಂಗಳೂರು: ಕೋವಿಡ್-19ರ ಎರಡನೇ ಅಲೆ ಸಂದರ್ಭದಲ್ಲಿ ಜೀವ ರಕ್ಷಕ ಔಷಧಿ ರೆಮ್‌ಡಿಸಿವಿರ್ ಅನ್ನು ಕಾಳ ಸಂತೆಯಲ್ಲಿ ಮಾರಾಟ ಮಾಡಿದ ಮೆಡಿಕಲ್ ರೆಪ್ರಸೆಂಟಟಿವ್‌ಗೆ ನಿರೀಕ್ಷಣಾ ಜಾಮೀನು ನೀಡಲು ಹೈಕೋರ್ಟ್ ನಿರಾಕರಿಸಿದೆ.

ಈ ಕುರಿತಂತೆ ಚಿಕ್ಕಬಾಣಾವರ ನಿವಾಸಿಯಾದ ಆರೋಪಿ ಸಿ.ವಿ ಚೇತನ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೆ. ನಟರಾಜನ್ ಅವರಿದ್ದ ಏಕಸದಸ್ಯ ಪೀಠ ವಜಾಗೊಳಿಸಿದ್ದು, 'ಅರ್ಜಿದಾರನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುವ ಅಗತ್ಯವಿದೆ. ಆದ್ದರಿಂದ ನಿರೀಕ್ಷಣಾ ಜಾಮೀನು ಮಂಜೂರು ಮಾಡಲಾಗದು' ಎಂದು ಹೇಳಿದೆ.

ಆರೋಪಿಯು 2021ರ ಮೇ ಮೊದಲ ವಾರದಲ್ಲಿ 3 ರೆಮ್‌ಡೆಸಿವಿರ್ ಚುಚ್ಚುಮದ್ದುಗಳನ್ನು ತಲಾ ₹25 ಸಾವಿರದಂತೆ ಕಾಳಸಂತೆಯಲ್ಲಿ ಮಾರಾಟ ಮಾಡಿದ್ದರ ಮಾಹಿತಿ ಮೇರೆಗೆ ಜೆ.ಸಿ ನಗರ ಠಾಣೆ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದರು. ಆರೋಪಿಗೆ ಸೆಷನ್ಸ್ ಕೋರ್ಟ್ ಜಾಮೀನು ನಿರಾಕರಿಸಿತ್ತು.

ಮಹಿಳೆಯ ಖಾಸಗಿ ಭಾಗ ಮೊಬೈಲ್‌ನಲ್ಲಿ ಸೆರೆ: ಆರೋಪಿಗೆ ಹೈಕೋರ್ಟ್ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೆಯ ಗೆಳತಿ ಮದುವೆಯಾದ ಮೇಲೂ ಆಕೆಯೊಂದಿಗೆ ಲೈಂಗಿಕ ಸಂಪರ್ಕ ಇರಿಸಿಕೊಂಡು, ಆಗಾಗ್ಗೆ ಆಕೆಯ ನಗ್ನ ದೇಹದ ಖಾಸಗಿ ಭಾಗವನ್ನು ವಿಡಿಯೊ ಕಾಲ್ ಮೂಲಕ ಪ್ರದರ್ಶಿಸುತ್ತಿದ್ದ ಮತ್ತು ಅಂತಹ ದೃಶ್ಯಗಳ ಸ್ಕ್ರೀನ್ ಶಾಟ್‌ಗಳನ್ನು ಸೇವ್ ಮಾಡಿಕೊಂಡು ನಂತರ ಅದನ್ನು ಆಕೆಯ ಗಂಡನಿಗೇ ರವಾನಿಸಿ ಜೈಲು ಸೇರಿರುವ ಆರೋಪಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಜಾಮೀನು ನೀಡುವಂತೆ ಕೋರಿ ಆರೋಪಿ ಸಲ್ಲಿಸಿದ್ದ ಅರ್ಜಿಯನ್ನು (ಸಿಆರ್‌ಎಲ್.ಪಿ ಸಂಖ್ಯೆ 102000/2021) ಧಾರವಾಡ ಹೈಕೋರ್ಟ್‌ನ ನ್ಯಾಯಮೂರ್ತಿ ಶಿವಶಂಕರ ಅಮರಣ್ಣವರ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

32 ವರ್ಷದ ಆರೋಪಿ ಮತ್ತು 25ರ ಮಹಿಳೆ ಇಬ್ಬರೂ ಸಂಬಂಧಿಕರು. ಮದುವೆಗೂ ಮುನ್ನ ಅಂದರೆ, 2018ರ ಅಂತ್ಯದಿಂದಲೂ ಮಹಿಳೆಯು ಆರೋಪಿ ಜೊತೆ ಹೊಲದಲ್ಲಿ ಆಗಾಗ್ಗೆ ಲೈಂಗಿಕ ಸಂಪರ್ಕ ನಡೆಸುತ್ತಿದ್ದರು. ಮದುವೆಯಾದ ಮೇಲೂ ಆರೋಪಿ ಆಕೆಯೊಂದಿಗೆ ಲೈಂಗಿಕ ಸಂಪರ್ಕ ಸಾಧಿಸುತ್ತಿದ್ದ. ಕೆಲವೊಮ್ಮೆ ಬೆಳಗಿನ ಜಾವ 4ರಿಂದ 5 ಗಂಟೆಯ ಮಧ್ಯದಲ್ಲಿ ವಿಡಿಯೊ ಕಾಲ್ ಮಾಡಿ ಆಕೆಯ ದೇಹದ ಖಾಸಗಿ ಭಾಗಗಳನ್ನು ನೋಡುತ್ತಿದ್ದ.

ಏತನ್ಮಧ್ಯೆ, 2021ರ ಮಾರ್ಚ್ ತಿಂಗಳಲ್ಲಿ ಮಹಿಳೆ 15 ದಿನಗಳ ಕಾಲ ಆರೋಪಿಯೊಂದಿಗಿನ ಫೋನ್ ಸಂಪರ್ಕ ಕಡಿತಗೊಳಿಸಿದ್ದಳು. ಇದರಿಂದ ಕುಪಿತನಾದ ಆರೋಪಿ ತನ್ನ ಮೊಬೈಲ್‌ನಲ್ಲಿ ಸೇವ್ ಮಾಡಿ ಇರಿಸಿಕೊಂಡಿದ್ದ ಆಕೆಯ ನಗ್ನ ದೇಹದ ಖಾಸಗಿ ಭಾಗಗಳ ಸ್ಕ್ರೀನ್ ಶಾಟ್‌ಗಳನ್ನು ಅವಳ ಗಂಡನಿಗೇ ರವಾನಿಸಿದ್ದ. ಈ ಸಂಬಂಧ ದೂರು ದಾಖಲಾಗಿತ್ತು. ಪೊಲೀಸರು ಆರೋಪಿಯನ್ನು 2021ರ ಏಪ್ರಿಲ್ ಮೊದಲ ವಾರದಲ್ಲಿ ಬಂಧಿಸಿದ್ದರು.

ಸೆಷನ್ಸ್ ನ್ಯಾಯಾಲಯ ಜಾಮೀನು ನಿರಾಕರಿಸಿದ್ದ ಕಾರಣ ಆರೋಪಿ ಜೈಲು ಸೇರಿದ್ದ. ಜಾಮೀನು ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದ ಆರೋಪಿಯ ಅರ್ಜಿಯನ್ನು ವಿಚಾರಣೆ ನಡೆಸಿದ ನ್ಯಾಯಪೀಠವು, 'ಈ ಪ್ರಕರಣದಲ್ಲಿ ಆರೋಪಿ ಮತ್ತು ಮಹಿಳೆಯ ಮಧ್ಯದ ಲೈಂಗಿಕ ಸಂಪರ್ಕ ಸಹಮತದಿಂದ ಕೂಡಿದೆ. ಮಹಿಳೆಯೇ ಸ್ವತಃ ತನ್ನ ದೇಹದ ಖಾಸಗಿ ಭಾಗಗಳನ್ನು ಆರೋಪಿಗೆ ಪ್ರದರ್ಶಿಸಿದ್ದಾಳೆ. ಇದು ಆಕೆಯ ಒಪ್ಪಿಗೆಯ ಪ್ರದರ್ಶನ ಆಗಿರುವುದರಿಂದ ಆರೋಪಿಗೆ ಜಾಮೀನು ನೀಡಲಾಗುತ್ತಿದೆ' ಎಂದು ಹೇಳಿದೆ.

ಕೆಲಸ ಸಿಗದಿದ್ದಕ್ಕೆ ಬೈಕ್ ಕಳ್ಳತನ: ಆರೋಪಿ ಬಂಧನ

ಬೆಂಗಳೂರು: ಕರ್ನಾಟಕ ಹಾಗೂ ಆಂಧ್ರಪ್ರದೇಶಗಳಲ್ಲಿ ಬೈಕ್‌ಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪದಡಿ ಮೌಲಾಲಿ ಎಂಬಾತನನ್ನು ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಬಂಧಿಸಿದ್ದಾರೆ.

'ಆಂಧ್ರಪ್ರದೇಶ ನಿವಾಸಿ ಮೌಲಾಲಿ, ಸಿವಿಲ್ ಎಂಜಿನಿಯರಿಂಗ್ ವಿಷಯದಲ್ಲಿ ಡಿಪ್ಲೊಮಾ ವ್ಯಾಸಂಗ ಮಾಡಿದ್ದ. ಓದಿಗೆ ತಕ್ಕಂತೆ ಕೆಲಸ ಸಿಗದಿದ್ದರಿಂದ, ಬೈಕ್ ಕಳ್ಳತನಕ್ಕೆ ಇಳಿದಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ. ಆತನಿಂದ ₹ 15 ಲಕ್ಷ ಮೌಲ್ಯದ 10 ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪರಪ್ಪನ ಅಗ್ರಹಾರ, ಸೂರ್ಯನಗರ, ಹೆಬ್ಬಗೋಡಿ ಹಾಗೂ ಆಂಧ್ರಪ್ರದೇಶದ ಬದ್ವೇಲ್, ತಿರುಪತಿ, ವಿಜಯವಾಡ ಸೇರಿದಂತೆ ವಿವಿಧ ಠಾಣೆ ವ್ಯಾಪ್ತಿಯಲ್ಲೂ ಆರೋಪಿ ಬೈಕ್‌ಗಳನ್ನು ಕದ್ದಿರುವುದು ವಿಚಾರಣೆಯಿಂದ ತಿಳಿದುಬಂದಿದೆ. ಮನೆ ಮುಂದೆ ಹಾಗೂ ಪಾರ್ಕಿಂಗ್ ಜಾಗದಲ್ಲಿ ನಿಲಿಸುತ್ತಿದ್ದ ಬೈಕ್‌ಗಳನ್ನು ಗುರಿಯಾಗಿಸಿಕೊಂಡು ಆರೋಪಿ ಕೃತ್ಯ ಎಸಗುತ್ತಿದ್ದ. ಬೈಕ್‌ಗಳ ಲಾಕ್ ಮುರಿಯುವುದರಲ್ಲಿ ಪರಿಣತಿ ಹೊಂದಿದ್ದ.'

'ಕರ್ನಾಟಕದಲ್ಲಿ ಕದ್ದ ಬೈಕ್‌ಗಳನ್ನು ಆಂಧ್ರಪ್ರದೇಶದಲ್ಲಿ ಆರೋಪಿ ಮಾರುತ್ತಿದ್ದ. ಆಂಧ್ರದಲ್ಲಿ ಕದ್ದ ಬೈಕ್‌ಗಳನ್ನು ಕರ್ನಾಟಕದಲ್ಲಿ ಮಾರಿ, ಹಣ ಗಳಿಸುತ್ತಿದ್ದ. ಇದೇ ಹಣವನ್ನು ಐಷಾರಾಮಿ ಜೀವನಕ್ಕೆ ಖರ್ಚು ಮಾಡುತ್ತಿದ್ದ' ಎಂದೂ ತಿಳಿಸಿವೆ.

ಮಾರಲು ಬಂದು ಸಿಕ್ಕಿಬಿದ್ದ: 'ರಾಯಲ್ ಎನ್‌ಫೀಲ್ಡ್ ಹಾಗೂ ಇತರೆ ದುಬಾರಿ ಬೆಲೆಯ ಬೈಕ್‌ಗಳನ್ನಷ್ಟೇ ಆರೋಪಿ ಕದಿಯುತ್ತಿದ್ದ. ಅದೇ ಬೈಕ್‌ಗಳನ್ನು ಕಡಿಮೆ ಬೆಲೆಗೆ ಮಾರುತ್ತಿದ್ದ. ಆಂಧ್ರದಲ್ಲಿ ಕದ್ದಿದ್ದ ಬೈಕನ್ನು ನಗರದಲ್ಲಿ ಮಾರಲು ಬಂದಿದ್ದಾಗ ಆರೋಪಿ ಸಿಕ್ಕಿಬಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಬಾಂಬ್ ಸ್ಫೋಟ: ಇಬ್ಬರಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚಿನ್ನಸ್ವಾಮಿ ಕ್ರೀಡಾಂಗಣ ಬಳಿ 2010ರಲ್ಲಿ ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣದ ಇಬ್ಬರು ಅಪರಾಧಿಗಳಿಗೆ ವಿಧಿಸಿದ್ದ 7 ವರ್ಷಗಳ ಶಿಕ್ಷೆಯನ್ನು ಪರಿಶೀಲಿಸಿರುವ ಇಲ್ಲಿನ ವಿಶೇಷ ನ್ಯಾಯಾಲಯ, ಇದೀಗ ಇಬ್ಬರಿಗೂ ಜೀವಾವಧಿ ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದೆ.

ಇಂಡಿಯನ್ ಮುಜಾಹಿದ್ದೀನ್ ಸಂಘಟನೆ ಸದಸ್ಯರಾಗಿದ್ದ ಅಫ್ತಾಬ್ ಆಲಂ ಅಲಿಯಾಸ್ ಫಾರೂಕ್ ಹಾಗೂ ಅಹಮ್ಮದ್ ಜಮಾಲ್ ಎಂಬುವವರನ್ನು ಬಂಧಿಸಿದ್ದ ಸಿಸಿಬಿ ಪೊಲೀಸರು, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಕೃತ್ಯ ಎಸಗಿದ್ದ ಬಗ್ಗೆ ಅಪರಾಧಿಗಳು ನ್ಯಾಯಾಲಯ ಎದುರು ತಪ್ಪೊಪ್ಪಿಕೊಂಡಿದ್ದರು. ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಾಲಯ, ಇಬ್ಬರಿಗೂ 7 ವರ್ಷಗಳ ಜೈಲು ಶಿಕ್ಷೆ ವಿಧಿಸಿತ್ತು. ಆದೇಶವನ್ನು ಪ್ರಶ್ನಿಸಿದ್ದ ಸಿಸಿಬಿ ಪರ ವಕೀಲರು, ಕೃತ್ಯದ ಬಗ್ಗೆ ದಾಖಲಾಗಿರುವ ಪ್ರಕರಣಗಳನ್ನು ಆಧರಿಸಿ ಹೆಚ್ಚಿನ ಶಿಕ್ಷೆ ವಿಧಿಸಲು ನಿರ್ದೇಶನ ನೀಡುವಂತೆ ಕೋರಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ್ದ ಹೈಕೋರ್ಟ್, ಪ್ರಕರಣದ ಶಿಕ್ಷೆ ಪ್ರಮಾಣವನ್ನು ಮತ್ತೊಮ್ಮೆ ಪರಿಶೀಲಿಸುವಂತೆ ನಿರ್ದೇಶನ ನೀಡಿತ್ತು. ಅದರನ್ವಯ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಲಯ, ಇಬ್ಬರೂ ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿ ಗುರುವಾರ ಆದೇಶ ಹೊರಡಿಸಿದೆ.

ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಸಿ.ಎ.ರವೀಂದ್ರ ವಾದಿಸಿದ್ದರು.

ಪ್ರತ್ಯೇಕ ತಂಡಗಳಲ್ಲಿ ಬಂದು ಸ್ಫೋಟ: 'ದೆಹಲಿಯ ಜಾಮಿಯಾನಗರದ ಮನೆಯೊಂದರಲ್ಲಿ ವಾಸವಿದ್ದ ಆರೋಪಿಗಳು, ಬೆಂಗಳೂರಿನಲ್ಲಿ ಬಾಂಬ್ ಸ್ಫೋಟಿಸಲು ಸಂಚು ರೂಪಿಸಿ ಸಿದ್ಧತೆ ಮಾಡಿಕೊಂಡಿದ್ದರು. ಪ್ರತ್ಯೇಕ ತಂಡಗಳಾಗಿ ಬೆಂಗಳೂರಿಗೆ ಬಂದಿದ್ದ ಅಪರಾಧಿಗಳು, ಚಿನ್ನಸ್ವಾಮಿ ಕ್ರೀಡಾಂಗಣ ಬಳಿ ನಾಲ್ಕು ಕಡೆ ಬಾಂಬ್ ಇಟ್ಟಿದ್ದರು' ಎಂದು ಸಿಸಿಬಿ ಅಧಿಕಾರಿಯೊಬ್ಬರು ತಿಳಿಸಿದರು.

'ನಾಲ್ಕರ ಪೈಕಿ ಒಂದು ಬಾಂಬ್ ಸ್ಫೋಟಗೊಂಡಿತ್ತು. ಉಳಿದ ಮೂರು ಬಾಂಬ್‌ಗಳನ್ನು ಪೊಲೀಸರು ಪತ್ತೆ ಮಾಡಿ ನಿಷ್ಕ್ರಿಯಗೊಳಿಸಿದ್ದರು. ಇದೇ ಪ್ರಕರಣದಲ್ಲಿ ಯಾಸಿನ್ ಭಟ್ಕಳ್ ಸಹಚರ ಸೇರಿದಂತೆ ನಾಲ್ವರಿಗೆ 2018ರಲ್ಲಿ 7 ವರ್ಷಗಳ ಜೈಲು ಶಿಕ್ಷೆ ಸಹ ಆಗಿತ್ತು' ಎಂದೂ ಹೇಳಿದರು.

'ಟೆಸ್ಟ್ ಡ್ರೈವ್' ನೆಪ; ಕಾರು ಕಳ್ಳನ ಬಂಧನ

ಪ್ರಜಾವಾಣಿ ವಾರ್ತೆ



ಆರೋಪಿಯಿಂದ ಜಪ್ತಿ ಮಾಡಲಾದ ಕಾರುಗಳು

ಬೆಂಗಳೂರು: ಖರೀದಿ ನೆಪದಲ್ಲಿ ಸಾರ್ವಜನಿಕರನ್ನು ಪರಿಚಯಿಸಿಕೊಂಡು 'ಟೆಸ್ಟ್ ಡ್ರೈವ್' ಮಾಡುವುದಾಗಿ ಹೇಳಿ ಕಾರುಗಳನ್ನು ಕದ್ದೊಯ್ಯುತ್ತಿದ್ದ ಆರೋಪದಡಿ ಶ್ರೀನಿವಾಸ್ ಎಂಬಾತನನ್ನು ಮಹಾಲಕ್ಷ್ಮಿ ಲೇಔಟ್ ಪೊಲೀಸರು ಬಂಧಿಸಿದ್ದಾರೆ.

'ದೊಡ್ಡಬಳ್ಳಾಪುರದ ಶ್ರೀನಿವಾಸ್, ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದ. ಆತನಿಂದ ₹35 ಲಕ್ಷ ಮೌಲ್ಯದ 7 ಕಾರುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪಶ್ಚಿಮ ಕಾರ್ಡ್ ರಸ್ತೆಯ ನಿವಾಸಿಯೊಬ್ಬರು, ತಮ್ಮ ಕಾರು ಮಾರಾಟಕ್ಕಿಟ್ಟಿದ್ದರು. ಪರಿಚಯಸ್ಥರೊಬ್ಬರ ಮೂಲಕ ನಿವಾಸಿಯನ್ನು ಸಂಪರ್ಕಿಸಿದ್ದ ಆರೋಪಿ ಶ್ರೀನಿವಾಸ್, ಕಾರು ಖರೀದಿಸುವುದಾಗಿ ಹೇಳಿದ್ದರು. ನ. 8ರಂದು ನಿವಾಸಿಯನ್ನು ಭೇಟಿಯಾಗಿದ್ದ ಆರೋಪಿ, ಟೆಸ್ಟ್ ಡ್ರೈವ್ ಸೋಗಿನಲ್ಲಿ ಕಾರು ತೆಗೆದುಕೊಂಡು ಹೋಗಿ ವಾಪಸು ಬಂದಿರಲಿಲ್ಲ' ಎಂದೂ ಮೂಲಗಳು ತಿಳಿಸಿವೆ.

'ತಾಂತ್ರಿಕ ಪುರಾವೆಗಳನ್ನು ಸಂಗ್ರಹಿಸಿ ಆರೋಪಿಯನ್ನು ವಶಕ್ಕೆ ಪಡೆಯಲಾಯಿತು. ವಿಚಾರಣೆ ನಡೆಸಿದಾಗ ತಪ್ಪೊಪ್ಪಿಕೊಂಡ. ನಗರದ ಹಲವೆಡೆ ಕಾರು ಕದ್ದಿರುವ ಮಾಹಿತಿಯನ್ನೂ ಬಾಯ್ಬಿಟ್ಟ' ಎಂದೂ ಹೇಳಿವೆ.

'ಕದ್ದ ಕಾರುಗಳಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸುತ್ತಿದ್ದ ಆರೋಪಿ, ಕಡಿಮೆ ಬೆಲೆಗೆ ಮಾರುತ್ತಿದ್ದ ' ಎಂದೂ ಪೊಲೀಸ್ ಮೂಲಗಳು ವಿವರಿಸಿವೆ.

ಜೈಲಿಗೆ ಹೋಗಿ ಬಂದಿದ್ದ: 'ವಂಚನೆ, ಕಳ್ಳತನ ಆರೋಪದಡಿ ಶ್ರೀನಿವಾಸ್ ವಿರುದ್ಧ ವಿವಿಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದವು. ಆತನನ್ನು ಬಂಧಿಸಿದ್ದ ದೊಡ್ಡಬಳ್ಳಾಪುರ ಪೊಲೀಸರು, ಜೈಲಿಗೆ ಕಳುಹಿಸಿದ್ದರು. ಜಾಮೀನು ಮೇಲೆ ಹೊರಬಂದಿದ್ದ ಆರೋಪಿ, ಟೆಸ್ಟ್ ಡ್ರೈವ್ ಸೋಗಿನಲ್ಲಿ ಕಳ್ಳತನ ಮುಂದುವರಿಸಿದ್ದ' ಎಂದೂ ಮೂಲಗಳು ಹೇಳಿವೆ.

ಜಿಲ್ಲಾಧಿಕಾರಿ ಮಾತು ನಂಬದ ಹೋರಾಟಗಾರರು

ಬಿಬಿಎಂಪಿ ಕಸ :ಧರಣಿ ಮುಂದುವರಿಕೆ

ದೊಡ್ಡಬಳ್ಳಾಪುರ ತಾಲ್ಲೂಕಿನ ಚಿಗರೇನಹಳ್ಳಿ ಸಮೀಪದ ಬಿಬಿಎಂಪಿ ಕಸ ವಿಲೇವಾರಿ ಘಟಕದಿಂದ ಹೊರ ಬಂದಿರುವ ರಾಸಾಯನಿಕ ಯುಕ್ತ ನೀರನ್ನು ಗುರುವಾರ ಪರಿಶೀಲನೆ ನಡೆಸಿದ ಅಧಿಕಾರಿಗಳು

ದೊಡ್ಡಬಳ್ಳಾಪುರ: ತಾಲ್ಲೂಕಿನ ಚಿಗರೇನಹಳ್ಳಿಯಲ್ಲಿನ ಎಂಎಸ್‌ಜಿಪಿ ಕಸ ವಿಲೇವಾರಿ ಘಟಕಕ್ಕೆ ಬಿಬಿಎಂಪಿ ವ್ಯಾಪ್ತಿಯಿಂದ ಬರುತ್ತಿರುವ ಲಾರಿಗಳನ್ನು ತಡೆದು ಸ್ಥಳೀಯ ಗ್ರಾಮಸ್ಥರು ಗುರುವಾರ ಧರಣಿ ಆರಂಭಿಸಿರುವುದರಿಂದ ಕಸ ತುಂಬಿದ ಲಾರಿಗಳು ದಾಬಸ್‌ಪೇಟೆ-ದೊಡ್ಡಬಳ್ಳಾಪುರ ಹೆದ್ದಾರಿಯುದ್ದಕ್ಕೂ ಸಾಲುಗಟ್ಟಿ ನಿಂತಿವೆ.

ಧರಣಿ ನಿರತ ಸ್ಥಳಕ್ಕೆ ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ರವಿಕುಮಾರ್ ಭೇಟಿ ನೀಡಿದರು. ಅವರು ನಡೆಸಿದ ಮಾತುಕತೆಗೆ ಧರಣಿನಿರತರು ಕವಡೆಕಾಸಿನ ಕಿಮ್ಮತ್ತು ನೀಡದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಯವರು ಬರಿಗೈಯಲ್ಲಿ ಹಿಂದಿರುಗಿದ್ದಾರೆ.

ಈ ಹಿಂದೆ ಎಂಎಸ್‌ಜಿಪಿ ಘಟಕದಲ್ಲಿನ ಅವೈಜ್ಞಾನಿಕ ಕಸ ವಿಲೇವಾರಿ ವಿರುದ್ಧ ಧರಣಿ ನಡೆಸಿದ್ದ ಸಂದರ್ಭದಲ್ಲಿ ಬಿಬಿಎಂಪಿ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿ ನೀಡಿದ್ದ ಎಲ್ಲಾ ಭರವಸೆಗಳು ಸುಳ್ಳಾಗಿವೆ. ಬೆಂಗಳೂರು ನಗರದಲ್ಲಿ ಕಸದ ರಾಶಿ ಹೆಚ್ಚಾದಾಗ ಹೋರಾಟಗಾರರ ಎಲ್ಲಾ ಮಾತುಗಳನ್ನು ಕೇಳಿ ಭರವಸೆ ನೀಡುವ ಅಧಿಕಾರಿ ಮತ್ತೆ ಕಸದ ರಾಶಿ ತಂದು ಹಾಕುತ್ತಿರುವುದು ಮುಂದುವರೆದೇ ಇದೆ.

'ಬಿಬಿಎಂಪಿ ವ್ಯಾಪ್ತಿಯಿಂದ ಇಲ್ಲಿನ ಕಸ ವಿಲೇವಾರಿ ಘಟಕಕ್ಕೆ ಲಾರಿಗಳು ಕಸ ತಂದು ಸುರಿಯುವುದನ್ನು ನಿಲ್ಲಿಸುವವರಿಗೆ ಧರಣಿ ನಿಲ್ಲಿಸಲ್ಲ' ಎಂದು ಭಕ್ತರಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಸಿದ್ದಲಿಂಗಯ್ಯ, ಸಕ್ಕರೆಗೊಲ್ಲಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಗೀತಾ ಗೋವಿಂದರಾಜು, ನವ ಬೆಂಗಳೂರು ಹೋರಾಟ ಸಮಿತಿ ಗೌರವಾಧ್ಯಕ್ಷ ಕೆ.ವಿ.ಸತ್ಯಪ್ರಕಾಶ್ ತಿಳಿಸಿದರು.

ಕಮಲ್ ಪಂತ್ ವಿರುದ್ಧದ ತನಿಖೆಗೆ ತಡೆ

ಬೆಂಗಳೂರು: ಮಾಜಿ ಸಚಿವ ರಮೇಶ ಜಾರಕಿಹೊಳಿ ಅವರ ಲೈಂಗಿಕ ಸಿಡಿ ಆರೋಪದ ಹಗರಣದಲ್ಲಿ ಬೆಂಗಳೂರು ನಗರ ಪೊಲೀಸ್ ಆಯುಕ್ತ ಕಮಲ್ ಪಂತ್, ಡಿಸಿಪಿ ಎಂ.ಎನ್.ಅನುಚೇತ್ ಹಾಗೂ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆ ಅಧಿಕಾರಿ ಬಿ.ಮಾರುತಿ ವಿರುದ್ಧ ತನಿಖೆ ನಡೆಸುವಂತೆ ನಗರದ 8ನೇ ಎಸಿಎಂಎಂ ನ್ಯಾಯಾಲಯ ನೀಡಿದ್ದ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ.

ಈ ಕುರಿತಂತೆ ಕಮಲ್ ಪಂತ್, ಅನುಚೇತ್ ಮತ್ತು ಮಾರುತಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಶ್ರೀನಿವಾಸ ಹರೀಶ್ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ, ಪ್ರತಿವಾದಿಗಳಾದ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆ ಅಧಿಕಾರಿ ಎಸ್‌ಐಟಿ ಹಾಗೂ ಜನಾಧಿಕಾರ ಸಂಘರ್ಷ ಪರಿಷತ್ (ಜೆಎಸ್‌ಪಿ) ಅಧ್ಯಕ್ಷ ಆದರ್ಶ ಅಯ್ಯರ್ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

ಅರ್ಜಿದಾರರ ಪರ ವಾದ ಮಂಡಿಸಿದ ವಕೀಲ ಪಿ.ಪ್ರಸನ್ನ ಕುಮಾರ್, 'ಮಾಜಿ ಸಚಿವರ ವಿರುದ್ಧದ ಲೈಂಗಿಕ ಸಿಡಿ ಆರೋಪ ಪ್ರಕರಣದಲ್ಲಿನ ಮಹಿಳೆ ನೇರವಾಗಿ ಪೊಲೀಸರಿಗೆ ದೂರು ನೀಡಿಲ್ಲ. ಬದಲಾಗಿ, ಕನಕಪುರದ ದಿನೇಶ್ ಕಲ್ಲಹಳ್ಳಿ ಎಂಬುವರು ಹಗರಣವನ್ನು ಬಹಿರಂಗಗೊಳಿಸಿದ ನಂತರ ಕಬ್ಬನ್ ಪಾರ್ಕ್ ಪೊಲೀಸರಿಗೆ ನೀಡಿದ್ದ ತಮ್ಮ ದೂರನ್ನು ವಾಪಸು ಪಡೆದಿದ್ದರು. ಅಂತೆಯೇ ಸಿಡಿಯಲ್ಲಿನ ತರುಣಿಯನ್ನು ಉತ್ತರ ಕರ್ನಾಟಕಕ್ಕೆ ಸೇರಿದವಳು ಎಂದು ಅಸ್ಪಷ್ಟವಾಗಿ ಉಲ್ಲೇಖಿಸಿದ್ದರು' ಎಂದರು.

'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ತನಿಖೆ ನಡೆಸಿರುವ ಎಸ್‌ಐಟಿ ಅಂತಿಮ ವರದಿ ತಯಾರಿಸಿದೆ. ಹಗರಣವನ್ನು ಸಿಬಿಐ ತನಿಖೆಗೆ ಕೋರಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸುತ್ತಿದೆ' ಎಂದರು. ಈ ವಾದವನ್ನು ಮನ್ನಿಸಿದ ನ್ಯಾಯಪೀಠ, ಮ್ಯಾಜಿಸ್ಟ್ರೇಟ್ ಆದೇಶಕ್ಕೆ ಮಧ್ಯಂತರ ತಡೆ ನೀಡಿ ವಿಚಾರಣೆ ಮುಂದೂಡಿದೆ.

ಇನ್‌ಸ್ಪೆಕ್ಟರ್ ಕಚೇರಿಯ ನೂತನ ಕಟ್ಟಡದ ಶಂಕುಸ್ಥಾಪನೆ

ವಾರಸುದಾರರಿಗೆ ಸ್ವತ್ತುಗಳ ಹಸ್ತಾಂತರ

ಪ್ರಜಾವಾಣಿ ವಾರ್ತೆ

ವಶಪಡಿಸಿಕೊಂಡ ಸ್ವತ್ತುಗಳನ್ನು ಕೇಂದ್ರ ವಲಯ ಐಜಿಪಿ ಎಂ.ಚಂದ್ರಶೇಖರ್ ಪರಿಶೀಲಿಸಿದರು. ಎಸ್ಪಿ ಕೋನವಂಶಿ ಕೃಷ್ಣ, ಡಿವೈಎಸ್ಪಿ ಎಚ್‌.ಸಿ.ಜಗದೀಶ್ ಇದ್ದಾರೆ.

ನೆಲಮಂಗಲ: ತಾಲ್ಲೂಕಿನ ಬೊಮ್ಮನಹಳ್ಳಿಯಲ್ಲಿ ₹4.05 ಕೋಟಿ ವೆಚ್ಚದ ಗ್ರಾಮಾಂತರ ಠಾಣೆ, ಸಂಚಾರಿ ಠಾಣೆ, ಇನ್‌ಸ್ಪೆಕ್ಟರ್ ಕಚೇರಿಯ ನೂತನ ಕಟ್ಟಡದ ಶಂಕುಸ್ಥಾಪನೆಯನ್ನು ಗುರುವಾರ ನೆರವೇರಿಸಲಾಯಿತು ಎಂದು ಕೇಂದ್ರ ವಲಯ ಐಜಿಪಿ ಎಂ. ಚಂದ್ರಶೇಖರ್ ತಿಳಿಸಿದರು.

ಪಟ್ಟಣದ ಠಾಣೆಯಲ್ಲಿ ನೆಲಮಂಗಲ ಉಪವಿಭಾಗದಲ್ಲಿ ವಶಪಡಿಸಿಕೊಂಡ ಸ್ವತ್ತುಗಳನ್ನು ವಾರಸುದಾರರಿಗೆ ವಿತರಿಸಿ ಮಾತನಾಡಿದ ಅವರು, 'ನಿರಂತರವಾಗಿ ದುಷ್ಕೃತ್ಯಗಳಲ್ಲಿ ತೊಡಗುತ್ತಿರುವ ಆರೋಪಿಗಳ ಜಾಮೀನನ್ನು ರದ್ದು ಮಾಡುವ, ಜಾಮೀನು ಪಡೆದು ನ್ಯಾಯಾಲಯಗಳಿಗೆ ಹಾಜರಾಗದವರ ಮತ್ತು ಜಾಮೀನು ಹಾಕಿದವರ ಸ್ವತ್ತುಗಳನ್ನು ವಶಪಡಿಸಿಕೊಳ್ಳುವ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದರು.

'ರಾಜಕಾಲುವೆ, ನಾಲೆಗಳಿಗೆ ಕಟ್ಟಡ ನಿರ್ಮಾಣದ ತ್ಯಾಜ್ಯ ಹಾಗೂ ಇತರೆ ತ್ಯಾಜ್ಯಗಳನ್ನು ಸುರಿಯುತ್ತಿರುವುದನ್ನು ಸಾರ್ವಜನಿಕರು ಗಮನಿಸಿದರೆ ಕೂಡಲೇ ಪೊಲೀಸರಿಗೆ ತಿಳಿಸಬೇಕು' ಎಂದರು.

ನೆಲಮಂಗಲ ಉಪ ವಿಭಾಗದ ವ್ಯಾಪ್ತಿಯಲ್ಲಿ ಮೂರು ತಿಂಗಳಲ್ಲಿ 15 ಆರೋಪಿಗಳನ್ನು ಬಂಧಿಸಿ ಅವರಿಂದ 423 ಗ್ರಾಂ ಚಿನ್ನಾಭರಣ, 1.41 ಕೆ.ಜಿ ಬೆಳ್ಳಿ ಆಭರಣ, 855 ಮೊಬೈಲ್, 11 ದ್ವಿಚಕ್ರ ವಾಹನ, 2 ಲಗೇಜ್ ಆಟೊ, 25 ಸಾವಿರ ನಗದು ಸೇರಿದಂತೆ ಒಟ್ಟು ₹95 ಲಕ್ಷ ಮೌಲ್ಯದ ಕಳವು ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದರು.

ಕಾರ್ಯಾಚರಣೆಯಲ್ಲಿ ಉತ್ತಮ ಕಾರ್ಯನಿರ್ವಹಿಸಿದ ಪೊಲೀಸ್ ಸಿಬ್ಬಂದಿಗಳಿಗೆ ಪ್ರಶಂಸಾ ಪತ್ರ ವಿತರಿಸಿದರು. ಎಸ್ಪಿ ಡಾ.ಕೋನ ವಂಸಿ ಕೃಷ್ಣ, ಹೆಚ್ಚುವರಿ ಎಸ್ಪಿ ಲಕ್ಷ್ಮೀಗಣೇಶ್, ಡಿವೈಎಸ್ಪಿ ಎಚ್‌.ಸಿ.ಜಗದೀಶ್, ಇನ್‌ಸ್ಪೆಕ್ಟರ್ ಹರೀಶ್, ಇನ್‌ಸ್ಪೆಕ್ಟರ್‌ಗಳಾದ ಎ.ವಿ.ಕುಮಾರ್, ಬಿ.ಎಸ್. ಮಂಜುನಾಥ್ ಇದ್ದರು

ಠಾಣೆಗೆ ಬಂದ ಹಂಸಲೇಖ; ಪರ– ವಿರೋಧ ಚಕಮಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೇಜಾವರ ಶ್ರೀಗಳ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ' ಎಂಬ ಆರೋಪದಡಿ ಬಸವನಗುಡಿ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ವಿಚಾರಣೆಗೆ ಸಂಗೀತ ನಿರ್ದೇಶಕ ಹಂಸಲೇಖ ಅವರು ಗುರುವಾರ ಹಾಜರಾದರು.

ಹಂಸಲೇಖ ಅವರ ಕಾರು ಠಾಣೆ ಆವರಣಕ್ಕೆ ಬರುತ್ತಿದ್ದಂತೆ ಪರ– ವಿರೋಧ ಬಣಗಳ ನಡುವೆ ಚಕಮಕಿಯೂ ನಡೆಯಿತು. ಮಧ್ಯಪ್ರವೇಶಿಸಿದ ಪೊಲೀಸರು ಪರಿಸ್ಥಿತಿ ತಿಳಿಗೊಳಿಸಿದರು.

'ಮೈಸೂರಿನಲ್ಲಿ ಇತ್ತೀಚೆಗೆ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಹಂಸಲೇಖ, ಪೇಜಾವರ ಶ್ರೀಗಳ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ' ಎಂದು ಆರೋಪಿಸಿ ವಿಪ್ರ ಯುವ ವೇದಿಕೆ ಅಧ್ಯಕ್ಷ ಪವನ್‌ಕುಮಾರ್ ಶರ್ಮ ಅವರು ಬಸವನಗುಡಿ ಠಾಣೆಗೆ ದೂರು ನೀಡಿದ್ದರು.

ಎಫ್‌ಐಆರ್ ದಾಖಲಿಸಿಕೊಂಡಿದ್ದ ಪೊಲೀಸರು, ಪ್ರಕರಣದ ವಿಚಾರಣೆಗೆ ಹಾಜರಾಗುವಂತೆ ಹಂಸಲೇಖ ಅವರಿಗೆ ನೋಟಿಸ್ ನೀಡಿದ್ದರು. ಅನಾರೋಗ್ಯ ಕಾರಣ ನೀಡಿದ್ದ ಹಂಸಲೇಖ, ಕಾಲಾವಕಾಶ ಕೋರಿದ್ದರು. ನಿಗದಿತ ದಿನಗಳು ಮುಗಿದಿದ್ದರಿಂದ ಠಾಣೆಗೆ ಬಂದ ಹಂಸಲೇಖ, ಪೊಲೀಸರ ಪ್ರಶ್ನೆಗಳಿಗೆ ಉತ್ತರಿಸಿದರು. ನಟ ಚೇತನ್ ಸಹ ಜೊತೆಗೆ ಬಂದಿದ್ದರು.

ಠಾಣೆ ಎದುರು ಚಕಮಕಿ: ಹಂಸಲೇಖ ವಿಚಾರಣೆಗೆ ಬರುತ್ತಿದ್ದ ಸುದ್ದಿ ತಿಳಿದ ಬಜರಂಗದಳ ಹಾಗೂ ವಿವಿಧ ಸಂಘಟನೆಗಳ ಸದಸ್ಯರು, ಬಸವನಗುಡಿ ಠಾಣೆ ಎದುರು ಸೇರಿದ್ದರು. ಕಪ್ಪು ಬಾವುಟ ತೋರಿಸಿ ಘೋಷಣೆ ಕೂಗಿದರು.

ಠಾಣೆ ಎದುರು ಬ್ಯಾರಿಕೇಡ್‌ಗಳನ್ನು ನಿಲ್ಲಿಸಿದ್ದ ಪೊಲೀಸರು, ಎರಡೂ ಬಣದವರನ್ನು ನಿಯಂತ್ರಿಸಿದರು.

'ಹೇಳಿಕೆ ಪರಿಶೀಲಿಸಿ ಕ್ರಮ'

ವಿಚಾರಣೆ ಬಗ್ಗೆ ಪ್ರತಿಕ್ರಿಯಿಸಿದ ಪೊಲೀಸ್ ಅಧಿಕಾರಿಯೊಬ್ಬರು, 'ಹಂಸಲೇಖ ಅವರಿಂದ ಹೇಳಿಕೆ ಪಡೆಯಲಾಗಿದ್ದು, ಅದನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಅಗತ್ಯ ಬಿದ್ದರೆ ಮತ್ತೊಮ್ಮೆ ವಿಚಾರಣೆಗೆ ಕರೆಸುವುದಾಗಿಯೂ ಹೇಳಿ ಕಳುಹಿಸಲಾಗಿದೆ' ಎಂದರು.

ವಕೀಲರ ಪರಿಷತ್ ಕಲ್ಯಾಣ ನಿಧಿ ಪಾವತಿಗೆ ಗಡುವು

ಬೆಂಗಳೂರು: ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಸದಸ್ಯ ವಕೀಲರು ಪ್ರಸಕ್ತ 2021ರ ಸಾಲಿನ ಕಲ್ಯಾಣ ನಿಧಿ ಪಾವತಿಸಲು ಡಿಸೆಂಬರ್ 31 ಕಡೆಯ ದಿನವಾಗಿರುತ್ತದೆ.

ಈ ಕುರಿತಂತೆ ಪರಿಷತ್ ಅಧ್ಯಕ್ಷ ಎಲ್. ಶ್ರೀನಿವಾಸಬಾಬು ಸುತ್ತೋಲೆ ಹೊರಡಿಸಿದ್ದು, 'ದಂಡರಹಿತವಾಗಿ ಪಾವತಿಸಲು ಡಿಸೆಂಬರ್ 31 ಕಡೆಯ ದಿನವಾಗಿರುತ್ತದೆ. ನಂತರ ಪ್ರತಿ ತಿಂಗಳೂ ₹100 ದಂಡದಂತೆ 2022ರ ಜೂನ್ ಅಂತ್ಯದವರೆಗೂ ಭರ್ತಿ ಮಾಡಬಹುದು' ಎಂದು ತಿಳಿಸಿದ್ದಾರೆ.

ಆನ್‌ಲೈನ್‌ಲ್ಲಿಯೂ ಹಣ ಪಾವತಿಗೆ ಅವಕಾಶ ಕಲ್ಪಿಸಲಾಗಿದ್ದು ಹೆಚ್ಚಿನ ವಿವರಗಳಿಗೆ https://ksbc.org.in ವೆಬ್‌ಸೈಟ್ ಸಂಪರ್ಕಿಸಬಹುದಾಗಿದೆ.

‘ಜಮೀನು ಮೈಸೂರು ಮಹಾರಾಜರ ವಂಶಸ್ಥರ ಸ್ವತ್ತು’

ರಾಜ್ಯದ ಮೇಲ್ಮನವಿ ವಜಾಗೊಳಿಸಿದ ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ನವದೆಹಲಿ: 1,561.31 ಎಕರೆ ಜಮೀನಿನ ಒಡೆತನ ಮೈಸೂರಿನ ಮಹಾರಾಜರ ವಂಶಸ್ಥರಿಗೆ ಸೇರಿದ್ದು ಎಂದು ಹೈಕೋರ್ಟ್ ನೀಡಿದ್ದ ತೀರ್ಪು ಪ್ರಶ್ನಿಸಿ, ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ಈ ಹಿಂದೆ ತಿರಸ್ಕರಿಸಿದ್ದ ಜುಲೈ 26ರ ತನ್ನ ಆದೇಶವನ್ನು ಮರು ಪರಿಶೀಲಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿಗಳಾದ ಯು.ಯು. ಲಲಿತ್ ಮತ್ತು ಅಜಯ್ ರಸ್ತೋಗಿ ಅವರ ಪೀಠ ತಿರಸ್ಕರಿಸಿದೆ. ‘ಮೇಲ್ಮನವಿಯಲ್ಲಿ ಸರ್ಕಾರ ಪ್ರಸ್ತಾಪಿಸಿರುವ ಅಂಶಗಳನ್ನು ಗಮನಿಸಿದ್ದೇವೆ. ಇದರಲ್ಲಿ ಮಧ್ಯಪ್ರವೇಶಿಸುವಂತಹ ಯಾವುದೇ ಅಂಶಗಳು ನಮಗೆ ಗೋಚರಿಸಿಲ್ಲ’ ಎಂದು ನವೆಂಬರ್ 23ರಂದು ಹೊರಡಿಸಿದ ಆದೇಶದಲ್ಲಿ ಪೀಠ ತಿಳಿಸಿದೆ.

2020ರ ಡಿಸೆಂಬರ್ 15ರಂದು ಹೈಕೋರ್ಟ್ ನೀಡಿದ್ದ ಅಭಿಪ್ರಾಯವನ್ನು ಪರಿಶೀಲಿಸಿದ ಬಳಿಕವೇ, ಈ ಹಿಂದೆ ಅರ್ಜಿದಾರರು ಎತ್ತಿದ್ದ ವಿಚಾರದ ಕುರಿತು ಆದೇಶ ಹೊರಡಿಸಲಾಗಿತ್ತು ಎಂಬುದನ್ನು ಕೋರ್ಟ್ ತಿಳಿಸಿತು.

1,561.31 ಎಕರೆ ಜಮೀನಿನ ಮೇಲೆ ನಿಯಂತ್ರಣ ಸಾಧಿಸುವ ಯತ್ನದ ಭಾಗವಾಗಿ ರಾಜ್ಯ ಸರ್ಕಾರವು ಮತ್ತೆ ಮೇಲ್ಮನವಿ ಅರ್ಜಿ ಸಲ್ಲಿಸಿತ್ತು. ಜಮೀನನ್ನು ತಮ್ಮ ಹೆಸರಿಗೆ ಮಾಡಿಕೊಂಡಿರುವ ಜನರು ಈ ಆದೇಶದಿಂದ ನಿರಾಳರಾಗಿದ್ದಾರೆ. ಈ ಜಮೀನು ಸರ್ಕಾರಕ್ಕೆ ಸೇರಿದ ಆಸ್ತಿ ಎಂಬುದಾಗಿ ಜಿಲ್ಲಾಧಿಕಾರಿ ನೀಡಿದ್ದ ಆದೇಶವನ್ನು ಹೈಕೋರ್ಟ್ ಈ ಮೊದಲು ರದ್ದುಪಡಿಸಿತ್ತು.

1950ರ ಸೇರ್ಪಡೆ ಒಪ್ಪಂದ ಹಾಗೂ ಇದು ‘ಖರಾಬು’ ಜಮೀನು ಎಂಬುದಾಗಿ ಬ್ರಿಟಿಷ್ ಸರ್ಕಾರ ತೆಗೆದುಕೊಂಡಿದ್ದ ನಿರ್ಣಯಗಳಿಗೆ ಹೈಕೋರ್ಟ್ ಆದೇಶ ವಿರುದ್ಧವಾಗಿದೆ ಎಂದು ಸರ್ಕಾರ ವಾದ ಮಂಡಿಸಿತ್ತು. ಇಂತಹ ಜಮೀನು ಸಾರ್ವಜನಿಕ ಆಸ್ತಿಯಾಗಿರುತ್ತದೆ.

‘ಜನರು ಈಗಾಗಲೇ ಈ ಜಮೀನು ಖರೀದಿಸಿದ್ದಾರೆ. ಆದರೆ ದಶಕಗಳ ಬಳಿಕ ಸರ್ಕಾರ ಎಚ್ಚೆತ್ತುಕೊಂಡಿದೆ. 1950ರ ಬಳಿಕ ಸರ್ಕಾರವು ಜಮೀನುಗಳನ್ನು ತನ್ನ ವಶಕ್ಕೆ ತೆಗೆದುಕೊಂಡಿದೆ. ಅಂದರೆ, ಜಮೀನು ಅದಕ್ಕೂ ಮುನ್ನ ಮಹಾರಾಜರಿಗೆ ಸೇರಿತ್ತು ಎಂಬುದು ಇದರರ್ಥ’ ಎಂದು ಕೋರ್ಟ್ ಹೇಳಿತು.

1,563.31 ಎಕರೆ ಪೈಕಿ 600 ಎಕರೆಯಲ್ಲಿ ಸರ್ಕಾರ ಮತ್ತು ಸಾರ್ವಜನಿಕ ಆಸ್ತಿಯಿದೆ. ಕೆರೆಗಳು, ಅರಣ್ಯ ಪ್ರದೇಶ, ರಾಜ್ಯ ಆಡಳಿತ ತರಬೇತಿ ಸಂಸ್ಥೆ, ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಜಾಕಿ ಕ್ವಾರ್ಟರ್ಸ್, ರಸ್ತೆಗಳು, ಪ್ರಾಣಿ ಸಂಗ್ರಹಾಲಯ, ರೇಸ್ ಕೋರ್ಸ್, ಲಲಿತ್ ಮಹಲ್ ಅರಮನೆ, ಮಸೀದಿ ಮೊದಲಾದವು ಇವೆ.

ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಸಾಹಿತಿ ಡಾ.ಬೈರಮಂಗಲ ರಾಮೇಗೌಡ ಉದ್ಘಾಟಿಸಿದರು. ಶೇಷಾದ್ರಿಪುರ ಶಿಕ್ಷಣದತ್ತಿಯ ಟ್ರಸ್ಟಿ ಜಿ.ಕೃಷ್ಣಸ್ವಾಮಿ, ಪ್ರಾಂಶುಪಾಲ ಪ್ರೊ.ಟಿ.ದೊಡ್ಡೇಗೌಡ, ಐಐಎಚ್‌ಎಂ ಸಂಸ್ಥೆಯ ಸಾಗರ್ ಇದ್ದರು.

‘ಅನ್ಯ ಭಾಷಿಕರಿಗೆ ಕನ್ನಡ ಕಲಿಸಿ’

ಪ್ರಜಾವಾಣಿ ವಾರ್ತೆ

ಯಲಹಂಕ: ‘ಸರ್ಕಾರದ ನಿಯಮ ಪಾಲನೆಗಾಗಿ ಮಾತ್ರ ಕನ್ನಡ ರಾಜ್ಯೋತ್ಸವದ ಆಚರಣೆಯಾಗದೆ ನಮ್ಮ ಭಾಷೆಯ ಬಗ್ಗೆ ಶ್ರದ್ಧೆ, ಭಕ್ತಿ ಮತ್ತು ಆತ್ಮಸಮರ್ಪಣೆಯ ಮೂಲಕ ಆಚರಣೆಯಾಗಬೇಕು. ಆಗ ಮಾತ್ರ ಕನ್ನಡಭಾಷೆಯ ಬೆಳವಣಿಗೆ ಸಾಧ್ಯ’ ಎಂದು ಲೇಖಕ ಡಾ.ಬೈರಮಂಗಲ ರಾಮೇಗೌಡ ಅಭಿಪ್ರಾಯಪಟ್ಟರು.

ಉಪನಗರದ ಶೇಷಾದ್ರಿಪುರ ಪದವಿಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ‘ಹಲವು ರಾಜ್ಯಗಳಲ್ಲಿ ಹರಿದು ಹಂಚಿಹೋಗಿದ್ದ ಕನ್ನಡ ಭಾಷಿಕರನ್ನು ಒಗ್ಗೂಡಿಸಿ, ಕರ್ನಾಟಕ ರಾಜ್ಯವನ್ನು ರಚಿಸುವಲ್ಲಿ ಭಾಷಾವಾರು ಪ್ರಾಂತ್ಯ ಹೋರಾಟಗಾರರ ಕೊಡುಗೆ ಸ್ಮರಣೀಯ. ಇದಕ್ಕಾಗಿ ಹಲವು ಸಾಹಿತಿಗಳು, ಕನ್ನಡಪರ ಹೋರಾಟಗಾರರು ಶ್ರಮಿಸಿದ್ದು, ಅವರ ಹೋರಾಟದ ಪ್ರತಿಫಲವಾಗಿ ಈ ರಾಜ್ಯ ಉದಯವಾಗಿದೆ’ ಎಂದರು.

‘ಕನ್ನಡಭಾಷೆ ಉಳಿಯಬೇಕಾದರೆ ಕನ್ನಡಿಗರಾದ ನಾವು ಅನ್ಯಭಾಷಿಕರಿಗೆ ಪ್ರೀತಿ ಮತ್ತು ಒತ್ತಾಯಪೂರ್ವಕವಾಗಿಯಾದರೂ ಕನ್ನಡ ಕಲಿಸುವ ಕಾರ್ಯಕ್ಕೆ ಮುಂದಾಗಬೇಕು. ನಮ್ಮ ಸ್ವಾಭಿಮಾನವನ್ನು ಬಲಿಕೊಟ್ಟು, ಅನ್ಯಭಾಷೆಗಳಿಗೆ ಮಣೆಹಾಕುತ್ತಾ ಸಾಗಿದರೆ ಕನ್ನಡಭಾಷೆ ಬೆಳೆಯುವುದಾದರೂ ಹೇಗೆ?’ ಎಂದು ಪ್ರಶ್ನಿಸಿದರು.

ಶೇಷಾದ್ರಿಪುರ ಶಿಕ್ಷಣದತ್ತಿಯ ಟ್ರಸ್ಟಿ ಜಿ.ಕೃಷ್ಣಸ್ವಾಮಿ ಮಾತನಾಡಿ, ‘ಶಿಸ್ತು, ಸಂಯಮ ಮತ್ತಿತರ ಗುಣಗಳನ್ನು ಅಳವಡಿಸಿಕೊಳ್ಳುವ ಮೂಲಕ ನಮ್ಮತನವನ್ನು ಉಳಿಸಿಕೊಳ್ಳಬೇಕಾದರೆ ಇತರೆ ರಾಜ್ಯದವರಿಗೂ ಕನ್ನಡವನ್ನು ಕಲಿಸುವ ಕಾರ್ಯ ಅಗತ್ಯವಾಗಿ ಆಗಬೇಕಿದೆ’ ಎಂದರು.

ಪ್ರಾಂಶುಪಾಲ ಪ್ರೊ. ಟಿ.ದೊಡ್ಡೇಗೌಡ, ಐಐಎಚ್‌ಎಂ ಸಂಸ್ಥೆಯ ಸಾಗರ್, ಕನ್ನಡ ವಿಭಾಗದ ಮುಖ್ಯಸ್ಥರಾದ ಹ.ವಿಜಯಾ, ಪಿ.ಬಿಂದುಮತಿ, ಸಾಂಸ್ಕೃತಿಕ ಸಮಿತಿಯ ಮುಖ್ಯಸ್ಥರಾದ ಕೆ.ವಿ.ಸರಸ್ವತಿ ಇದ್ದರು.

ಸಿಂಗಸಂದ್ರ ವಾರ್ಡ್‌ನ ನಾಲ್ಕು ಬಡವಾಣೆ ನಿವಾಸಿಗಳ ಸಂಚಾರಕ್ಕೆ ತೊಂದರೆ

ಕೆಸರುಗದ್ದೆಯಾಗಿರುವ ರಸ್ತೆ: ಪರದಾಟ

• ಲಿಂಗರಾಜು

ಬೊಮ್ಮನಹಳ್ಳಿ: ಸಿಂಗಸಂದ್ರ (191) ವಾರ್ಡ್‌ನ ಜಿ.ಕೆ.ಬಡಾವಣೆ, ಈರಪ್ಪರೆಡ್ಡಿ ಬಡಾವಣೆ, ವೆಂಕಟಾದ್ರಿ ಬಡಾವಣೆ, ಏಕದಂತ ಬಡಾವಣೆ ಹಾಗೂ ಸಾಯಿ ಬಡಾವಣೆಯ ನಿವಾಸಿಗಳು ಕೆಸರು ಗದ್ದೆಯಂತಾಗಿರುವ ರಸ್ತೆಗಳಲ್ಲಿ ಸಂಚರಿಸಲು ಸಾಧ್ಯವಾಗದೇ ಪರಿತಪಿಸುತ್ತಿದ್ದಾರೆ.

ಬಡಾವಣೆಗಳ ಬಹುತೇಕ ರಸ್ತೆಗಳು ಕೆಸರುಮಯವಾಗಿದ್ದು, ಶಾಲಾ ಬಸ್‌ಗಳು, ಕಸದ ವಾಹನ, ಸಿಲಿಂಡರ್, ಆಟೋ – ಟ್ಯಾಕ್ಸಿಗಳು ಇತ್ತ ಬರುವುದನ್ನು ನಿಲ್ಲಿಸಿವೆ ಎಂದು ನಿವಾಸಿಗಳು ದೂರುತ್ತಾರೆ. ನಾಲ್ಕು ಬಡಾವಣೆಗಳಿಗೆ ಸಂಪರ್ಕ ಕಲ್ಪಿಸುವ ಒಂದೂವರೆ ಕಿ.ಮೀ ಉದ್ದದ 14ನೇ ಮುಖ್ಯ ರಸ್ತೆ ಪೂರ್ತಿಯಾಗಿ ಕೆಸರು ತುಂಬಿಕೊಂಡಿದ್ದು, ಕಾಲಿಡಲೂ ಸಾಧ್ಯವಾಗುತ್ತಿಲ್ಲ ಎಂದು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ಹಿಡಿ ಶಾಪ ಹಾಕುತ್ತಿದ್ದಾರೆ.

ನಾಲ್ಕೂ ಬಡಾವಣೆಗಳಲ್ಲಿ ಸುಮಾರು 2,600 ಕುಟುಂಬಗಳು ವಾಸವಾಗಿವೆ. ಎರಡು ಶಾಲೆಗಳು ಇವೆ. ದೊಡ್ಡ ಸಂಖ್ಯೆಯ ಜನ ಸಂಚರಿಸುವ ರಸ್ತೆಗಳು 10 ವರ್ಷಗಳಿಂದಲೂ ಡಾಂಬರನ್ನೇ ಕಂಡಿಲ್ಲ. ಇತ್ತೀಚೆಗೆ ಜಲಮಂಡಳಿಯವರು ಕಾವೇರಿ ನೀರು ಪೈಪ್ ಲೈನ್ ಹಾಕಲು ರಸ್ತೆಗಳನ್ನು ಅಗೆದಿದ್ದರು.

ಪ್ರಜಾವಾಣಿ ವಿಶೇಷ

ಸಿಂಗಸಂದ್ರ ವಾರ್ಡ್‌ನ ಬಡಾವಣೆಯೊಂದರಲ್ಲಿ ಕೆಸರು ಗದ್ದೆಯಾಗಿರುವ ರಸ್ತೆ

ಇದರ ಬೆನ್ನಲ್ಲೇ, ಜಿಯೋ ಕೇಬಲ್ ಹಾಗೂ ಗ್ಯಾಸ್ ಪೈಪ್‌ಲೈನ್‌ಗಾಗಿ ರಸ್ತೆಗಳನ್ನು ಅಗೆಯಲಾಗಿತ್ತು. ಇದರಿಂದಾಗಿ ರಸ್ತೆಗಳು ಸಂಪೂರ್ಣ ಹಾಳಾಗಿವೆ ಎಂದು ಸ್ಥಳೀಯರು ಹೇಳುತ್ತಾರೆ.

110 ಹಳ್ಳಿಗಳ ಕಾವೇರಿ ಕುಡಿಯುವ ನೀರು ಪೈಪ್‌ಲೈನ್ ಅಳವಡಿಕೆಗೆ ಒಟ್ಟು 78 ಕಿ.ಮೀ ರಸ್ತೆ ನೀಡಲಾಗಿದೆ. ಆದರೆ, ಕೇವಲ 14 ಕಿ.ಮೀ ರಸ್ತೆಗಳ ದುರಸ್ತಿಗಾಗಿ ಹಣ ನೀಡಲಾಗಿದೆ. ಅಗತ್ಯವಿರುವಷ್ಟು ಅನುದಾನ ನೀಡದಿದ್ದಲ್ಲಿ ನಾವೇನು ಮಾಡಲು ಸಾಧ್ಯ? ಎಂದು ಹೆಸರೇಳಲಿಚ್ಛಿಸದ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

‘ಕಾವೇರಿ ಪೈಪ್ ಲೈನ್‌ಗಾಗಿ ರಸ್ತೆ ಅಗೆದು ಸರಿಯಾಗಿ ಮುಚ್ಚಲಿಲ್ಲ. ಕನಿಷ್ಠ ಮೆಟಲಿಂಗ್ ಮಾಡಬಹುದಿತ್ತು. ಅದನ್ನೂ ಮಾಡಲಿಲ್ಲ. ಪ್ರತಿ ಮಳೆಗಾಲದಲ್ಲೂ ರಸ್ತೆಗಳು ಇದೇ ರೀತಿ ಇರುತ್ತವೆ. 15 ವರ್ಷಗಳಿಂದಲೂ ರಸ್ತೆ ದುರಸ್ತಿ ಕಾರ್ಯ ನಡೆದಿಲ್ಲ. ಜನ ಪ್ರಶ್ನಿಸಿದಾಗ ಜನಪ್ರತಿನಿಧಿಗಳಿಂದ ಆಶ್ವಾಸನೆ ಸಿಗುತ್ತದೆ. ನಂತರ ಅದು ಅಲ್ಲಿಗೆ ನಿಂತು ಹೋಗುತ್ತದೆ’ ಸ್ಥಳೀಯ ನಿವಾಸಿ ಬಾಬುರೆಡ್ಡಿ ದೂರಿದರು.

‘ಕೆಲ ದಿನಗಳ ಹಿಂದೆ ರಸ್ತೆ ರಿಪೇರಿಗಾಗಿ ಗುದ್ದಲಿ ಪೂಜೆ ಮಾಡಿದ್ದರು. ಆದರೆ, ಏನಾಯಿತೋ ಗೊತ್ತಿಲ್ಲ, ಕೆಲಸ ಮಾತ್ರ ಇನ್ನೂ ಆರಂಭವಾಗಿಲ್ಲ, ಜನರ ಕಣ್ಣೊರೆಸುವ ತಂತ್ರವಾಗಿತ್ತು ಎನಿಸುತ್ತದೆ’ ಎಂದು ಸಾಯಿ ಬಡಾವಣೆಯ ನಿವಾಸಿ ರಾಘವೇಂದ್ರ ಆಕ್ರೋಶ ವ್ಯಕ್ತಪಡಿಸಿದರು.

‘ಕಳೆದ ಚುನಾವಣೆಯಲ್ಲಿ ಈ ಬಡಾವಣೆಗಳಿಂದ ಹೆಚ್ಚು ಮತಗಳು ಬಂದಿಲ್ಲ ಎಂಬ ಕಾರಣ ಮುಂದೊಡ್ಡಿ ಇಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿಲ್ಲ. ಜನಪ್ರತಿನಿಧಿಗಳಾಗಿ ಈ ರೀತಿಯ ತಾರತಮ್ಯ ಮಾಡುವುದು ಸರಿಯಲ್ಲ’ ಎಂದು ಈರಪ್ಪರೆಡ್ಡಿ ಬಡಾವಣೆಯ ನಿವಾಸಿ ಪ್ರದೀಪ್ ದೂರಿದರು.

‘110 ಹಳ್ಳಿಗಳ ರಸ್ತೆ ದುರಸ್ತಿಗಾಗಿ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ 28 ಹಳ್ಳಿಗಳ ರಸ್ತೆ ದುರಸ್ತಿ ಹಾಗೂ ಒಳಚರಂಡಿಗಾಗಿ ₹175 ಕೋಟಿ ತೆಗೆದಿರಿಸಲಾಗಿದೆ. ಒಂದು ತಿಂಗಳಲ್ಲಿ ಕಾಮಗಾರಿ ಆರಂಭವಾಗುವ ನಿರೀಕ್ಷೆ ಇದೆ’ ಎಂದು ಬಿಬಿಎಂಪಿ ಬೊಮ್ಮನಹಳ್ಳಿ ವಲಯದ ಜಂಟಿ ಆಯುಕ್ತ ಎಂ.ರಾಮಕೃಷ್ಣ ಹೇಳಿದರು. ಶಾಸಕ ಎಂ.ಕೃಷ್ಣಪ್ಪ ಪ್ರತಿಕ್ರಿಯೆಗೆ ಸಿಗಲಿಲ್ಲ.

‘ವರ್ಗಾವಣೆ ಪತ್ರ ಕೊಡದಿದ್ದರೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಅನುದಾನರಹಿತ ಶಾಲೆಗಳನ್ನು ತ್ಯಜಿಸಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ ದಾಖಲಾಗಿರುವ ವಿದ್ಯಾರ್ಥಿಗಳಿಗೆ, ಖಾಸಗಿ ಅನುದಾನರಹಿತ ಶಾಲೆಗಳ ಮುಖ್ಯ ಶಿಕ್ಷಕರು ವಾರದೊಳಗೆ ಕಡ್ಡಾಯವಾಗಿ ವರ್ಗಾವಣೆ ಪತ್ರ (ಟಿ.ಸಿ) ವಿತರಿಸಬೇಕು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಖಾಸಗಿ ಅನುದಾನರಹಿತ ಶಾಲೆಗಳ ಮುಖ್ಯ ಶಿಕ್ಷಕರು ವರ್ಗಾವಣೆ ಪತ್ರ ನೀಡದೇ ಇದ್ದರೆ, ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಬಿಇಒ) ಪೋಷಕರು ಮನವಿ ಸಲ್ಲಿಸಬೇಕು. ಸಂಬಂಧಪಟ್ಟ ಬಿಇಒಗಳು ಆ ಶಾಲೆಯ ಆಡಳಿತ ಮಂಡಳಿ ಮತ್ತು ಮುಖ್ಯ ಶಿಕ್ಷಕರಿಗೆ ತಿಳಿವಳಿಕೆ ಪತ್ರ ನೀಡಬೇಕು. ಬಿಇಒಗಳು ನೀಡಿದ ಅವಧಿಯ ಒಳಗೆ ವರ್ಗಾವಣೆ ಪತ್ರ ನೀಡಲು ವಿಫಲವಾದ ಶಾಲಾ ಆಡಳಿತ ಮಂಡಳಿ ಮತ್ತು ಮುಖ್ಯ ಶಿಕ್ಷಕರ ವಿರುದ್ಧ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಇಲಾಖೆ ಆಯುಕ್ತರು ಎಚ್ಚರಿಕೆ ನೀಡಿದ್ದಾರೆ.

ಆರ್ಥಿಕ ಸಂಕಷ್ಟದ ಕಾರಣಕ್ಕೆ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಸಾವಿರಾರು ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಅನುದಾನರಹಿತ ಶಾಲೆಗಳಲ್ಲಿಯೇ ಮುಂದುವರಿಸಲು ಸಾಧ್ಯವಾಗದೆ ಸರ್ಕಾರಿ ಶಾಲೆಗಳಿಗೆ ಸೇರಿಸಿದ್ದಾರೆ. ಆದರೆ, ಖಾಸಗಿ ಅನುದಾನರಹಿತ ಶಾಲಾ ಆಡಳಿತ ಮಂಡಳಿಗಳು ವರ್ಗಾವಣೆ ಪತ್ರ ನೀಡಲು ವಿಳಂಬ ಆಗಿರುವುದರಿಂದ ಹಲವು ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗೆ ಸಮಸ್ಯೆಯಾಗಿದೆ. ಬಿಇಒಗಳು ಸೂಚಿಸಿದರೂ ಕೆಲವು ವಿದ್ಯಾರ್ಥಿಗಳು ಶುಲ್ಕ ಕಟ್ಟಿಲ್ಲ ಎಂಬ ಕಾರಣಕ್ಕೆ ವರ್ಗಾವಣೆ ಪತ್ರ ನೀಡುತ್ತಿಲ್ಲ. ಕೆಲವು ಶಾಲೆಯವರು ವರ್ಗಾವಣೆ ಪತ್ರ ನೀಡಲು ವಿಳಂಬ ಮಾಡುತ್ತಿದ್ದಾರೆ ಎಂದು ಪೋಷಕರು ಆರೋಪಿಸಿದ್ದಾರೆ. ಹೀಗಾಗಿ ಶಿಕ್ಷಣ ಇಲಾಖೆ ಈ ಸೂಚನೆ ನೀಡಿದೆ.

ಸರ್ಕಾರದ ಈ ಸೂಚನೆಯನ್ನು ಖಾಸಗಿ ಶಾಲಾ ವಿದ್ಯಾರ್ಥಿಗಳ ಪೋಷಕರ ಸಂಘಟನೆಗಳ ಸಮನ್ವಯ ಸಮಿತಿ ಸ್ವಾಗತಿಸಿದೆ. ‘ಆದೇಶ ಪಾಲನೆ ಆಗುವ ವಿಶ್ವಾಸವಿದೆ’ ಎಂದು ಸಮಿತಿಯ ಪದಾಧಿಕಾರಿ ಬಿ.ಎನ್. ಯೋಗಾನಂದ ತಿಳಿಸಿದರು.

ರಾಜ್ಯಪಾಲರಿಗಾಗಿ ಲಿಂಗನಮಕ್ಕಿ ಜಲಾಶಯದ ನೀರು ಪೋಲು

ಪ್ರಜಾವಾಣಿ ವಾರ್ತೆ

ಕಾರ್ಗಲ್: ಜೋಗದಲ್ಲಿ ತಂಗಿರುವ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರನ್ನು ಖುಷಿಪಡಿಸಲಿಕ್ಕಾಗಿಯೇ ಲಿಂಗನಮಕ್ಕಿ ಜಲಾಶಯದಿಂದ 800 ಕ್ಯುಸೆಕ್ ನೀರನ್ನು ಯಾವುದೇ ಮುನ್ಸೂಚನೆ ನೀಡದೆ ಪೋಲು ಮಾಡಲಾಗಿದೆ.

ಈ ಬಾರಿಯ ಮಳೆಯಿಂದ ಭರ್ತಿಯಾಗಿದ್ದ ಲಿಂಗನಮಕ್ಕಿ ಜಲಾಶಯದ ನೀರನ್ನು ಕೆಪಿಸಿ ಅಧಿಕಾರಿಗಳು ಪೋಲಾಗದಂತೆ ಅತ್ಯಂತ ಜಾಣ್ಮೆಯಿಂದ ನಿರ್ವಹಣೆ ಮಾಡಿದ್ದರು. ಅಣೆಕಟ್ಟೆಯ ಒಳಹರಿವು ಮತ್ತು ಹೊರಹರಿವನ್ನು ತೂಗಿ ಅಳೆದು ರೇಡಿಯಲ್ ಗೇಟಿನ ಮೂಲಕ ನೀರನ್ನು ಹೊರಹಾಯಿಸದಂತೆ ನೋಡಿಕೊಂಡಿದ್ದರು. ಆದರೆ ರಾಜ್ಯಪಾಲರ ಸಲುವಾಗಿ ಜಿಲ್ಲಾಡಳಿತದ ಕೋರಿಕೆ ಮೇರೆಗೆ ಕೆಪಿಸಿ ವ್ಯವಸ್ಥಾಪಕ ನಿರ್ದೇಶಕರ ಆದೇಶದಂತೆ ಕೆಪಿಸಿ ಅಧಿಕಾರಿಗಳು ಜಲಾಶಯದ ರೇಡಿಯಲ್ ಗೇಟಿನ ಮೂಲಕ ಮುಂಜಾನೆಯಾಗುತ್ತಿದ್ದಂತೆ ಅಂದಾಜು 800 ಕ್ಯುಸೆಕ್ ನೀರನ್ನು ಹೊರ ಹಾಯಿಸಿದರು.

ಜೋಗ ಜಲಪಾತ ವೀಕ್ಷಿಸಿದ ರಾಜ್ಯಪಾಲ ಥಾವರಚಂದ್ ಗೆಹಲೋತ್

ನಿವಾಸಿಗಳಲ್ಲಿ ಹೆಚ್ಚಿದ ಆತಂಕ: ಗುರುವಾರ ಬೆಳಿಗ್ಗೆ ಶರಾವತಿ ಕೆಳದಂಡೆ ತೀರದ ಪ್ರದೇಶಗಳಾದ ಕಾರ್ಗಲ್ ಮರಳುಕೋರೆ ಮತ್ತು ಅಂಬುಗಳಲೆ ತೀರದ ವಾಸಿಗಳಿಗೆ ಆತಂಕ ಎದುರಾಗಿತ್ತು. ಮಳೆ ಇಲ್ಲದಿದ್ದರೂ ದಿಢೀರನೆ ಕಾರ್ಗಲ್ ಅಣೆಕಟ್ಟೆಯ ಕೋಡಿ ಹರಿದು ನೀರು ಹೊರಹಾಯುವ ದೃಶ್ಯ ಕಂಡಿತು. ಜಲಾಶಯದಿಂದ ದಿಢೀರ್ ನೀರು ಹೊರಹಾಯಲು ಕಾರಣವೇನು ಎಂಬ ಪ್ರಶ್ನೆ ಜನರಲ್ಲಿ ಮೂಡಿತು. ರೈತಾಪಿಗಳು ಜಾನುವಾರು ಹೊರಬಿಡಲು ಆಲೋಚಿಸುವ ಸ್ಥಿತಿ ನಿರ್ಮಾಣವಾಗಿತ್ತು. ಕೂಲಿ ಕಾರ್ಮಿಕರು ಈ ಘಟನೆಯಿಂದ ಕೆಲ ಕ್ಷಣ ದಿಗ್ಭ್ರಮೆಗೊಳಗಾದರು.

ವಿಶ್ವ ವಿಖ್ಯಾತ ಜೋಗ ಜಲಪಾತದ ಜಲಸಿರಿಯ ವೈಭವವನ್ನು ಕಂಡು ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾರುಹೋದರು.

ಇಲ್ಲಿಗೆ ಸಮೀಪದ ಮುಂಬಯಿ ಬಂಗಲೆಯಲ್ಲಿ ತಂಗಿದ್ದ ಅವರು ಜಲಸಿರಿಯ ವೈಭವ ಕಂಡು ಬೆರಗಾದರು. ರಾಜಾ, ರೋರರ್, ರಾಕೆಟ್, ರಾಣಿಯ ವೈಭವದ ಬಗ್ಗೆ ಅಧಿಕಾರಿಗಳಿಂದ ಕೇಳಿ ತಿಳಿದ ಅವರು, ಇದು ಪ್ರಪಂಚದ ಅತ್ಯದ್ಭುತಗಳಲ್ಲಿ ಒಂದು ಎಂದು ಅಭಿಪ್ರಾಯಪಟ್ಟರು.

ಸಂಕ್ಷಿಪ್ತ ಸುದ್ದಿ

ಅಣ್ಣಾ ಹಜಾರೆ ಆಸ್ಪತ್ರೆಗೆ ದಾಖಲು

ಅಣ್ಣಾ ಹಜಾರೆ

ಪುಣೆ(ಪಿಟಿಐ): ಎದೆ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಸಾಮಾಜಿಕ ಕಾರ್ಯಕರ್ತ ಅಣ್ಣಾ ಹಜಾರೆ ಅವರು ಪುಣೆಯ ರೂಬಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

‘ಹೃದಯದ ನಾಳದಲ್ಲಿ (ಕೊರೊನರಿ ಆರ್ಟರಿ) ರಕ್ತ ಹೆಪ್ಪುಗಟ್ಟಿತ್ತು. ಅದನ್ನು ಚಿಕಿತ್ಸೆ ಮೂಲಕ ಸರಿಪಡಿಸಲಾಯಿತು. ಈಗ ಅವರ ಆರೋಗ್ಯದಲ್ಲಿ ಸುಧಾರಣೆ ಕಂಡುಬಂದಿದೆ. 2–3 ದಿನಗಳಲ್ಲಿ ಅವರನ್ನು ಆಸ್ಪತ್ರೆಯಿಂದ ಬಿಡುಗಡೆಗೊಳಿಸಲಾಗುವುದು’ ಎಂದು ಆಸ್ಪತ್ರೆಯ ಮುಖ್ಯ ಹೃದ್ರೋಗ ತಜ್ಞ ಡಾ. ಗ್ರಂತ್ ಮಾಹಿತಿ ನೀಡಿದರು.

ಮರಣದಂಡನೆ ಜೀವಾವಧಿ ಶಿಕ್ಷೆಯಾಗಿ ಪರಿವರ್ತನೆ

ಮುಂಬೈ (ಪಿಟಿಐ): ಮುಂಬೈನಲ್ಲಿ ಫೋಟೊ ಜರ್ನಲಿಸ್ಟ್ ಮೇಲೆ ನಡೆದಿದ್ದ ಸಾಮೂಹಿಕ ಅತ್ಯಾಚಾರ ಪ್ರಕರಣದ ಮೂವರು ಅಪರಾಧಿಗಳಿಗೆ ವಿಧಿಸಲಾಗಿದ್ದ ಮರಣದಂಡನೆಯನ್ನು ಜೀವಾವಧಿ ಶಿಕ್ಷೆಯಾಗಿ ಪರಿವರ್ತಿಸಿ ಬಾಂಬೆ ಹೈಕೋರ್ಟ್ ಗುರುವಾರ ಆದೇಶಿಸಿತು.

ಅರ್ಜಿ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ಸಾಧನಾ ಜಾಧವ್ ಹಾಗೂ ಪೃಥ್ವಿರಾಜ್ ಚವಾಣ್ ಅವರಿದ್ದ ವಿಭಾಗೀಯ ನ್ಯಾಯಪೀಠ, ‘ಅಪರಾಧಿಗಳು ತಾವು ಎಸಗಿದ ಕೃತ್ಯಕ್ಕಾಗಿ ಬದುಕಿರುವವರೆಗೆ ಪಶ್ಚಾತ್ತಾಪ ಪಡಬೇಕು’ ಎಂದು ಹೇಳಿತು.

ವಿಜಯ್ ಜಾಧವ್, ಮೊಹಮ್ಮದ್ ಕಾಸಿಮ್ ಶೇಖ್ ಹಾಗೂ ಮೊಹಮ್ಮದ್ ಅನ್ಸಾರಿ ಅಪರಾಧಿಗಳು. ಮುಂಬೈನಲ್ಲಿರುವ ಶಕ್ತಿ ಮಿಲ್ಸ್‌ನ ಆವರಣದಲ್ಲಿ 2013ರ ಆಗಸ್ಟ್ 22ರಂದು ಈ ಮೂವರು, 22 ವರ್ಷದ ಫೋಟೊ ಜರ್ನಲಿಸ್ಟ್ ಮೇಲೆ ಅತ್ಯಾಚಾರ ಎಸಗಿದ್ದರು.

ವಿಚಾರಣಾ ಕೋರ್ಟ್ ಈ ಮೂವರು ಅಪರಾಧಿಗಳಿಗೆ ಮರಣದಂಡನೆ ವಿಧಿಸಿ 2014ರ ಮಾರ್ಚ್‌ನಲ್ಲಿ ಆದೇಶಿಸಿತ್ತು.

‘ಬುದ್ಧ, ಬಸವ, ಅಂಬೇಡ್ಕರ್ ಕಾಲಾತೀತರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬುದ್ಧ, ಬಸವ, ಅಂಬೇಡ್ಕರ್, ಮಹಾವೀರರು ಕಾಲಾತೀತರು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಶ್ವ ಬುದ್ಧ ಧಮ್ಮ ಸಂಘ ಹಾಗೂ ನಾಗಸೇನಾ ಬುದ್ಧ ವಿಹಾರ ವತಿಯಿಂದ 72ನೇ ಸಂವಿಧಾನ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ರಾಷ್ಟ್ರೀಯ ಬೌದ್ಧ ದಾಂಮಾಧಿವೇಶನ ಉದ್ಘಾಟಿಸಿ ಅವರು ಮಾತನಾಡಿದರು.

‘ಅಂಬೇಡ್ಕರ್ ಅವರು ದೇಶಕ್ಕೆ ಅಪಾರ ಕೊಡುಗೆ ಕೊಟ್ಟಿದ್ದಾರೆ. ಇಂದು ಸ್ವತಂತ್ರವಾಗಿ ವಿಚಾರಗಳ ಅಭಿವ್ಯಕ್ತಿಸುತ್ತಿರುವುದು, ಸರ್ಕಾರಗಳನ್ನು ಆಯ್ಕೆ ಮಾಡುವ ಹಕ್ಕು ಕೊಟ್ಟಿದ್ದು ಅಂಬೇಡ್ಕರ್ ಎನ್ನುವುದನ್ನು ಯಾರೂ ಮರೆಯಬಾರದು’ ಎಂದರು.

‘ನಮಗೆ ರಾಜಕೀಯ, ಸ್ವಾತಂತ್ರ್ಯ ದೊರಕಿದೆ. ಆದರೆ, ಶೈಕ್ಷಣಿಕ ಹಾಗೂ ಆರ್ಥಿಕ ಸ್ವತಂತ್ರ ದೊರಕುವವರೆಗೂ ನ್ಯಾಯ ಸಿಗುವುದಿಲ್ಲ. ಶಿಕ್ಷಣ, ಉದ್ಯೋಗ ಹಾಗೂ ಸಬಲೀಕರಣದ ಸಾಧನೆಯನ್ನು ಸಮಾಜ ಸರ್ಕಾರ ಎರಡೂ ಮಾಡಬೇಕಿದೆ. ಈ ದಿಕ್ಕಿನಲ್ಲಿ ದಾಪುಗಾಲಿನ ಹೆಜ್ಜೆಗಳನ್ನಿಡಬೇಕಿದೆ. ಈ ಕೆಲಸ ಕೇವಲ ಮಾತಿನಿಂದಲ್ಲ, ಕೃತಿಯಲ್ಲಿ ಆಗಬೇಕು. ಇಂದಿನ ಅಗತ್ಯಗಳಿಗೆ ತಕ್ಕಂತೆ ಯುವಕರನ್ನು ಸಿದ್ಧಗೊಳಿಸಬೇಕು. ಹೊಸ ಯೋಜನೆಗಳನ್ನು ಜಾರಿಗೆ ತಂದು ಈ ಸಮುದಾಯದ ಮಕ್ಕಳು ವಿಶ್ವಮಟ್ಟದಲ್ಲಿ ಎಲ್ಲರೊಂದಿಗೆ ಪೈಪೋಟಿ ಮಾಡಲು ಸಿದ್ಧಗೊಳಿಸಿ, ಆರ್ಥಿಕತೆ, ಕೌಶಲ, ಉದ್ಯೋಗಾವಕಾಶಗಳನ್ನು ಸೃಜಿಸಲಾಗುವುದು’ ಎಂದರು.

‘ಅಮೃತ ಕೌಶಲ’ ಯೋಜನೆ: ಖಾಸಗಿ ವಲಯದಲ್ಲಿ ಉದ್ಯೋಗ ದೊರಕಲು ಅಗತ್ಯವಿರುವ ಕೌಶಲ ಅಭಿವೃದ್ಧಿಗೆ ಸರ್ಕಾರ ಯೋಜನೆ ರೂಪಿಸಿದೆ. ಎಸ್‌ಸಿ, ಎಸ್‌ಸಿ ಸಮುದಾಯಕ್ಕೆ ಸೇರಿದ 75 ಸಾವಿರ ವಿದ್ಯಾರ್ಥಿಗಳು ಒಂದೇ ವರ್ಷದಲ್ಲಿ ಕೌಶಲ ಪಡೆದು ಉದ್ಯೋಗಸ್ಥರಾಗಲು ‘ಅಮೃತ ಕೌಶಲ’ ಯೋಜನೆ ಘೋಷಿಸಲಾಗಿದೆ. ಈಗಾಗಲೇ 35 ಸಾವಿರ ಮಕ್ಕಳು ನೋಂದಣಿಯಾಗಿ ತರಬೇತಿ ಪಡೆಯುತ್ತಿದ್ದಾರೆ. ರಾಜ್ಯದ ಒಟ್ಟು ತಲವಾರು ಆದಾಯದಲ್ಲಿ ಎಸ್‌ಸಿ, ಎಸ್‌ಟಿ ಸಮುದಾಯದವರು ಪಾಲ್ಗೊಳ್ಳಬೇಕು. ಹೊಲ, ಮನೆಗಳಲ್ಲಿ ಕೆಲಸ ಮಾಡುವ ಈ ಸಮುದಾಯದ ಹೆಣ್ಣುಮಕ್ಕಳಿಗೆ ಆರ್ಥಿಕ ನೆರವು ನೀಡುವ ವಿಶೇಷ ಕಾರ್ಯಕ್ರಮವನ್ನು ಸರ್ಕಾರ ರೂಪಿಸಲಿದೆ‘ ಎಂದರು.

ಎಂ ವೆಂಕಟಸ್ವಾಮಿ, ಛಲವಾದಿ ನಾರಾಯಣಸ್ವಾಮಿ, ವಿವಿಧ ಮಠಾಧಿಪತಿಗಳು ಇದ್ದರು.

ನಿಧನ ವಾರ್ತೆ

ಬಿ.ಎಲ್. ವಿಶ್ವನಾಥ್

ಬೆಂಗಳೂರು: ಅಬಕಾರಿ ಗುತ್ತಿಗೆದಾರರಾಗಿದ್ದ ಬಿ.ಎಲ್. ವಿಶ್ವನಾಥ್ (77) ಅವರು ಅನಾರೋಗ್ಯದಿಂದಾಗಿ ಗುರುವಾರ ನಿಧನರಾದರು. ಬಂಟ್ವಾಳದವರಾಗಿದ್ದ ಅವರಿಗೆ ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

‘ಹರಿಶ್ಚಂದ್ರ ಘಾಟ್‌ನಲ್ಲಿ ವಿಶ್ವನಾಥ್ ಅವರ ಅಂತ್ಯಸಂಸ್ಕಾರವನ್ನು ಗುರುವಾರ ಸಂಜೆ ನಡೆಸಲಾಯಿತು’ ಎಂದು ಕುಟುಂಬದವರು ತಿಳಿಸಿದ್ದಾರೆ.

ವಿದ್ಯಾರಣ್ಯಪುರ ಸಾಂಸ್ಕೃತಿಕ ಕೇಂದ್ರದ ವತಿಯಿಂದ ಹಮ್ಮಿಕೊಂಡಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಖ್ಯಾತ ವೈದ್ಯ ಅಶೋಕ್ ಕುಮಾರ್ ಅವರನ್ನು ಅಭಿನಂದಿಸಲಾಯಿತು. ವಿದ್ಯಾರಣ್ಯಪುರ ಸಾಂಸ್ಕೃತಿಕ ಕೇಂದ್ರದ ಅಧ್ಯಕ್ಷ ಆರ್.ಅಶ್ವತ್ಥ್, ಕಾರ್ಯದರ್ಶಿ ಜಗದೀಶ್ ಹಾಗೂ ಇತರರು ಇದ್ದರು.

ಅತ್ಯಾಚಾರ: ಬಾಲಕಿಯ ಗರ್ಭಪಾತಕ್ಕೆ ಹೈಕೋರ್ಟ್ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರಕ್ಕೊಳಗಾಗಿ ಗರ್ಭಿಣಿಯಾದ ಹದಿನಾರು ವರ್ಷದ ಬಾಲಕಿಯ ಗರ್ಭಪಾತಕ್ಕೆ ಅಸ್ತು ಎಂದಿರುವ ಹೈಕೋರ್ಟ್, ‘ಸಂವಿಧಾನದ 21ನೇ ವಿಧಿಯ ಅಡಿಯಲ್ಲಿ ಸಂತಾನೋತ್ಪತ್ತಿ ಆಯ್ಕೆ ಚಲಾಯಿಸುವ ಹಕ್ಕು ಮಹಿಳೆಯ ವೈಯಕ್ತಿಕ ಸ್ವಾತಂತ್ರ್ಯದ ಭಾಗವಾಗಿದೆ’ ಎಂದು ಅಭಿಪ್ರಾಯಪಟ್ಟಿದೆ.

ಈ ಕುರಿತಂತೆ ಸಂತ್ರಸ್ತೆ ಸಲ್ಲಿಸಿದ್ದ ಅರ್ಜಿಯನ್ನು ಧಾರವಾಡ ಹೈಕೋರ್ಟ್‌ನ ನ್ಯಾಯಮೂರ್ತಿ ಎನ್.ಎಸ್.ಸಂಜಯಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದ್ದು, ‘ವೈದ್ಯಕೀಯ ಗರ್ಭಪಾತ ಕಾಯ್ದೆ–1971ರ ಕಲಂ 3ರ ಅಡಿ ಗರ್ಭಧರಿಸಿ 24 ವಾರ ಪೂರ್ಣಗೊಂಡಿದ್ದರೆ ಗರ್ಭಪಾತ ಮಾಡಲಾಗದು’ ಎಂಬ ವೈದ್ಯಕೀಯ ಅಧಿಕಾರಿಯ ನಿರಾಕರಣೆಯನ್ನು ನ್ಯಾಯಪೀಠ ತಳ್ಳಿ ಹಾಕಿದೆ.

‘ಬಾಲಕಿಯರ ಮೇಲಿನ ಅತ್ಯಾಚಾರ ಪ್ರಕರಣಗಳಲ್ಲಿ ವೈದ್ಯಕೀಯ ಗರ್ಭಪಾತ ಕಾಯ್ದೆಯಲ್ಲಿ ಕೆಲವು ಶಾಸನಬದ್ಧ ಮಿತಿಗಳಿದ್ದರೂ, ಅವು ವೈದ್ಯರಿಗೆ ಮಾತ್ರ ಅನ್ವಯಿಸುತ್ತವೆ. ವೈದ್ಯಕೀಯವಾಗಿ ಗರ್ಭಧಾರಣೆ ಅಂತ್ಯಗೊಳಿಸುವ ಅನಿವಾರ್ಯತೆಯನ್ನು ನ್ಯಾಯಾಲಯಗಳು ಭಿನ್ನ ರೀತಿಯಲ್ಲಿ ಪರಿಗಣಿಸಬೇಕು’ ಎಂದು ನ್ಯಾಯಪೀಠ ಹೇಳಿದೆ.

‘ಅಪ್ರಾಪ್ತೆಯನ್ನು ಬಲವಂತವಾಗಿ ಹೆರುವಂತೆ ಮಾಡಿದರೆ ಅದು ಅಪರಾಧದ ಹೊರೆಯನ್ನು ಹೊರಲು ಬಲವಂತ ಮಾಡಿದಂತಾಗುತ್ತದೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಮಹಿಳೆ ತನ್ನ ದೈಹಿಕ ಸಮಗ್ರತೆ ರಕ್ಷಿಸಿಕೊಳ್ಳುವ ಪವಿತ್ರ ಹಕ್ಕನ್ನು ಹೊಂದಿರುತ್ತಾಳೆ ಎಂಬುದನ್ನು ಮರೆಯಬಾರದು’ ಎಂದು ನ್ಯಾಯಪೀಠ ಹೇಳಿದೆ.

ಕನಿಷ್ಠ ಬೆಂಬಲ ಬೆಲೆಗೆ ಶಾಸನಬದ್ಧ ಮಾನ್ಯತೆ ನೀಡಲು ಆಗ್ರಹ

‘ರೈತರ ಹೋರಾಟ ಇನ್ನೂ ಅಪೂರ್ಣ’

ಪ್ರಜಾವಾಣಿ ವಾರ್ತೆ

ಯೋಗೇಂದ್ರ ಯಾದವ್

ಬೆಂಗಳೂರು: ‘ಕೃಷಿ ಕಾಯ್ದೆಗಳ ಕುರಿತು ರೈತರು ನಡೆಸಿದ ಹೋರಾಟಕ್ಕೆ ಐತಿಹಾಸಿಕ ಜಯ ದೊರೆತಿದ್ದರೂ ಇನ್ನೂ ಅಪೂರ್ಣವಾಗಿದೆ’ ಎಂದು ರೈತ ಮುಖಂಡ ಯೋಗೇಂದ್ರ ಯಾದವ್ ಅಭಿಪ್ರಾಯಪಟ್ಟರು.

‘ದೆಹಲಿ ರೈತರ ಪ್ರತಿಭಟನೆ– ರೈತರ ಹೋರಾಟಕ್ಕೆ ಐತಿಹಾಸಿಕ ಜಯ: ಮುಂದೇನು?’ ಕುರಿತು ಗುರುವಾರ ಆಯೋಜಿಸಿದ್ದ ವೆಬಿನಾರ್‌ನಲ್ಲಿ ಮಾತನಾಡಿದ ಅವರು, ‘ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡಲು ಶಾಸನ ರೂಪಿಸಬೇಕು ಮತ್ತು ವಿದ್ಯುತ್ ಮಸೂದೆ ವಾಪಸ್ ಪಡೆಯಬೇಕು. ಜತೆಗೆ, ಹೋರಾಟದ ಸಂದರ್ಭದಲ್ಲಿ ಹುತಾತ್ಮರಾದ ಕುಟುಂಬದ ಸದಸ್ಯರಿಗೆ ಪರಿಹಾರ ಮತ್ತು ಪುನರ್ವಸತಿ ದೊರೆಯಬೇಕು. ಈ ವಿಷಯಗಳನ್ನು ಮುಂದಿಟ್ಟುಕೊಂಡು ಹೋರಾಟವನ್ನು ಮುಂದುವರಿಸಬೇಕಾಗಿದೆ’ ಎಂದು ಹೇಳಿದರು.

‘ಕನಿಷ್ಠ ಬೆಂಬಲ ಬೆಲೆ ವಿಷಯದಲ್ಲಿ ಸರ್ಕಾರ ತಪ್ಪಿಸಿಕೊಳ್ಳಲು ಯತ್ನಿಸುತ್ತಿದೆ. ಪ್ರಧಾನಮಂತ್ರಿ ಅವರು ಈ ವಿಷಯವನ್ನು ಉದ್ದೇಶಪೂರ್ವಕವಾಗಿ ಮರೆಯುತ್ತಿದ್ದಾರೆ. ರೈತರೇ ಮತ್ತೆ ಮತ್ತೆ ಈ ವಿಷಯವನ್ನು ನೆನಪಿಸಬೇಕಾಗಿದೆ’ ಎಂದು ಹೇಳಿದರು.

‘ರೈತರ ಶಕ್ತಿ ಏನು ಎನ್ನುವುದು ತೋರಿಸಲು ಉತ್ತರ ಪ್ರದೇಶ ಪ್ರಯೋಗಾಲಯವಾಗಬೇಕು. ಈಗಾಗಲೇ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ರೈತರು ಪಾಠ ಕಲಿಸಿದ್ದಾರೆ. ಕನಿಷ್ಠ ಬೆಂಬಲ ಬೆಲೆ ವಿಷಯಕ್ಕೆ ಸರ್ಕಾರ ಒಪ್ಪಿಗೆ ಸೂಚಿಸದಿದ್ದರೆ, ನಾವು ಉತ್ತರ ಪ್ರದೇಶದ ಪ್ರತಿಯೊಂದು ಹಳ್ಳಿಗಳಿಗೆ ತೆರಳಿ ಜಾಗೃತಿ ಮೂಡಿಸಿ ಸರ್ಕಾರಕ್ಕೆ ತಕ್ಕ ಪಾಠ ಕಲಿಸಬೇಕು’ ಎಂದು ಹೇಳಿದರು.

‘ಕೃಷಿ ಕಾಯ್ದೆಗಳ ವಿರುದ್ಧ ನಡೆದ ಹೋರಾಟದ ಮೂಲಕ ರೈತರು ಸ್ವಾಭಿಮಾನವನ್ನು ಮತ್ತೆ ಪಡೆದಿದ್ದಾರೆ ಮತ್ತು ಒಗ್ಗಟ್ಟು ಪ್ರದರ್ಶಿಸಿದ್ದಾರೆ. ಪ್ರೊ.ಎಂ.ಡಿ.ನಂಜುಂಡಸ್ವಾಮಿ ಅವರ ನೇತೃತ್ವದಲ್ಲಿ ನಡೆಯುತ್ತಿದ್ದ ಹೋರಾಟದ ಸಂದರ್ಭದಲ್ಲಿ ರೈತರು ಈ ರೀತಿ ಒಗ್ಗಟ್ಟು ಪ್ರದರ್ಶಿಸುತ್ತಿದ್ದರು. ನಂತರ, ಈ ರೀತಿಯ ಹೋರಾಟ ನಡೆದ ಉದಾಹರಣೆ ಇಲ್ಲ’ ಎಂದು ವಿಶ್ಲೇಷಿಸಿದರು.

‘ಜಾತಿ, ಧರ್ಮ, ಪ್ರಾದೇಶಿಕತೆ ಸೇರಿದಂತೆ ಎಲ್ಲವನ್ನೂ ಮೀರಿ ರೈತರು ಹೋರಾಟ ನಡೆಸಿದ್ದಾರೆ. ಪ್ರಸ್ತುತ ಸಂದರ್ಭದಲ್ಲಿ ಇದು ರೈತರ ಹೋರಾಟದ ಆರಂಭ ಎಂದೇ ಪರಿಗಣಿಸಬೇಕು. ಸಂಯುಕ್ತ ಕಿಸಾನ್ ಮೋರ್ಚಾ ಅಡಿಯಲ್ಲಿ ರೈತರು ಒಂದೇ ಸೂರಿನ ಅಡಿಯಲ್ಲಿ ಸೇರಿದ್ದಾರೆ. ರೈತರ ಜೀವನದ ಜತೆ ಆಟವಾಡುವ ಧೈರ್ಯ ತೋರಬಾರದು ಎನ್ನುವುದನ್ನು ಎಲ್ಲ ರಾಜಕೀಯ ಪಕ್ಷಗಳ ನಾಯಕರಿಗೆ ಈ ಹೋರಾಟ ಪಾಠ ಕಲಿಸಿದೆ’ ಎಂದು ಹೇಳಿದರು.

ರೈತ ನಾಯಕಿ ಕವಿತಾ ಕುರಗಂಟಿ, ಕರ್ನಾಟಕ ಜನಶಕ್ತಿ ಅಧ್ಯಕ್ಷ ನೂರ್ ಶ್ರೀಧರ್ ಇದ್ದರು.

ಗೃಹ ಸಚಿವ ಆರಗ ಜ್ಞಾನೇಂದ್ರ ಸಲಹೆ

ಕನ್ನಡದಲ್ಲಿ ವೈದ್ಯಕೀಯ ಕೋರ್ಸ್ ಆರಂಭಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಕನ್ನಡದಲ್ಲಿ ಎಂಜಿನಿಯರಿಂಗ್ ಕೋರ್ಸ್ ಅನ್ನು ಈ ಶೈಕ್ಷಣಿಕ ವರ್ಷದಿಂದ ಆರಂಭಿಸಿದ್ದು, ವೈದ್ಯಕೀಯ ಕೋರ್ಸ್ ಕೂಡ ಕನ್ನಡದಲ್ಲಿ ಆರಂಭಿಸಬೇಕು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಸಲಹೆ ನೀಡಿದರು.

ಸಾಹಿತಿ ಹಂಪ ನಾಗರಾಜಯ್ಯ ಅವರ ‘ಚಾರುಲತಾ- ವಸಂತ’ ಎಂಬ ಕಾವ್ಯ ಕಥನದ ಇಂಗ್ಲಿಷ್ ಅನುವಾದ ಕೃತಿಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ‘ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕೋರ್ಸ್‌ಗಳನ್ನು ಕನ್ನಡದಲ್ಲಿ ಬೋಧಿಸಲು ಅನುಕೂಲವಾಗುವಂತೆ ಪಠ್ಯಕ್ರಮಗಳನ್ನು ರಚಿಸಬೇಕು’ ಎಂದೂ ಸಲಹೆ ನೀಡಿದರು.

‘ಕನ್ನಡ ಅತ್ಯಂತ ಪ್ರಾಚೀನವೂ ಮತ್ತು ಶಾಸ್ತ್ರೀಯ ಭಾಷೆಗಳಲ್ಲಿ ಒಂದು. ಪ್ರಪಂಚ ಯಾವುದೇ ಭಾಷೆಗಳಿಗೂ ಪ್ರಬುದ್ಧತೆಯಲ್ಲಿ ಸರಿಸಾಟಿಯಾಗಬಲ್ಲ ಭಾಷೆ ಕನ್ನಡ. ಆದ್ದರಿಂದ, ಎಂಜಿನಿಯರಿಂಗ್ ಮತ್ತು ವೈದ್ಯಕೀಯ ವಿಷಯಗಳ ಪಠ್ಯಕ್ರಮಗಳು ನಾಡಿನ ಭಾಷೆಯಲ್ಲೇ ರಚನೆ ಆಗಬೇಕು. ಇದಕ್ಕೆ ಸಾಹಿತಿಗಳು ಮತ್ತು ಚಿಂತಕರು ಸಲಹೆ ಸೂಚನೆಗಳನ್ನು ನೀಡಬೇಕು‘ ಎಂದು ಮನವಿ ಮಾಡಿದರು.

ಗೃಹ ಸಚಿವ ಆರಗ ಜ್ಞಾನೇಂದ್ರ ‘ಚಾರುಲತಾ ವಸಂತ’ ಕಾವ್ಯ ಕಥನದ ಇಂಗ್ಲಿಷ್ ಅನುವಾದ ಕೃತಿಯನ್ನು ಬಿಡುಗಡೆಗೊಳಿಸಿದರು. ಲೇಖಕ ಗುರುರಾಜ ಕರಜಗಿ, ಮಲ್ಲೇಪುರಂ ಜಿ.ವೆಂಕಟೇಶ್, ಹಂಪ ನಾಗರಾಜಯ್ಯ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಡಿ.ಎನ್.ಜೀವರಾಜ್, ರಾಜೇಂದ್ರ ಚೆನ್ನಿ ಇದ್ದರು

‘ಕನ್ನಡ ಭಾಷೆಯ ಅತ್ಯುತ್ತಮ ಕೃತಿಗಳನ್ನು ಬೇರೆ ಭಾಷೆಗಳಿಗೆ ಅನುವಾದ ಮಾಡಲು ಅಡ್ಡಿಯಾಗಿರುವ ಲೇಖಕರ ಹಕ್ಕುಸ್ವಾಮ್ಯ ಸಂಬಂಧ ಇರುವ ಸಮಸ್ಯೆಗಳನ್ನು ಬಗೆಹರಿಸಲಾಗುವುದು’ ಎಂದರು.

ಕೃತಿಯ ಬಗ್ಗೆ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ.ವೆಂಕಟೇಶ್ ಮತ್ತು ವಿಮರ್ಶಕ ರಾಜೇಂದ್ರ ಚೆನ್ನಿ ಮಾತನಾಡಿದರು. ಹಂಪ ನಾಗರಾಜಯ್ಯ ಮತ್ತು ಕಮಲಾ ಹಂಪನಾ ದಂಪತಿಯನ್ನು ಸನ್ಮಾನಿಸಲಾಯಿತು. ಕವಿ ಎಚ್.ಎಸ್. ವೆಂಕಟೇಶಮೂರ್ತಿ, ಶಿಕ್ಷಣ ತಜ್ಞ ಗುರುರಾಜ ಕರಜಗಿ ಇದ್ದರು.

'ಬೆಳೆ ಹಾನಿ: ಮುಚ್ಚಿಡುವ ಪ್ರಶ್ನೆಯೇ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಕಾಲಿಕ ಮಳೆಯಿಂದ ರಾಜ್ಯದಲ್ಲಿ ಆಗಿರುವ ಬೆಳೆ ಹಾನಿ ವಿಚಾರವನ್ನು ಮುಚ್ಚಿಡುವ ಪ್ರಶ್ನೆಯೇ ಇಲ್ಲ. ಸಂತ್ರಸ್ತರಿಗೆ ಪರಿಹಾರ ತಲುಪಿಲ್ಲ ಎಂಬ ಕಾಂಗ್ರೆಸ್ ಆರೋಪದಲ್ಲಿ ಹುರುಳಿಲ್ಲ' ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ಗುರುವಾರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬೆಳೆ ಹಾನಿಗೆ ರೈತರಿಗೆ ಪರಿಹಾರ ತಲುಪಲಿದೆ. ಈ ಬಗ್ಗೆ ವಿರೋಧ ಪಕ್ಷಗಳಿಗೆ ಆತಂಕ ಬೇಡ. ಸಂತ್ರಸ್ತರಿಗಲ್ಲದೆ, ಕೃಷ್ಣ ಬೈರೇಗೌಡ, ಸಿದ್ದರಾಮಯ್ಯ ಅವರಿಗೆ ಪರಿಹಾರ ನೀಡಬೇಕಾ' ಎಂದೂ ವ್ಯಂಗ್ಯವಾಗಿ ಪ್ರಶ್ನಿಸಿದರು.

'ಕಂದಾಯ ಹಾಗೂ ಕೃಷಿ ಇಲಾಖೆಯಿಂದ ಜಂಟಿ ಸಮೀಕ್ಷೆ ನಡೆದಿದೆ. ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್), ರಾಜ್ಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಮಾರ್ಗಸೂಚಿಯಂತೆ ತಕ್ಷಣ ಪರಿಹಾರ ಕೊಡಲು ಸೂಚನೆ ನೀಡಲಾಗಿದೆ' ಎಂದರು.

'ನವೆಂಬರ್ ತಿಂಗಳಲ್ಲಿ 5.56 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. ಫಸಲ್ ಭಿಮಾ ಯೋಜನೆಯಡಿ ಈಗಾಗಲೇ ಬೆಳೆ ಹಾನಿ ಸಮೀಕ್ಷೆ ಮಾಡಲಾಗಿದೆ. ವಿಮಾ ಕಂಪನಿಗಳ ಜೊತೆ ಸಭೆ ನಡೆಸಿದ್ದು, ಪರಿಹಾರ ನೀಡಲು ಸೂಚನೆ ನೀಡಲಾಗಿದೆ' ಎಂದರು.

ಚಿನ್ನದ ಪದಕ ಗೆದ್ದವರಿಗೆ ಐಎಎಸ್ ಗುರಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿ-ದ್ಯಾಲಯದ 6ನೇ ಘಟಿಕೋತ್ಸವದಲ್ಲಿ ಸಾಮಾನ್ಯ ರೈತ ಕುಟುಂಬಗಳ ಇಬ್ಬರು ವಿದ್ಯಾರ್ಥಿನಿಯರು ತಲಾ ನಾಲ್ಕು ಚಿನ್ನದ ಪದಕಗಳ ಸಾಧನೆ ಮಾಡಿದ್ದಾರೆ.

ಸಣ್ಣ ಹಿಡುವಳಿದಾರರ ಕುಟುಂಬದ ಎಚ್.ಎಲ್.ಅಕ್ಷತಾ, ಶಿಕ್ಷಕ ದಂಪತಿ ಪುತ್ರಿ ಎನ್. ಸ್ಫೂರ್ತಿ ಚಿನ್ನದ ಪದಕಗಳನ್ನು ಪಡೆದ ರ‍್ಯಾಂಕ್ ವಿಜೇತರು.

ವಿಶ್ವವಿದ್ಯಾಲಯದ ನವುಲೆ ಕ್ಯಾಂಪಸ್‌ನಲ್ಲಿ ಕೃಷಿ ಪದವಿ ಅಧ್ಯಯನ ಮಾಡಿರುವ ಅಕ್ಷತಾ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆಯ ಲೋಕೇಶ್, ರೇಣುಕಾ ದಂಪತಿಯ ಪುತ್ರಿ. ಪ್ರಸ್ತುತ ಮಹಾರಾಷ್ಟ್ರದಲ್ಲಿ ಸ್ನಾತಕೋತ್ತರ ಪದವಿ (ಎಂಎಸ್ಸಿ ಅಗ್ರಿ) ಓದುತ್ತಿದ್ದಾರೆ. ನಾಲ್ಕೂವರೆ ಎಕರೆ ಮಳೆಯಾಶ್ರಿತ ಕೃಷಿ ಭೂಮಿಯಲ್ಲಿ ದುಡಿದು ಮಗಳನ್ನು ಓದಿಸಿದ್ದಾರೆ.

'ಕೃಷಿ ಪದವಿ ಪಡೆಯಬೇಕು ಎನ್ನುವುದು ಅಪ್ಪ, ಅಮ್ಮನ ಕನಸು. ಐಎಎಸ್ ಅಧಿಕಾರಿಯಾಗುವ ಗುರಿ ಇದೆ. ಈಗಿರುವ ಸಬ್ಸಿಡಿ, ಸಾಲ ಸೌಲಭ್ಯಗಳು ರೈತರ ಬದುಕು ಹಸನು ಮಾಡುತ್ತಿಲ್ಲ. ರೈತರಿಗೆ ಹೆಚ್ಚಿನ ನೆರವು ಅಗತ್ಯವಿದೆ. ಐಎಎಸ್ ಅಧಿಕಾರಿಯಾದರೆ ರೈತರ ಬದುಕಿಗೆ ಹೊಸ ಭಾಷ್ಯ ಬರೆಯುವೆ' ಎಂದು ಮನದಾಳ ಬಿಚ್ಚಿಟ್ಟರು ಅಕ್ಷತಾ.

ಚಿತ್ರದುರ್ಗ ಜಿಲ್ಲೆ ಹಿರಿಯೂರಿನ ತೋಟಗಾರಿಕೆ ಮಹಾವಿದ್ಯಾಲಯದ ಎನ್.ಸ್ಫೂರ್ತಿ ನೆಲಮಂಗಲದ ಶಿಕ್ಷಕ ದಂಪತಿ, ನಂಜುಂಡಪ್ಪ – ಮಂಜುಳಾ ಅವರ ಪುತ್ರಿ. ತೋಟಗಾರಿಕೆ ವಿಷಯದಲ್ಲಿ ಪ್ರಥಮ ರ‍್ಯಾಂಕ್ ಪಡೆದು ನಾಲ್ಕು ಚಿನ್ನದ ಪದಕ ಗಳಿಸಿದ್ದಾರೆ.

'ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿರುವೆ. ಬೆಂಗಳೂರಿನಲ್ಲಿ ತರಬೇತಿ ಪಡೆಯುತ್ತಿದ್ದೇನೆ. ಸಾಧನೆಗೆ ಪೋಷಕರ ಪ್ರೋತ್ಸಾಹ, ಗುರುಗಳ ಮಾರ್ಗದರ್ಶನ ಕಾರಣ. ಸಮಯ ಸಿಕ್ಕಾಗ ಓದುತ್ತಿದ್ದೆ. ಸಾಮಾನ್ಯ ವಿದ್ಯಾರ್ಥಿಗಳೂ ರ‍್ಯಾಂಕ್ ಗಳಿಸಬಹುದು ಎನ್ನುವ ವಿಶ್ವಾಸ ಮೂಡಿಸಿದೆ' ಎಂದು ಸ್ಫೂರ್ತಿ ಹೇಳಿದರು.

ಕೃಷಿ ಕೀಟಶಾಸ್ತ್ರದಲ್ಲಿ ಪಿಎಚ್‌ಡಿ ಮಾಡಿದ ಎಸ್.ಅಂಬರೀಶ್, ಕೃಷಿ ಕೀಟಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದ ಜೆ. ದಿವ್ಯಾ, ಅರಣ್ಯಶಾಸ್ತ್ರದಲ್ಲಿ ಪದವಿ ಪಡೆದ ಕ್ಷಮಾ ಕೋಪರ್ಡೆ ತಲಾ ಎರಡು ಚಿನ್ನದ ಪದಕ ಪಡೆದರು. ರಾಜ್ಯಪಾಲ ಥಾವರಚಂದ್ ಗೆಹಲೋತ್ ಪದವಿ ಪ್ರದಾನ ಮಾಡಿದರು.

ಎನ್. ಸ್ಫೂರ್ತಿ, ಎಚ್.ಎಲ್. ಅಕ್ಷತಾ ಅವರು ಚಿನ್ನದ ಪದಕಗಳನ್ನು ಹೆಮ್ಮೆಯಿಂದ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	8,642	8,433
ಹಾರಂಗಿ	2,859	2,857.51	680	1,000
ಕಬಿನಿ	2,284	2,283.86	1,300	700
ಹೇಮಾವತಿ	2,922	2,913.04	4,670	440
ಲಿಂಗನಮಕ್ಕಿ	1,819	1,813.05	311	4809
ಸೂಪಾ (ಮೀ)	564	555.08	414	1,713
ಮಾಣಿ	594.36	586.66	-	-
ತುಂಗಭದ್ರಾ	1,633	1,632.99	23,743	23,503
ಮಲಪ್ರಭಾ	2,079.50	2,077.00	769	769
ಘಟಪ್ರಭಾ	2,175	2,165.63	183	183
ಭದ್ರಾ	186	185.11	3903	2700
ಆಲಮಟ್ಟಿ (ಮೀ)	519.60	518.44	6,800	1,580
ನಾರಾಯಣಪುರ (ಮೀ)	492.25	492.02	740	620

* ನೆಲಮಟ್ಟದಿಂದ

ಗದ್ದೆಯಲ್ಲಿ ಮಳೆ ನೀರು: ಮೊಳಕೆ ಒಡೆದ ರಾಗಿ

ಕಿಕ್ಕೇರಿ (ಮಂಡ್ಯ): ಹೋಬಳಿಯ ಮಾದಾಪುರ ಕೊಪ್ಪಲು ಗ್ರಾಮದ ರೈತ ರಘು ಅವರ ಜಮೀನಿನಲ್ಲಿ ಮಳೆ ನೀರು ನಿಂತು ಕಟಾವಿಗೆ ಸಿದ್ಧವಾಗಿದ್ದ ರಾಗಿ ಬೆಳೆ ಹಾಳಾಗಿದೆ. ಹೋಬಳಿಯ ಬಹುತೇಕ ಜಮೀನುಗಳಲ್ಲಿ ಇದೇ ಸ್ಥಿತಿ ಇದ್ದು, ರೈತರಿಗೆ ಬೆಳೆ ನಷ್ಟವಾಗಿದೆ.

ರಘು ಅರ್ಧ ಎಕರೆಯಲ್ಲಿ ರಾಗಿ ಬೆಳೆದಿದ್ದರು. ವಾರದ ಹಿಂದೆ ರಾಗಿ ಕಟಾವು ಮಾಡಬೇಕಿತ್ತು. ಅಷ್ಟರಲ್ಲಿ ಮಳೆಯ ಆರ್ಭಟಕ್ಕೆ ಕಟಾವು ಮಾಡಲಾಗದೆ ತೆನೆ ಕಟ್ಟಿದ್ದ ರಾಗಿ ಬೆಳೆ ನೆಲಕ್ಕೆ ಒರಗಿದೆ.

ತರಕಾರಿ, ಬಾಳೆ ತೋಟಕ್ಕೂ ನೀರು ನುಗ್ಗಿ ಫಸಲು ಹಾಳಾಗಿವೆ. ಬಸವನಹಳ್ಳಿಯಲ್ಲಿ ತಿಮ್ಮಯ್ಯನ ರಮೇಶ್ ಮನೆಯ ಮಣ್ಣಿನ ಗೋಡೆ ಒಂದು ಭಾಗ ಕುಸಿದಿದೆ.

ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ (ನಿ)

(ಕರ್ನಾಟಕ ಸರ್ಕಾರದ ಉದ್ಯಮ)

ನಂ.2, ಕುಶಾಲ್‌ಎಮರಾಲ್ಡ್, ಗಾಂಧಿಭವನ ಎದುರು, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು–560001.

ಸಂಖ್ಯೆ:ಕಉಅನಿ/ಸಿ.ಆರ್–81/2021–22 ದಿನಾಂಕ:26/11/2021

ಪ್ರಕಟಣೆ

2021–22ನೇ ಸಾಲಿಗೆ ಸಾಲ ಸೌಲಭ್ಯ ಒದಗಿಸಲು ಅರ್ಜಿಗಳ ಆಹ್ವಾನ

1. ಸ್ವಯಂ ಉದ್ಯೋಗ ನೇರ ಸಾಲ ಯೋಜನೆ:– ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮದಿಂದ 2021–22ನೇ ಸಾಲಿನಲ್ಲಿ ಸ್ವಯಂ ಉದ್ಯೋಗ ನೇರ ಸಾಲ ಪಡೆಯಲು ಇಚ್ಛಿಸುವವರು ಅಗತ್ಯ ದಾಖಲೆಗಳೊಂದಿಗೆ ಆಯಾ ಜಿಲ್ಲೆಗಳ ಜಿಲ್ಲಾ ವ್ಯವಸ್ಥಾಪಕರ ಕಛೇರಿಗಳಿಗೆ **ದಿನಾಂಕ:10–01–2022 ಸಂಜೆ: 5.30 ರೊಳಗೆ** ಅರ್ಜಿಗಳನ್ನು ಸಲ್ಲಿಸಬೇಕಾಗಿರುತ್ತದೆ.

ಸ್ವಯಂ ಉದ್ಯೋಗ ನೇರ ಸಾಲ ಯೋಜನೆಗೆ ಅರ್ಜಿ ಸಲ್ಲಿಸಲು ಬೇಕಾಗಿರುವ ಅರ್ಹತೆಗಳು:–

1) ಉಪ್ಪಾರ ಸಮುದಾಯ ಅಂದರೆ ಸರ್ಕಾರದ ಆದೇಶ ಸಂಖ್ಯೆ ಸಕಇ 225 ಬಿಸಿಎ 2000, ಬೆಂಗಳೂರು ದಿನಾಂಕ:30/03/2002ರ ಆದೇಶದಲ್ಲಿನ ಪ್ರವರ್ಗ–1ರ 53(a) ಯಿಂದ 53(v) ವರೆಗಿನ a) ಉಪ್ಪಾರ, b) ಬೆಲ್ದರ್ c) ಚುನಾರ್ d) ಗಾವಾಡಿ e) ಗೌಂದಿ f) ಕಲ್ಲು ಕುಟಿಗ ಉಪ್ಪಾರ g) ಲೋನಾರಿ h) ಮೇಲು ಸಕ್ಕರೆಯವರು i) ಮೇಲು ಸಕ್ಕರೆ j) ನಾಮದ ಉಪ್ಪಾರ k) ಪಡಿತ್/ಪಡ್ತಿ l) ಪಡಿತಿ m) ಪಾಡಿ n) ಸಗರ o) ಸುಣ್ಣಗಾರ p) ಸುಣ್ಣ ಉಪ್ಪಾರ q) ಉಪ್ಪಳಿಗ r) ಉಪ್ಪಳಿಗಶೆಟ್ಟಿ s) ಉಪ್ಪಳಿಯನ್ t) ಉಪ್ಪೇರ u) ಯಕಲಾರ v) ಎಕ್ಕಲಿ ಜಾತಿಗೆ ಸೇರಿದವರಾಗಿರಬೇಕು 2)ಅರ್ಹ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಪಡೆದಿರಬೇಕು (ಪ್ರಮಾಣ ಪತ್ರವು ಚಾಲ್ತಿಯಲ್ಲಿರಬೇಕು). 3) ಅರ್ಜಿದಾರರು ಕರ್ನಾಟಕ ರಾಜ್ಯದವರಾಗಿರಬೇಕು ಹಾಗೂ ಅವರ ಖಾಯಂ ವಿಳಾಸವು ಕರ್ನಾಟಕ ರಾಜ್ಯದಲ್ಲಿರಬೇಕು. 4) ಅರ್ಜಿದಾರರು ಆಧಾರ್‌ಕಾರ್ಡ್ ಹೊಂದಿರಬೇಕು. 5) ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರಕ್ಕೆ ರೂ.98,000/–ಗಳು ಮತ್ತು ನಗರ ಪ್ರದೇಶದವರಿಗೆ ರೂ. 1,20,000/–ಗಳ ಮಿತಿಯ ಒಳಗಿರಬೇಕು. 6) ಅರ್ಜಿದಾರರು 18 ವರ್ಷ ಮೇಲ್ಪಟ್ಟು 55 ವರ್ಷದ ಒಳಗಿನವರಾಗಿರಬೇಕು. 7) ಒಂದು ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಸಾಲ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ 8) ಈಗಾಗಲೇ ಬೇರೆ ಯಾವುದೇ ನಿಗಮಗಳ ಯೋಜನೆಗಳಲ್ಲಿ ಸಾಲ ಪಡೆದಿದ್ದಲ್ಲಿ ಅಂತಹ ಅಭ್ಯರ್ಥಿಗಳು ಹಾಗೂ ಅವರ ಕುಟುಂಬದವರಿಗೆ ಸಾಲ ಸೌಲಭ್ಯ ಪಡೆಯಲು ಅರ್ಹವಿರುವುದಿಲ್ಲ.

2. ಅರಿವು ಶೈಕ್ಷಣಿಕ ಸಾಲ ಯೋಜನೆ– ನವೀಕರಣ ವಿದ್ಯಾರ್ಥಿಗಳಿಗೆ ಮಾತ್ರ:–

ಈಗಾಗಲೇ ಕಳೆದ ಸಾಲುಗಳಲ್ಲಿ ಅರಿವು ಶೈಕ್ಷಣಿಕ ಸಾಲ ಯೋಜನೆ ಪಡೆದ ಉಪ್ಪಾರ ಸಮುದಾಯದ ವಿದ್ಯಾರ್ಥಿಗಳು **2021–22ನೇ** ಸಾಲಿನಲ್ಲಿ ನವೀಕರಣಕ್ಕಾಗಿ ಸುವಿಧ ತಂತ್ರಾಂಶದ ಮೂಲಕ **suvidha.karnataka.gov.in ದಿನಾಂಕ:10–01–2022 ಸಂಜೆ:5.30ರೊಳಗೆ** ಅರ್ಜಿ ಸಲ್ಲಿಸತಕ್ಕದ್ದು. ಕಡ್ಡಾಯವಾಗಿ ಅನ್‌ಲೈನ್ ಮುಖಾಂತರ ಮಾತ್ರ ಅರ್ಜಿಗಳನ್ನು ಸಲ್ಲಿಸಿಬೇಕಾಗಿರುತ್ತದೆ ಇದಕ್ಕೆ ಅರ್ಜಿದಾರರು ಆಧಾರ್ ಕಾರ್ಡ್ ಮತ್ತು ಜಾಲ್ತಿಯಲ್ಲಿರುವ ಜಾತಿ ಆದಾಯ ಪ್ರಮಾಣ ಪತ್ರ ಹೊಂದಿರಬೇಕು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕಾದ ದಾಖಲೆಗಳು (ಅರಿವು ನವೀಕರಣಕ್ಕೆ): 1) ಕಳೆದ ಸಾಲಿನ ಅಂಕ ಪಟ್ಟಿ 2) ಪ್ರಸ್ತುತ ಸಾಲಿನ ವ್ಯಾಸಂಗ ಪ್ರಮಾಣ ಪತ್ರ 3) ಸಾಲ ಮಂಜೂರಾತಿ ಆದೇಶ 4) ಹಣ ಸಂದಾಯ ರಶೀದಿ 5) ಪೋಷಕರ ಒಪ್ಪಿಗೆ ಪತ್ರ 6) ಜಾಮೀನುದಾರರ ಒಪ್ಪಿಗೆ ಪತ್ರ.

ಸಂಪರ್ಕ ವಿವರ:

ನಿಗಮದ ಸಹಾಯವಾಣಿ: 70262 88888

(ಬೆಳಿಗ್ಗೆ:10.00 ರಿಂದ ಸಂಜೆ:5.30 ವರೆಗೆ ಸಂಪರ್ಕಿಸಬಹುದಾಗಿದೆ).

ಯೋಜನೆಗಳ ಮಾರ್ಗಸೂಚಿಗಳು, ಸಲ್ಲಿಸಬೇಕಾದ ದಾಖಲೆಗಳು, ಜಿಲ್ಲಾ ವ್ಯವಸ್ಥಾಪಕರ ಕಛೇರಿ ವಿಳಾಸಗಳನ್ನು ಹಾಗೂ ಎಲ್ಲಾ ವಿವರಗಳನ್ನು uppardevelopment.karnataka.gov.in ಇಲ್ಲಿ ತಿಳಿಯಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ವಾಸಾಸಂಇ/ಬೆಂ.ನ./ಜಿಎ/2218/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ನಂ.16/ಡಿ, 5ನೇ ಮಹಡಿ, ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560052.

ಸಂಖ್ಯೆ: ಕ.ವಿ.ಸ.ಆ.ನಿ/ಸಿಆರ್–01/2021–22 ದಿನಾಂಕ: 25/11/2021

ಪ್ರಕಟಣೆ

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದಿಂದ 2021–22ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

I. ಸುವಿಧಾ ತಂತ್ರಾಂಶದ ಮುಂಖಾಂತರ (Online) ಅರ್ಜಿ ಸ್ವೀಕೃತಿ

❖ ಅರಿವು ಶೈಕ್ಷಣಿಕ ಸಾಲ ಯೋಜನೆ ನವೀಕರಣ (Renewal)

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದಿಂದ ವಿಶ್ವಕರ್ಮ ಸಮುದಾಯದ ಹಾಗೂ ಅದರ ಉಪಜಾತಿಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಈಗಾಗಲೇ ಕಳೆದ ಸಾಲಿನಲ್ಲಿ ಅರಿವು ಶೈಕ್ಷಣಿಕ ಸಾಲ ಯೋಜನೆಯಡಿಯಲ್ಲಿ ಸೌಲಭ್ಯ ಪಡೆದ ವಿದ್ಯಾರ್ಥಿಗಳಿಗೆ 2021–22ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿದ್ದಲ್ಲಿ ಮುಂದುವರೆದ ಕಂತುಗಳಿಗೆ (3, 4, 5ನೇ ಕಂತುಗಳು) ಸುವಿಧಾ ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿದಾರರು ಆಧಾರ್ ಜೋಡಣೆಯೊಂದಿಗೆ ಪ್ರಸ್ತುತ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆ ಹಾಗೂ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಹೊಂದಿರಬೇಕು. ಸದರಿ ಅರ್ಜಿಗಳನ್ನು https://suvidha.karnataka.gov.in ಜಾಲತಾಣದ ಮೂಲಕ ಸಲ್ಲಿಸಬಹುದು. ಈ ಯೋಜನೆಗೆ ಸಂಬಂಧಿಸಿದಂತೆ, ಸಲ್ಲಿಸಬೇಕಾಗಿರುವ ದಾಖಲೆಗಳ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ವ್ಯವಸ್ಥಾಪಕರ ಕಛೇರಿ ಅಥವಾ ನಿಗಮದ https://kvcdcl.karnataka.gov.in ಜಾಲತಾಣದಲ್ಲಿ ಪಡೆಯಬಹುದು.

II. ಹಸ್ತಚಾಲಿತವಾಗಿ (Offline) ಅರ್ಜಿ ಸ್ವೀಕೃತಿ

- ❖ ಪಂಚವೃತ್ತಿ ಅಭಿವೃದ್ಧಿಗಾಗಿ ಆರ್ಥಿಕ ನೆರವು ಯೋಜನೆ
- ❖ ಸ್ವಯಂ ಉದ್ಯೋಗ ನೇರ ಸಾಲ ಯೋಜನೆ
- ❖ ಬ್ಯಾಂಕ್‌ಗಳ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಸಾಲ ಯೋಜನೆ
- ❖ ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಯೋಜನೆ
- ❖ ಮಹಿಳೆಯರಿಗೆ ಮೈಕ್ರೋ ಕ್ರೆಡಿಟ್ ಸಾಲ ಯೋಜನೆ

ಈ ಯೋಜನೆಗಳಡಿಯಲ್ಲಿ ಸೌಲಭ್ಯ ಪಡೆಯಲು ಬಯಸುವ ಅರ್ಜಿದಾರರು ಈ ಹಿಂದಿನಂತಯೇ ಅವರು ವಾಸಿಸುತ್ತಿರುವ ಆಯಾ ಜಿಲ್ಲೆಗಳ ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಛೇರಿ, ಆಯಾ ತಾಲ್ಲೂಕಿನ ಹಾಗೂ ನಿಗಮದ ವೆಬ್‌ಸೈಟ್‌ನ್ನು ಸಂಪರ್ಕಿಸಿ ಅರ್ಜಿ ನಮೂನೆಗಳನ್ನು ಪಡೆದು ಅಗತ್ಯ ದಾಖಲಾತಿಗಳನ್ನು ಭರ್ತಿ ಮಾಡಿ ಜಿಲ್ಲಾ ಕಛೇರಿಗಳಿಗೆ ನೇರವಾಗಿ ಸಲ್ಲಿಸಬೇಕು. ಹಿಂದುಳಿದ ವರ್ಗಗಳ ಪ್ರವರ್ಗ–2ಎ ಬರುವ ವಿಶ್ವಕರ್ಮ ಜಾತಿ ಮತ್ತು ಅದರ ಉಪಜಾತಿಗಳಿಗೆ ಸೇರಿದವರಾಗಿರಬೇಕು. ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.40,000/–ಗಳು ಪಟ್ಟಣ ಪ್ರದೇಶದವರಿಗೆ ರೂ.55,000/–ಗಳ ಒಳಗಿರಬೇಕು. ಅರ್ಜಿದಾರರ ವಯಸ್ಸು 18 ರಿಂದ 55 ವರ್ಷಗಳ ಮಿತಿಯಲ್ಲಿರಬೇಕು. ಅರ್ಜಿ ಸಲ್ಲಿಸುವಾಗ ಆಧಾರ್ ಕಾರ್ಡ್ ಜೋಡಣೆಯಾದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆ ಹೊಂದಿರಬೇಕು. ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನೀಡುವುದು.

ಒಂದು ಬಾರಿ ನಿಗಮದ ಯಾವುದಾದರೂ ಯೋಜನೆಯಲ್ಲಿ ಪ್ರಯೋಜನ ಪಡೆದಿದ್ದಲ್ಲಿ ಅಂತಹವರು ಹಾಗೂ ಅವರ ಕುಟುಂಬದವರು ಮತ್ತೊಮ್ಮೆ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ. ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಮೇಲ್ಕಂಡ ಸೌಲಭ್ಯಗಳನ್ನು ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ನಿಗಮದ ವೆಬ್‌ಸೈಟ್ www.kvcdcl.karnataka.gov.in ಇಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಪಡೆಯಲು ನಿಗಮದ ಸಹಾಯವಾಣಿ ಸಂಖ್ಯೆ: 080–22374848 ಅಥವಾ ಆಯಾ ಜಿಲ್ಲಾ ಕಛೇರಿಗಳ ದೂರವಾಣಿ ಸಂಖ್ಯೆಗಳನ್ನು ವೆಬ್‌ಸೈಟ್‌ನಲ್ಲಿ ನೀಡಲಾಗಿದೆ. **ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ/ದಾಖಲಾತಿಗಳೊಂದಿಗೆ ದಿನಾಂಕ: 10–01–2022 ರೊಳಗೆ ಸಲ್ಲಿಸುವುದು. ದಿನಾಂಕ: 11/01/2022ರ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.**

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ವಾ.ಸಾ.ಸಂ.ಇ/ಬೆಂ.ನಗರ/2216/ಆಕಾರ್/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ದಶ 'ಅವತಾರ'ವೆತ್ತಿದ ಶರಣ್!

ಆಶಿಕಾ ರಂಗನಾಥ್ ಹಾಗೂ ಶರಣ್

ಅಭಿಲಾಷ್ ಪಿ.ಎಸ್.

ನಟ ಶರಣ್ ಅವರ ನಟನೆಯೆಂದರೆ ಭರ್ಜರಿ ನಗುವಿನೌತಣ ಖಚಿತ. ಅದಕ್ಕೆ ಸಿಂಪಲ್ ಸುನಿ ಅವರ ಕಥೆ, ಡೈಲಾಗ್ಸ್ ಜೊತೆಗೂಂದಿಷ್ಟು ಅರ್ಜುನ್ ಜನ್ಯ ಅವರ ಕಾಲ್ಕುಣಿಸುವ ಸಂಗೀತವಿದ್ದರೆ ಪ್ರೇಕ್ಷಕರಿಗೆ ಮನರಂಜನೆಯ ಭರ್ಜರಿ ಭೋಜನ. ಡಿ.10ಕ್ಕೆ ತೆರೆಕಾಣಲಿರುವ ಚುಟು–ಚುಟು ಜೋಡಿಯ 'ಅವತಾರ ಪುರುಷ'ದಲ್ಲಿ ನಾಲ್ಕೈದು ಶೇಡ್‌ಗಳಲ್ಲಿ ಕಾಣಿಸಿಕೊಂಡಿರುವ ಶರಣ್, ಹತ್ತಕ್ಕೂ ಅಧಿಕ ಅವತಾರಗಳನ್ನೆತ್ತಿದ್ದಾರೆ. ಶರಣ್ ತಮ್ಮ ಸಿನಿ ಜೀವನದಲ್ಲಿ ಮೊದಲ ಬಾರಿಗೆ ಎರಡು ಭಾಗಗಳಾಗಿ ಬರುತ್ತಿರುವ ಸಿನಿಮಾವೊಂದರಲ್ಲಿ ಕಾಣಿಸಿಕೊಳ್ಳುತ್ತಿದ್ದು, 'ಸಿನಿಮಾ ಪುರವಣಿ' ಜೊತೆಗೆ ಮಾತಿಗಿಳಿದಾಗ ಹೀಗೆಂದರು...

'ತೆರೆಯ ಮೇಲೆ ಎರಡು ವರ್ಷಗಳ ದೀರ್ಘ ಗೈರಿನ ಬಳಿಕ 'ಅವತಾರ ಪುರುಷ'ನಾಗಿ ಬರುತ್ತಿದ್ದೇನೆ. ಈ ಗೈರಿಗೆ ಕಾರಣ ಎಲ್ಲರಿಗೂ ಗೊತ್ತು. ಕೋವಿಡ್ ಮಾರಿ ಇಡೀ ಪ್ರಪಂಚವನ್ನು ಸುಮ್ಮನಿರುವಂತೆ ಮಾಡಿತ್ತು. ಚೆಂದವಾಗಿ ನಡೆಯುತ್ತಿದ್ದ ಪ್ರಪಂಚ ಏಕಾಏಕಿ ನಿಂತು, ಒಂದು ರೀತಿಯ ಪ್ರಶ್ನೆಗಳ ಬೆಟ್ಟವನ್ನೇ ನಮ್ಮ ಮುಂದೆ ಇರಿಸಿತ್ತು. ಚಿತ್ರರಂಗಕ್ಕೆ ಇದರಿಂದ ಬಿದ್ದ ಹೊಡೆತ ದೊಡ್ಡದು. ಹೀಗಾಗಿ ನನ್ನ ವೃತ್ತಿಬದುಕಿನಲ್ಲಿ ಮೊದಲ ಬಾರಿ ಇಷ್ಟು ದೀರ್ಘ ಸಮಯದ ಬಳಿಕ ತೆರೆ ಮೇಲೆ ಕಾಣಿಸಿಕೊಳ್ಳುವಂತಾಗಿದೆ. ನಾನು ಬಹಳ ಕಾತುರದಿಂದ ಈ ಕ್ಷಣಕ್ಕೆ ಕಾಯುತ್ತಿದ್ದೇನೆ. ಇದು ನನ್ನ ಇಲ್ಲಿಯವರೆಗಿನ ಅತಿ ದೊಡ್ಡ ಬಜೆಟ್‌ನ ಸಿನಿಮಾ' ಎನ್ನುತ್ತಾರೆ ಶರಣ್.

'ನಾನು, ಆಶಿಕಾ ರಂಗನಾಥ್ ಹಾಗೂ ಅರ್ಜುನ್ ಜನ್ಯ ಒಂದಾದರೆ ಅದೊಂದು ಹಿಟ್ ಕಾಂಬಿನೇಷನ್. ಇದಕ್ಕೆ ಸಾಕ್ಷಿ 'ಚುಟು ಚುಟು...' ಹಾಗೂ 'ಯವ್ವಾ ಯವ್ವಾ..' ಹಾಡುಗಳು. ಈ ಕಾಂಬಿನೇಷನ್‌ಗೆ ಸಿಂಪಲ್ ಸುನಿಯ ಲೇಪನ. ಇಲ್ಲಿ ನನ್ನತನವೂ ಇದೆ. ಸುನಿ ಅವರ ಸ್ಟೈಲ್ ಕೂಡಾ ಇದೆ. ಇದು ಸಿನಿಮಾದಲ್ಲಿ ವರ್ಕ್‌ಔಟ್ ಆಗಿದೆ. ಈ ಮೂರೂ ಮಸಾಲೆ ಸೇರಿ ಪ್ರೇಕ್ಷಕರಿಗೆ ಹೊಸ ರುಚಿ ಸಿಗಲಿದೆ' ಎಂದರು ಶರಣ್.

'ಕಥೆಗೆ ಅನುಗುಣವಾಗಿ ನಾನು ನಟಿಸಿದ್ದೇನೆ. ಶರಣ್ ಎನ್ನುವುದನ್ನು ಪಕ್ಕಕ್ಕೆ ಇಟ್ಟು, ಶರಣ್ ಒಬ್ಬ ಪಾತ್ರಧಾರಿಯಾಗಿ ಕೆಲವೊಮ್ಮೆ ಕಥೆ ಶರಣ್‌ನನ್ನು ಕೇಳುತ್ತದೆ. ಕೆಲವೊಮ್ಮೆ ಶರಣ್‌ನನ್ನು ಕಮ್ಮಿ ಕೇಳುತ್ತದೆ. ಕೆಲವೊಮ್ಮೆ ಕೇಳುವುದೇ ಇಲ್ಲ. ಹೀಗಾಗಿ ಒಂದಿಷ್ಟು ಅವತಾರಗಳನ್ನು ನಾನು ಸಿನಿಮಾದಲ್ಲಿ ತಾಳಿದ್ದೇನೆ. 'ಓವರ್‌ಆ್ಯಕ್ಟಿಂಗ್ ಅನಿಲ' ಎನ್ನುವ ಜ್ಯೂನಿಯರ್ ಆರ್ಟಿಸ್ಟ್ ಪಾತ್ರದಲ್ಲಿ ಹೈಪರ್ ಶರಣ್‌ನನ್ನು ಕಾಣಲು ಸಾಧ್ಯ. ಇವೆಲ್ಲವನ್ನೂ ಸಿನಿಮಾದ ಕಥೆ ಕೇಳಿದೆ.'

'ಇದು ನನ್ನ ಸಿನಿ ಜೀವನದಲ್ಲಿ ಭಾಗಗಳಾಗಿ ಬರುತ್ತಿರುವ ಮೊದಲ ಸಿನಿಮಾ. ವಿಕ್ಟರಿ ಮತ್ತು ರ‍್ಯಾಂಬೋದಲ್ಲಿ ಎರಡು ಭಾಗಗಳಲ್ಲಿ ಬೇರೆ ಬೇರೆ ಕಥೆ ಇತ್ತು. ಈ ಸಿನಿಮಾದ ಎರಡನೇ ಭಾಗದಲ್ಲಿ ಮೊದಲ ಭಾಗದ ಕಥೆಯೇ ಮುಂದುವರಿಯಲಿದೆ. ಆಪ್ತಮಿತ್ರ ಜಾನರ್‌ನಲ್ಲೇ ಈ ಸಿನಿಮಾವಿದ್ದು ವಾಮಾಚಾರ, ಮಾಟ ಮಂತ್ರದ ಸುತ್ತ ಕಥೆ ಹೆಣೆಯಲಾಗಿದೆ. ಸಾಯಿಕುಮಾರ್, ಸುಧಾರಾಣಿ, ಭವ್ಯ, ಶ್ರೀನಗರ ಕಿಟ್ಟಿ ಹೀಗೆ ಕಲಾವಿದರ ದಂಡೇ ಇದರಲ್ಲಿದೆ' ಎಂದ ಶರಣ್ 'ನನ್ನ ದಶಾವತಾರ ನೋಡಲು ಡಿಸೆಂಬರ್ ಹತ್ತಕ್ಕೆ ಚಿತ್ರಮಂದಿರಕ್ಕೆ ಬನ್ನಿ' ಎಂದರು.

ಚಿತ್ರದಲ್ಲಿ ಶರಣ್ ಅವರಿಗೇ ನಟನೆಯ ಪಾಠ ಕಲಿಸಿಕೊಡುವ ನಾಯಕಿಯ ಪಾತ್ರದಲ್ಲಿ ಆಶಿಕಾ ರಂಗನಾಥ್ ಕಾಣಿಸಿಕೊಂಡಿದ್ದಾರೆ. ಈ ಸಿನಿಮಾದಲ್ಲಿ ಚುಟು–ಚುಟುವಂತೆ ಉತ್ತರ ಕರ್ನಾಟಕ ಶೈಲಿಯ ಪೆಪ್ಪಿ ನಂಬರ್ ಒಂದಿದೆ ಎಂದಿದ್ದಾರೆ ಆಶಿಕಾ.

ವೆಬ್‌ಸೀರೀಸ್ ಸಿನಿಮಾವಾದಾಗ!

ಈ ಕಥೆಯನ್ನು ವೆಬ್‌ಸೀರೀಸ್ ಮಾಡಲೆಂದು ಬರೆದಿದ್ದರು ನಿರ್ದೇಶಕ ಸುನಿ. ನಿರ್ಮಾಪಕ ಪುಷ್ಕರ ಮಲ್ಲಿಕಾರ್ಜುನಯ್ಯ ಅವರು ಇದನ್ನು ಸಿನಿಮಾ ಮಾಡಲು ನಿರ್ಧರಿಸಿ, ಎರಡು ಭಾಗಗಳಾಗಿ ಚಿತ್ರೀಕರಿಸಿದ್ದಾರೆ. 161 ದಿನ ಎರಡೂ ಭಾಗದ ಚಿತ್ರೀಕರಣ ನಡೆದಿದ್ದು, ಎರಡನೇ ಭಾಗದಲ್ಲಿ ಇನ್ನೆರಡು ಹಾಡುಗಳ ಶೂಟಿಂಗ್ ಬಾಕಿ ಇದೆ. ಮೊದಲ ಭಾಗ ಬಿಡುಗಡೆಯಾಗಿ 101ನೇ ದಿನಕ್ಕೆ ಎರಡನೇ ಭಾಗವನ್ನು ರಿಲೀಸ್ ಮಾಡಲು ಚಿತ್ರತಂಡ ನಿರ್ಧರಿಸಿದ್ದು, ಎರಡೂ ಭಾಗಕ್ಕೆ ಸುಮಾರು ₹20 ಕೋಟಿ ವೆಚ್ಚವಾಗಿದೆ.

ಗೋವಿಂದನಿಗೊಬ್ಬಳು ಪದ್ಮಾವತಿ

ಭಾವನಾ ಮೆನನ್

'ಜಾಕಿ' ಸಿನಿಮಾದ ಮೂಲಕ ಚಂದನವನ ಪ್ರವೇಶಿಸಿದ ಮಲಯಾಳಂ ತಾರೆ ಭಾವನಾ ಮೆನನ್ ಅವರಿಗೆ ಕನ್ನಡ ಚಿತ್ರಗಳಲ್ಲಿ ಸರಣಿ ಅವಕಾಶಗಳು ತೆರೆದಿವೆ. ಚಂದನವನದ ದೊಡ್ಡ ನಟರೊಂದಿಗೆ ತೆರೆ ಹಂಚಿಕೊಂಡ ಹೆಗ್ಗಳಿಕೆಯ ಅವರು, ಈಗ 'ಗೋವಿಂದ ಗೋವಿಂದ'ದ ಪದ್ಮಾವತಿಯಾಗಿ ಮತ್ತೆ ಬಂದಿದ್ದಾರೆ. ಹೇಗಿದ್ದಾಳೆ ಈ ಪದ್ಮಾವತಿ ಎಂದು ತಿಳಿಯುವ ಕುತೂಹಲ ಸಿನಿಮಾ ಪುರವಣಿಯದ್ದು.

ಶರತ್ ಹೆಗ್ಡೆ

- **ಕಾರ್ತಿಕಾ ಮೆನನ್‌ನಿಂದ ಭಾವನಾ ಮೆನನ್ ಆದವರೆಗಿನ ಪ್ರಯಾಣ ನೆನಪಿಸುವುದಾದರೆ?**

ಹೌದು, ಇದೊಂದು ದೀರ್ಘ ಪ್ರಯಾಣ. ಮಲಯಾಳಂನ ನಮ್ಮಳ್ ಸಿನಿಮಾದ ಬಳಿಕ ಸಾಕಷ್ಟು ಅವಕಾಶಗಳು ಬರುತ್ತಿದ್ದವು. ಆಗ ನನ್ನ ನಿರ್ದೇಶಕರು ತೆರೆಯ ಮೇಲಿನ ನನ್ನ ಹೆಸರನ್ನು ಬದಲಾಯಿಸಬೇಕು ಎಂದು ಬಯಸಿದರು. ಕೊನೆಗೆ ಎಲ್ಲರೂ ಭಾವನಾ ಎಂಬ ಹೆಸರನ್ನು ಇಷ್ಟಪಟ್ಟರು. ಹಾಗೆ ಭಾವನಾ ಹೆಸರು ಮುಂದುವರಿದಿದೆ. ಇದುವರೆಗೆ 83ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯಿಸಿದ್ದೇನೆ.

- **'ನಮ್ಮಳ್'ನ ಪರಿಮಳ ಪಾತ್ರದಿಂದ 'ಗೋವಿಂದ ಗೋವಿಂದ'ದ ಪದ್ಮಾವತಿವರೆಗೆ ವೃತ್ತಿಬದುಕು ಹೇಗಿದೆ?**

ಈ ಕ್ಷೇತ್ರದಲ್ಲಿ ಸಾಕಷ್ಟು ಕಲಿತಿದ್ದೇನೆ. ಒಳ್ಳೆಯ ಹೆಸರು, ಅವಕಾಶಗಳು ಬಂದಿವೆ. ಪ್ರಶಸ್ತಿಗಳೂ ಬಂದಿವೆ. ವೃತ್ತಿಬದುಕಿನಲ್ಲಿ ಏಳುಬೀಳು ಎರಡನ್ನೂ ಕಂಡಿದ್ದೇನೆ. ಅದೆಲ್ಲಾ ದೊಡ್ಡ ಕತೆಗಳು. ಎಲ್ಲರ ಬದುಕಿನಲ್ಲೂ ಇದ್ದದ್ದೇ ಅಲ್ವಾ?

- **ಕುಟುಂಬದ ಬೆಂಬಲ ಹೇಗಿದೆ?**

ನನ್ನ ಅಪ್ಪ ಸಿನೆಮಾಟೋಗ್ರಾಫರ್ ಆಗಿದ್ದರು. ಅವರಿಗೆ ಈ ಕ್ಷೇತ್ರ ಚೆನ್ನಾಗಿ ಗೊತ್ತಿತ್ತು. ಅಪ್ಪ ಈಗ ಇಲ್ಲ. ಅಮ್ಮ, ಅಣ್ಣನ ಪ್ರೋತ್ಸಾಹ ನಿರಂತರವಾಗಿದೆ.

- **ಚಂದನವನದಲ್ಲಿ ವೃತ್ತಿ ಅನುಭವ ಹೇಗೆ?**

ತುಂಬಾ ಒಳ್ಳೆಯ ಅನುಭವ ಕೊಟ್ಟಿದೆ. ಜಾಕಿ ಸಿನಿಮಾದ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದೆ. ದಿವಂಗತ ಪುನೀತ್‌ರಾಜ್‌ಕುಮಾರ್, ಶಿವಣ್ಣ, ಸುದೀಪ್ ಅವರಂಥ ಅನೇಕ ದೊಡ್ಡ ನಟರು ಇಲ್ಲಿ ಪಕ್ಕಾ ವೃತ್ತಿಪರರು. ತುಂಬಾ ಸಹೃದಯಿಗಳು ಇದ್ದಾರೆ. ಹಾಗಾಗಿ ಇಲ್ಲಿ ಕೆಲಸ ಮಾಡುವುದು ಸುಲಭವಾಯಿತು.

- **ಕನ್ನಡ ಎಷ್ಟು ಕಲಿತಿರಿ?**

ಚಂದನವನಕ್ಕೆ ಬರಬೇಕಾದರೆ ಕನ್ನಡ ಕಲಿಯಬೇಕು. ಇನ್ನೂ ಕಲಿಯುತ್ತಿದ್ದೇನೆ. ಕನ್ನಡದಲ್ಲಿ ವ್ಯವಹರಿಸುವಷ್ಟು ಭಾಷಾಜ್ಞಾನ ಇದೆ. ಇನ್ನಷ್ಟು ಸುಧಾರಣೆ ಆಗಬೇಕು. ಸದ್ಯ ಕನ್ನಡದಲ್ಲಿ ನನ್ನ ಪಾತ್ರಕ್ಕೆ ಬೇರೆಯವರು ಕಂಠದಾನ ಮಾಡುತ್ತಿದ್ದಾರೆ.

- **ತುಂಬಾ ಖುಷಿಕೊಟ್ಟ ಪಾತ್ರ?**

ಎಲ್ಲ ಪಾತ್ರಗಳನ್ನು ಪ್ರೀತಿಯಿಂದಲೇ ಇಷ್ಟಪಟ್ಟು ಮಾಡಿದ್ದೇನೆ. ಎಲ್ಲವೂ ಖುಷಿಕೊಟ್ಟಿವೆ. ಭಜರಂಗಿ 2ನ ಚಿನಿಮಿಂಕಿ, ಗೋವಿಂದ ಗೋವಿಂದದ ಪದ್ಮಾವತಿ ಹೀಗೆ ಎಲ್ಲವೂ ಖುಷಿಕೊಟ್ಟಿವೆ.

- **ಗೋವಿಂದ...ದ ಪದ್ಮಾವತಿ ಹೇಗಿದ್ದಾಳೆ?**

ಪದ್ಮಾವತಿ ಒಂದು ಆಸಕ್ತಿಕರ ಪಾತ್ರ. ನಾಯಕಿಯಾದರೂ ಒಂದು ರೀತಿ ಅತಿಥಿ ಪಾತ್ರದ ರೀತಿ ಇದೆ. ಈ ಚಿತ್ರದಲ್ಲಿ ಪದ್ಮಾವತಿಯದು ಒಬ್ಬಳು ನಟಿಯ ಪಾತ್ರ. ತುಂಬಾ ಸರಳ ವ್ಯಕ್ತಿತ್ವದವಳು. ಎರಡು ಕವಲುಗಳಲ್ಲಿ ಕಥೆ ಸಾಗುತ್ತದೆ. ಉಳಿದ ಪಾತ್ರಗಳ ಜೊತೆ ಚಿತ್ರದಲ್ಲಿ ಒಮ್ಮೆ ಮಾತ್ರ ಮುಖಾಮುಖಿಯಾಗುತ್ತಾಳೆ. ರೂಪೇಶ್ ಶೆಟ್ಟಿಯವರದ್ದು ನಿರ್ದೇಶಕನ ಪಾತ್ರ. ಹೆಚ್ಚು ಮಾತುಕತೆ ನನ್ನ ಅವರ ನಡುವೆ ನಡೆಯುತ್ತದೆ.

- **ಕನ್ನಡದಲ್ಲಿ ಮುಂದೆ ಆಫರ್‌ಗಳೇನಾದರೂ ಇವೆಯೇ?**

ಕತೆಗಳನ್ನು ಕೇಳುತ್ತಿದ್ದೇನೆ. ಒಳ್ಳೆಯ ಸ್ಕ್ರಿಪ್ಟ್, ಪಾತ್ರ ಇದ್ದರೆ ಖಂಡಿತಾ ಅಭಿನಯಿಸುತ್ತೇನೆ. ಸದ್ಯ 'ಗೋವಿಂದ ಗೋವಿಂದ...'ದ ಬಗ್ಗೆ ಒಳ್ಳೆಯ ನಿರೀಕ್ಷೆ ಇಟ್ಟುಕೊಂಡಿದ್ದೇನೆ.

- **ಮುಂದಿನ ಕನಸುಗಳು ಏನಿವೆ?**

ಒಳ್ಳೆಯ ಪಾತ್ರಗಳನ್ನು ಇನ್ನಷ್ಟು ಚೆನ್ನಾಗಿ ಮಾಡಬೇಕು. ನಿರಂತರ ಕಲಿಕೆ ಇದೆ. ಆಸಕ್ತಿದಾಯಕ ಪಾತ್ರಗಳನ್ನು ನಿರೀಕ್ಷಿಸುತ್ತಿದ್ದೇನೆ. ಒಳ್ಳೆಯ ಸ್ಕ್ರಿಪ್ಟ್‌ಗಳು ಸಿಗಬೇಕು.

ನೇತ್ರದಾನದ ಅರಿವಿಗೆ ಬರಲಿದೆ 'ಅಕ್ಷಿ'

ಅಕ್ಷಿ ಸಿನಿಮಾದ ದೃಶ್ಯ

67ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯ ಕನ್ನಡ ಭಾಷೆ ವಿಭಾಗದಲ್ಲಿ, ಅತ್ಯುತ್ತಮ ಚಿತ್ರ ಪ್ರಶಸ್ತಿಯನ್ನು ಗೆದ್ದ ಮನೋಜ್ ಕುಮಾರ್ ನಿರ್ದೇಶನದ 'ಅಕ್ಷಿ' ಡಿ.3ಕ್ಕೆ ತೆರೆಕಾಣಲಿದೆ. ವರನಟ ಡಾ.ರಾಜ್‌ಕುಮಾರ್ ಅವರ ನೇತ್ರದಾನದ ಪ್ರೇರಣೆಯಿಂದ ನಿರ್ಮಾಣವಾಗಿರುವ ಈ ಚಿತ್ರದ ಹಂಚಿಕೆಯ ಜವಾಬ್ದಾರಿಯನ್ನು ಖ್ಯಾತ ನಿರ್ಮಾಪಕ ಜಾಕ್ ಮಂಜು ಹೊತ್ತುಕೊಂಡಿದ್ದಾರೆ.

'ರಾಷ್ಟ್ರ ಪ್ರಶಸ್ತಿ ವಿಜೇತ ಸಿನಿಮಾಗಳಿಗೆ ಚಿತ್ರಮಂದಿರಗಳಲ್ಲಿ ಪ್ರದರ್ಶನಕ್ಕೆ ಅವಕಾಶ ನೀಡಿ ಎಂದು ಕೇಳಿಕೊಳ್ಳುವ ಪರಿಸ್ಥಿತಿಯಲ್ಲಿ ನಾವಿದ್ದೇವೆ' ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದ ಜಾಕ್ ಮಂಜು, 'ಕಮರ್ಷಿಯಲ್ ಸಿನಿಮಾಗಳಿಗೆ ಶೋ ನೀಡಿ ಜನ ಬರದೇ ಇರುವುದನ್ನು ನೀವೇ ನೋಡಿದ್ದೀರಿ. ರಾಷ್ಟ್ರ ಪ್ರಶಸ್ತಿ ವಿಜೇತ ಸಿನಿಮಾ ಎಂದು ಬೇರೆ ರೀತಿ ನೋಡಬೇಡಿ. ಕಣ್ಣಂಚಿನಲ್ಲಿ ನೀರು ಬರುವ ಭಾವನಾತ್ಮಕ ಸಿನಿಮಾ ಇದು' ಎಂದರು.

'ಅಪ್ಪು ನೋಡಿದ್ದಾರೋ ಇಲ್ಲವೋ ಗೊತ್ತಿಲ್ಲ'

'ಅಕ್ಟೋಬರ್ ಎರಡನೇ ವಾರದಲ್ಲಿ ನಾವು ಪುನೀತ್ ರಾಜ್‌ಕುಮಾರ್ ಅವರನ್ನು ಭೇಟಿಯಾಗಿದ್ದೆವು. ಅವರು ನಮ್ಮ ಸಿನಿಮಾ ನೋಡಬೇಕು ಎಂದು ಆಸೆಪಟ್ಟಿದ್ದರು. ಇದಕ್ಕಾಗಿ ನಾವು ಅವರಿಗೆ ಪ್ರೈವೇಟ್ ಲಿಂಕ್ ಕಳುಹಿಸಿಕೊಟ್ಟಿದ್ದೆವು. ಅವರು ಸಿನಿಮಾ ನೋಡಿದ್ದಾರೆ ಎಂದು ನನ್ನ ಮನಸ್ಸು ಹೇಳುತ್ತಿದೆ. ನೋಡಿಲ್ಲವೆಂದರೂ, ಅವರು ದಾನ ಮಾಡಿರುವ ಕಣ್ಣುಗಳು ಮುಂದೊಂದು ದಿನ ಈ ಸಿನಿಮಾ ನೋಡಲಿವೆ ಎನ್ನುವ ಭರವಸೆ ಇದೆ' ಎಂದರು ಚಿತ್ರದ ನಿರ್ಮಾಪಕ ಕಲಾದೇಗುಲ ಶ್ರೀನಿವಾಸ್.

ಚಿತ್ರಮಂದಿರದ ಹೊರಗಡೆ ನೇತ್ರದಾನದ ಅರ್ಜಿ

'ಈಗಾಗಲೇ ಸಿನಿಮಾ ನೋಡಿದ ಹಲವರು ತಾವೂ ನೇತ್ರದಾನ ಮಾಡುವ ಪ್ರತಿಜ್ಞೆ ತೆಗೆದುಕೊಂಡಿದ್ದಾರೆ. ಚಿತ್ರ ಬಿಡುಗಡೆಯಾದ ಬಳಿಕ ಚಿತ್ರ ಮಂದಿರದ ಹೊರಗಡೆಯೂ ನೇತ್ರದಾನದ ಅರ್ಜಿಯನ್ನು ನೀಡುತ್ತೇವೆ. ನಾರಾಯಣ ನೇತ್ರಾಲಯ ನಮ್ಮ ಜೊತೆ ಕೈಜೋಡಿಸಿದ್ದು, ಸಿನಿಮಾ ನೋಡಿದವರು ಖಂಡಿತವಾಗಿಯೂ ನೇತ್ರದಾನ ಮಾಡುತ್ತಾರೆ ಎನ್ನುವ ಭರವಸೆ ಇದೆ' ಎಂದು ಶ್ರೀನಿವಾಸ್ ಹೇಳಿದರು.

ನಿಶ್ವಿಕಾ ಜೊತೆ ಕೃಷ್ಣನ 'ದಿಲ್‌ಪಸಂದ್'

ರಶ್ಮಿ ಫಿಲಂಸ್ ಲಾಂಛನದಲ್ಲಿ ಸುಮಂತ್ ಕ್ರಾಂತಿ ಅವರು ನಿರ್ಮಿಸುತ್ತಿರುವ, ಡಾರ್ಲಿಂಗ್ ಕೃಷ್ಣ ನಟನೆಯ 'ದಿಲ್ ಪಸಂದ್' ಚಿತ್ರದ ಫಸ್ಟ್‌ಲುಕ್ ಬಿಡುಗಡೆಯಾಗಿದೆ. ಫಸ್ಟ್‌ಲುಕ್‌ನಲ್ಲಿನ ಡಾರ್ಲಿಂಗ್ ಕೃಷ್ಣ ಹಾಗೂ ನಿಶ್ವಿಕಾ ನಾಯ್ಡು ಜೋಡಿಗೆ ಸಿನಿಪ್ರಿಯರು ಫಿದಾ ಆಗಿದ್ದಾರೆ.

ಶಿವತೇಜಸ್ ನಿರ್ದೇಶನದ ಈ ಚಿತ್ರದಲ್ಲಿ ಡಾರ್ಲಿಂಗ್ ಕೃಷ್ಣ ಜೋಡಿಯಾಗಿ ನಿಶ್ವಿಕಾ ನಾಯ್ಡು ಹಾಗೂ ಮೇಘ ಶೆಟ್ಟಿ ನಟಿಸುತ್ತಿದ್ದಾರೆ. ಲವ್ ಮಾಕ್ಟೆಲ್ ಚಿತ್ರದ ಯಶಸ್ಸಿನ ಬಳಿಕ ಕೃಷ್ಣ ಅವರು ಬಹುತೇಕ ರೊಮ್ಯಾಂಟಿಕ್ ಸಿನಿಮಾಗಳಲ್ಲೇ ಕಾಣಿಸಿಕೊಳ್ಳುತ್ತಿದ್ದಾರೆ. 'ದಿಲ್‌ಪಸಂದ್' ಚಿತ್ರದ ಮೊದಲ ಹಂತದ ಚಿತ್ರೀಕರಣ ಪೂರ್ಣಗೊಂಡಿದ್ದು, ಡಿಸೆಂಬರ್ ಮೊದಲ ವಾರದಲ್ಲಿ ದ್ವಿತೀಯ ಹಂತದ ಚಿತ್ರೀಕರಣ ಆರಂಭವಾಗಲಿದೆ ಎಂದು ಚಿತ್ರತಂಡ ತಿಳಿಸಿದೆ.

ಸಾಧುಕೋಕಿಲ, ರಂಗಾಯಣ ರಘು, ತಬಲ ನಾಣಿ, ಅರುಣ ಬಾಲರಾಜ್ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ. ಅರ್ಜುನ್ ಜನ್ಯ ಅವರ ಸಂಗೀತ ನಿರ್ದೇಶನ, ಶೇಖರ್ ಚಂದ್ರ ಛಾಯಾಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ ಹಾಗೂ ರವಿವರ್ಮರ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.

ನಿಶ್ವಿಕಾ ನಾಯ್ಡು ಹಾಗೂ ಡಾರ್ಲಿಂಗ್ ಕೃಷ್ಣ

ಬರ್ತಾ ಇದೆ ಅಪ್ಪು 'ಗಂಧದ ಗುಡಿ'

ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಕನಸಿನ ಕೂಸು 'ಪಿಆರ್‌ಕೆ ಪ್ರೊಡಕ್ಷನ್ಸ್' ಮತ್ತು 'ಪಿಆರ್‌ಕೆ ಆಡಿಯೊ'. ಇದೇ ಪಿಆರ್‌ಕೆ ಪ್ರೊಡಕ್ಷನ್ಸ್‌ನಡಿ, ರಾಷ್ಟ್ರಪ್ರಶಸ್ತಿ ವಿಜೇತ 'ವೈಲ್ಡ್ ಕರ್ನಾಟಕ' ಖ್ಯಾತಿಯ ಅಮೋಘವರ್ಷ ಜೆ.ಎಸ್. ಅವರ ಜೊತೆಗೂಡಿ ಪುನೀತ್ ಹೊಸ ಕನಸೊಂದನ್ನು ನನಸು ಮಾಡುವ ಹೊಸ್ತಿಲ್ಲಲ್ಲಿದ್ದರು. ಆದರೆ ಈ ಕನಸು ನನಸಾಗುವ ಮುನ್ನವೇ ಇನ್ನಿಲ್ಲವಾದರು.

ಪುನೀತ್ ಕಂಡ ಕನಸನ್ನು ನನಸು ಮಾಡಲು ಅವರ ಪತ್ನಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಇದೀಗ ಹೆಜ್ಜೆ ಇಟ್ಟಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ಅಶ್ವಿನಿ, 'ಅಪ್ಪು ಅವರ ಕನಸೊಂದು ನವೆಂಬರ್ 1ರಂದು ಬೆಳಕು ಕಾಣಬೇಕಿತ್ತು. ಆದರೆ ಆ ಕನಸಿಗಿದು ಅಲ್ಪವಿರಾಮವಷ್ಟೆ. ಅದನ್ನು ಅವರಿಷ್ಟದಂತೆಯೇ ನಿಮ್ಮೆದುರು ನನಸಾಗಿಸುವ ಜವಾಬ್ದಾರಿ ನಮ್ಮದು. ಇಲ್ಲಿಯ ತನಕ ನೀವು ತೋರಿದ ಸಂಯಮ ಮತ್ತು ಸಹಕಾರಕ್ಕೆ ನಾವು ಆಭಾರಿ' ಎಂದಿದ್ದಾರೆ.

'ಗಂಧದ ಗುಡಿ' ಹೆಸರಿನಲ್ಲಿ ಕರ್ನಾಟಕದ ವನ್ಯಲೋಕ, ವನ್ಯಸಂಪತ್ತನ್ನು ಪರಿಚಯಿಸುವ ಡಾಕ್ಯೂಫಿಲಂ ಒಂದನ್ನು ಪಿಆರ್‌ಕೆ ಪ್ರೊಡಕ್ಷನ್ಸ್ ಕೈಗೆತ್ತಿಕೊಂಡಿತ್ತು. ಪುನೀತ್ ಕೂಡಾ ಇದರ ಭಾಗವಾಗಿದ್ದರು. ನಾಗರಹೊಳೆ, ಕಾಳಿನದಿ, ಹೊಸಪೇಟೆ ಸೇರಿದಂತೆ ಕರ್ನಾಟಕದ ಹಲವು ಜಾಗಗಳಲ್ಲಿ ಸುತ್ತಿ ಚಿತ್ರೀಕರಣ ಮಾಡಿದ್ದರು. ಇಲ್ಲಿ ಸುತ್ತಿದ ವಿಡಿಯೊವನ್ನೂ ಪುನೀತ್ ತಮ್ಮ ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದರು. 'ಗಂಧದ ಗುಡಿ'ಯ ಶೇ 90ರಷ್ಟು ಭಾಗ ಚಿತ್ರೀಕರಣ ಮುಗಿದಿತ್ತು. ಕಳೆದ ನ.1ರ ಕನ್ನಡ ರಾಜ್ಯೋತ್ಸವದಂದು ಇದರ ಟೀಸರ್ ಬಿಡುಗಡೆ ಮಾಡಲು ಪುನೀತ್ ಸಿದ್ಧಮಾಡಿಕೊಂಡಿದ್ದರು.

ಸುಭಾಷಿತ

ನೀವು ವರ್ತಮಾನದಲ್ಲಿ ಬದುಕುವಿರಾದರೆ, ಏನೆಲ್ಲ ಮಾಡಲು ಬಯಸುವಿರೋ ಅದೆಲ್ಲವನ್ನೂ ಮಾಡಲು ಬಹಳಷ್ಟು ಸಮಯವನ್ನು ಜೀವನ ನಿಮಗೆ ನೀಡುತ್ತದೆ.

–ದೀಪಕ್ ಚೋಪ್ರಾ

ವಿಜ್ಞಾನಕೇಂದ್ರಕ್ಕೆ ಕೆಸರುನೀರು: ಮಹಾಮಳೆಯ ಜಲಧಾರೆಗೆ ದಾರಿ ತೋರುವವರಾರು?

ಹವಾಮಾನದ ಏರುಪೇರಿನಿಂದಾಗುವ ಅನಾಹುತಗಳ ಬಗ್ಗೆ ವಿಜ್ಞಾನಿಗಳು ಪದೇ ಪದೇ ಹೇಳುತ್ತಿರುವ ಈ ಹೊತ್ತಿನಲ್ಲೇ ಅತಿಮಳೆಯಿಂದಾಗಿ ಬೆಂಗಳೂರಿನ ಪ್ರತಿಷ್ಠಿತ ವೈಜ್ಞಾನಿಕ ಸಂಸ್ಥೆಯೇ ಗಂಭೀರ ನಷ್ಟವನ್ನು ಅನುಭವಿಸಬೇಕಾಗಿ ಬಂದಿದೆ. ಜಕ್ಕೂರಿನಲ್ಲಿರುವ ಜವಾಹರಲಾಲ್ ನೆಹರೂ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರದ ಆವರಣಕ್ಕೆ (ಜೆಎನ್‌ಸಿಎಎಸ್‌ಆರ್) ಅಧಿಕ ಪ್ರಮಾಣದಲ್ಲಿ ಪ್ರವಾಹ ನುಗ್ಗಿದ್ದರಿಂದ ಪ್ರಯೋಗಶಾಲೆಯ ಉಪಕರಣಗಳು, ಸಂರಕ್ಷಿತ ಮಾದರಿಗಳು, ಎಲೆಕ್ಟ್ರಾನಿಕ್ ಸಾಧನಗಳು ಮತ್ತು ದಸ್ತಾವೇಜುಗಳು ನೀರುಪಾಲಾಗಿವೆ. ಒಂದೆರಡು ದಿನಗಳಲ್ಲಿ ನೆರೆ ತಗ್ಗಿದರೂ ಅಲ್ಲಿ ಮಡುಗಟ್ಟಿದ ಕೆಸರುಹೊಂಡ ಮತ್ತು ಚರಂಡಿ ರೊಚ್ಚಿನಿಂದಾಗಿ ಬಹುಪಾಲು ಸಂಶೋಧನಾ ಸಾಧನಗಳನ್ನು ನಿರುಪಯುಕ್ತವಾಗಿಸಿವೆ. ಈ ವರ್ಷದ ಮಳೆಗಾಲದ ಅರ್ಧಭಾಗಕ್ಕೆ ಲೆಕ್ಕವಿಲ್ಲದಷ್ಟು ಪ್ರಮಾಣದಲ್ಲಿ ರಾಷ್ಟ್ರದಾದ್ಯಂತ ಆಸ್ತಿಪಾಸ್ತಿ, ಕೃಷಿಫಸಲು, ಸಂಪರ್ಕ ಸಾಧನಗಳ ನಷ್ಟ ಸಂಭವಿಸಿದ್ದು, ಪರಿಹಾರದ ಅಂದಾಜು ಮಾಡುವುದೂ ಸವಾಲಿನ ಪ್ರಕ್ರಿಯೆಯಾಗಿದೆ. ಅವುಗಳ ಮಧ್ಯೆ ಭಾರತದ ಶ್ರೇಷ್ಠ ವೈಜ್ಞಾನಿಕ ಸಂಶೋಧನಾ ತಾಣಗಳಲ್ಲೊಂದೆಂಬ ಹೆಗ್ಗಳಿಕೆ ಪಡೆದ ಜೆಎನ್‌ಸಿಎಎಸ್‌ಆರ್ ಆವರಣದ ಹಾನಿಯಂತೂ ಅಂದಾಜಿಗೂ ಸಿಗಲಾರದು. ಕೋಟಿಗಟ್ಟಲೆ ರೂಪಾಯಿ ಬೆಲೆಬಾಳುವ ಎಲೆಕ್ಟ್ರಾನಿಕ್ ಮೈಕ್ರೊಸ್ಕೋಪ್‌ಗಳು, ಅತಿಶೀತಕ ಯಂತ್ರಗಳು, ಕಂಪ್ಯೂಟರ್ ಮತ್ತಿತರ ದುಬಾರಿ ಸಲಕರಣೆಗಳಿಗೆ ಬೆಲೆ ಕಟ್ಟಬಹುದು; ರಿಪೇರಿಯೂ ಕೆಲಮಟ್ಟಿಗೆ ಸಾಧ್ಯವಾಗಬಹುದು. ಆದರೆ ದೇಶ ವಿದೇಶಗಳಿಂದ ಬರುವ ಸಂಶೋಧಕರ ಬಳಕೆಗೆಂದು ಹತ್ತಾರು ವರ್ಷಗಳಿಂದ ಜತನವಾಗಿ ಕಾಪಿಡಲಾಗಿದ್ದ ಅಪರೂಪದ ಜೀವಕೋಶಗಳು, ಅಣುಕೋಶಗಳು, ವಿವಿಧ ಕಾಯಿಲೆಗಳಿಗೆ ಸಂಬಂಧಿಸಿದ ಮಿದುಳಿನ ನರಕೋಶಗಳು, ವಂಶವಾಹಿ ಡಿಎನ್‌ಎ ಮಾದರಿಗಳು ಜಾಗತಿಕ ಆಸ್ತಿಗಳಾಗಿದ್ದುವು. ಅವು ನಷ್ಟವಾಗಿದ್ದರೆ ಎಷ್ಟೇ ಹಣ ಕೊಟ್ಟರೂ ಅವುಗಳ ಮರುಪ್ರತಿಷ್ಠಾಪನೆ ಮರುಸೃಷ್ಟಿಯಾಗಲೀ ಸಾಧ್ಯವಿಲ್ಲ. ವಿಜ್ಞಾನ ಪ್ರಪಂಚದಲ್ಲಿ ಮುಂಚೂಣಿಯಲ್ಲಿದ್ದ ಸಂಶೋಧನಾ ಸಂಸ್ಥೆಯು ದಶಕಗಳ ಹಿನ್ನಡೆ ಅನುಭವಿಸಬೇಕಾದೀತು.

ನಿಸರ್ಗದ ನಿಯಮಗಳಿಗೆ ಪೂರಕವಾಗಿ ನಗರಗಳನ್ನು ಮರುರೂಪಿಸಲು ಬೇಕಾದ ವೈಜ್ಞಾನಿಕ ಪರಿಜ್ಞಾನ ಮತ್ತು ರಾಜಕೀಯ ಕಟಿಬದ್ಧತೆ ಮೂಡಬೇಕಾಗಿದೆ

ಅತಿವೃಷ್ಟಿಯ ಆತಂಕಗಳ ಬಗ್ಗೆ ವಿಜ್ಞಾನಿಗಳೇ ಮುನ್ಸೂಚನೆ ನೀಡಿರಲಿಲ್ಲವೆ, 'ಇದ್ದರೂ ಅದಕ್ಕೆ ತಕ್ಕ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರಲಿಲ್ಲವೆ' ಎಂಬ ಉದ್ಗಾರ ಈ ಪ್ರಸಂಗದಲ್ಲಿ ಏಳಬಹುದಾದರೂ ಬೆಂಗಳೂರಿನ ನಗರ ನಿರ್ಮಾಣದ ಅಧ್ವಾನಗಳು ಎಂಥ ತಪ್ಪುದಾರಿಗೆ ದಿಕ್ಕೆಡಿಸಿದುವು ಎಂಬುದಕ್ಕೆ ಇದೊಂದು ಉತ್ತಮ ನಿದರ್ಶನವಾಗಿ ನಿಲ್ಲುತ್ತದೆ. ಜಕ್ಕೂರು ಕೆರೆ ಮತ್ತು ರಾಚೇನಹಳ್ಳಿ ಕೆರೆ ಕೆಳದಂಡೆಯಲ್ಲಿ 32 ವರ್ಷಗಳ ಹಿಂದೆಯೇ ನಿರ್ಮಾಣಗೊಂಡ ಈ ಸಂಶೋಧನಾ ಸಂಸ್ಥೆಗೆ ಮೊದಲ ಒಂದೆರಡು ದಶಕಗಳಲ್ಲಿ ಪ್ರವಾಹದ ಆತಂಕವೇನೂ ಇರಲಿಲ್ಲ. ಆದರೆ ಕ್ರಮೇಣ ನೀರಿನ ಹರಿವಿಗೆ ಅಡ್ಡಲಾಗಿ ಕಟ್ಟಡಗಳು ತಲೆ ಎತ್ತಿದ್ದು, ಬಿಬಿಎಂಪಿ ಬಡಾವಣೆ ರೂಪುಗೊಂಡಿದ್ದು ವಿಜ್ಞಾನಿಗಳ ಆತಂಕಕ್ಕೆ ಕಾರಣವಾಗಿತ್ತು. [illegible]

ಅತಿವೃಷ್ಟಿಯಿಂದ ನಲುಗುವ ನಗರಗಳ ಸಂಖ್ಯೆ ಈಚಿನ ವರ್ಷಗಳಲ್ಲಿ ಜಗತ್ತಿನ ಎಲ್ಲೆಡೆ ಹೆಚ್ಚುತ್ತಿದೆ. ನಮ್ಮಲ್ಲಂತೂ ಈ ಸಂಕಟಗಳನ್ನು ದ್ವಿಗುಣಗೊಳಿಸುವಂತೆ ಪರಿಸರ [illegible] ಹೆಚ್ಚುತ್ತಿದೆ. ನಿಸರ್ಗದ ಸಹಜ ಸಾಮರ್ಥ್ಯವನ್ನು ಮೀರಿ ಬೆಳೆಯಬೇಕೆಂಬ ನಮ್ಮ ಧಾರ್ಷ್ಟ್ಯವನ್ನು ಬದಿಗಿಟ್ಟು ಅದರ ನಿಯಮಗಳಿಗೆ ಪೂರಕವಾಗಿ ನಗರಗಳನ್ನು ಮರುರೂಪಿಸಬೇಕಾದ ಅನಿವಾರ್ಯ ದಿನದಿನಕ್ಕೆ ಹೆಚ್ಚುತ್ತಿದೆ. [illegible] ವಿಜ್ಞಾನ ಸಂಶೋಧನಾ ಕೇಂದ್ರಗಳ ರಾಜಧಾನಿಯಲ್ಲಿ ವಿಜ್ಞಾನಿಗಳ ಅಂಗಳಕ್ಕೇ ನೀರು ನುಗ್ಗಿದಾಗಲೂ ನಾವು ಈ ತುರ್ತನ್ನು ಅರಿಯದಿದ್ದರೆ ಹೇಗೆ?

ದಿನದ ಟ್ವೀಟ್

ಭ್ರಷ್ಟಾಚಾರ ತಡೆಯಲಾಗದೇ?

ಕರ್ನಾಟಕದಲ್ಲಿ ಭ್ರಷ್ಟಾಚಾರ ಕುರಿತಾದ ಯಾವುದೇ ಟ್ರ್ಯಾಪ್ ಅಥವಾ ಅಕ್ರಮ ಆಸ್ತಿ ಕುರಿತಾದ ರೇಡ್‌ಗಳಲ್ಲಿ ಐಎಎಸ್, ಐಪಿಎಸ್ ಅಧಿಕಾರಿಗಳ ಹೆಸರು ಕೇಳಿಬರುವುದಿಲ್ಲ ಏಕೆ? ಐಎಎಸ್, ಐಪಿಎಸ್‌ಗಳು ಅಷ್ಟೊಂದು ಶುದ್ಧಹಸ್ತರಾಗಿದ್ದಲ್ಲಿ ಕೆಳ ಹಂತದ ಅಧಿಕಾರಿಗಳ ಭ್ರಷ್ಟಾಚಾರವನ್ನು ತಡೆಯಲು ಯಾಕೆ ಸಮರ್ಥರಾಗಿಲ್ಲ?

ಅನುಪಮಾ ಶೆಣೈ, ಮಾಜಿ ಪೊಲೀಸ್ ಅಧಿಕಾರಿ

ಕಿಡಿನುಡಿ

ಜಾತಿ, ಧರ್ಮ, ಪ್ರಾದೇಶಿಕತೆ ಸೇರಿದಂತೆ ಎಲ್ಲವನ್ನೂ ಮೀರಿ ಕೃಷಿ ಕಾಯ್ದೆಗಳ ವಿರುದ್ಧ ರೈತರು ಹೋರಾಟ ನಡೆಸಿದ್ದಾರೆ. ರೈತರ ಜೀವನದ ಜತೆ ಆಟವಾಡುವ ಧೈರ್ಯ ತೋರಬಾರದು ಎನ್ನುವ ಪಾಠವನ್ನು ಈ ಹೋರಾಟವು ಎಲ್ಲ ರಾಜಕೀಯ ಪಕ್ಷಗಳ ನಾಯಕರಿಗೆ ಕಲಿಸಿದೆ.



ಯೋಗೇಂದ್ರ ಯಾದವ್, ಸ್ವರಾಜ್ ಇಂಡಿಯಾ ಸಂಸ್ಥಾಪಕ

25 ವರ್ಷಗಳ ಹಿಂದೆ ಮಂಗಳವಾರ, 26-11-1996

● **ದಳದ ಪದ್ಮಾವತಿ ಬೆಂಗಳೂರು ಮೇಯರ್**

ಬೆಂಗಳೂರು, ನ. 25– ಬೆಂಗಳೂರು ಮಹಾನಗರಪಾಲಿಕೆಯ 47 ವರ್ಷದ ಇತಿಹಾಸದಲ್ಲಿ ಮೊದಲ ಬಾರಿಗೆ ಮಹಿಳಾ ಅಭ್ಯರ್ಥಿಗಳಿಬ್ಬರು ಮೇಯರ್ ಮತ್ತು ಉಪ ಮೇಯರ್ ಆಗಿ ಆಯ್ಕೆಯಾಗಿದ್ದು, ಈ ಎರಡೂ ಸ್ಥಾನಗಳಿಗೆ ಕ್ರಮವಾಗಿ ಜನತಾದಳದ ಪದ್ಮಾವತಿ ಗಂಗಾಧರಗೌಡ ಹಾಗೂ ವೆಂಕಟಲಕ್ಷ್ಮಿ ಚುನಾಯಿತರಾಗಿದ್ದಾರೆ.

ಈ ಹಿಂದೆ 1960ರಲ್ಲಿ ಬಿ. ಇಂದಿರಮ್ಮ ಅವರು ಮೇಯರ್ ಆಗಿದ್ದನ್ನು ಹೊರತು ಪಡಿಸಿದರೆ ಮತ್ತೊಬ್ಬ ಮಹಿಳೆ ಈ ಪ್ರತಿಷ್ಠಿತ ಸ್ಥಾನಕ್ಕೆ ಬಂದಿರಲಿಲ್ಲ.

● **ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿಭಜನೆ**

ಬೆಂಗಳೂರು, ನ. 25– ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಮೂರು ವಿಭಾಗಗಳಾಗಿ ವಿಭಜಿಸುವ ಜತೆಗೆ ಬೆಂಗಳೂರು ಸಾರಿಗೆ ವ್ಯವಸ್ಥೆಯನ್ನು ಪ್ರತ್ಯೇಕಗೊಳಿಸಲು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರ ಅಧ್ಯಕ್ಷತೆಯಲ್ಲಿ ಇಂದು ಇಲ್ಲಿ ನಡೆದ ಉನ್ನತ ಮಟ್ಟದ ಸಭೆ ನಿರ್ಧಾರ ತೆಗೆದುಕೊಂಡಿದೆ.

50 ವರ್ಷಗಳ ಹಿಂದೆ ಶುಕ್ರವಾರ, 26-11-1971

● **ಎರಡು ಲಕ್ಷ ಡಾಲರ್ ಆಕಾಶ ದರೋಡೆ**

ರೇನೋ, ನೆವಾಡಾ, ನ. 24– ವಿಮಾನದಲ್ಲಿ ಬಾಂಬ್ ತೋರಿಸಿ, ಎರಡು ಲಕ್ಷ ಡಾಲರ್ ಪಡೆದು ಯಾನ ಮಧ್ಯದಲ್ಲಿಯೇ ವಿಮಾನದಿಂದ ನಾಪತ್ತೆಯಾದ ಒಂದು ಪ್ರಕರಣ ವರದಿಯಾಗಿದೆ.

'ನಾರ್ತ್ ವೆಸ್ಟ್ ಏರ್‌ಲೈನ್ಸ್'ನ 727 ಜೆಟ್ ವಿಮಾನವೊಂದು ವಾಷಿಂಗ್ಟನ್‌ನಿಂದ ಸಿಯಾಟಲ್‌ಗೆ ಹೊರಟಿತ್ತು. ವಿಮಾನ ಅಪಹರಿಸುವ ಪ್ರಯತ್ನಿಸಿದವ ಅರಿಗಾನ್ ಪೋರ್ಟ್‌ಲ್ಯಾಂಡ್‌ನಲ್ಲಿ ವಿಮಾನ ಹತ್ತಿ, [illegible] ತೋರಿಸಿ ಬೆದರಿಸಿದನು. ಅವನು ಎರಡು ಲಕ್ಷ ಡಾಲರ್‌ಗಳು ಮತ್ತು ನಾಲ್ಕು ಪ್ಯಾರಾಶೂಟ್‌ಗಳಿಗೆ ಒತ್ತಾಯ ಹಾಕಿದನು.

ಚಾಲಕನು ಸಿಯಾಟಲ್ ಮೇಲೆ ಎರಡು ಗಂಟೆ ಕಾಲ ಹಾರಾಟ ನಡೆಸಿ 'ಒಳಗಡೆ ತನಗೆ ಯಾವುದೋ ಒಂದು ಸಮಸ್ಯೆ' ಇದೆಯೆಂದು 36 ಜನ ಪ್ರಯಾಣಿಕರಿಗೆ ತಿಳಿಸಿದನು.

ವಿಮಾನವು ಸಿಯಾಟಲ್‌ನಲ್ಲಿ ಪೆಟ್ರೋಲ್ ತುಂಬಿಸಿಕೊಂಡು ಹೊರಟಾಗ ಅದರಲ್ಲಿ ಚಾಲಕ ವರ್ಗದವರು ಮತ್ತು ಅಪಹರಣಕಾರ ಮಾತ್ರ ಇದ್ದರು. ವಿಮಾನದ ಹಿಂದಿನ ಬಾಗಿಲಿನ ಬೀಗ ಹಾಕಿರಲಿಲ್ಲವೆಂದು [illegible] ತಿಳಿಸಿದ್ದಾನೆ. ಅವನು ಎರಡು ಲಕ್ಷ ಡಾಲರ್‌ಗಳೊಂದಿಗೆ ಪ್ಯಾರಾಶೂಟ್‌ನಲ್ಲಿ ಇಳಿದು ಬಿಟ್ಟಿರಬಹುದೆಂದು ಭಾವಿಸಲಾಗಿದೆ.

ಕನ್ನಡ ಮತ್ತು ಕನ್ನಡಿಗರಿಗೆ ಬದುಕಿನ ಭದ್ರತೆ ಒದಗಿಸಲು ಭಾಷಿಕ ನೆಲೆಯಲ್ಲಷ್ಟೇ ಚಿಂತಿಸಿದರೆ ಸಾಲದು

ಖಾಸಗೀಕರಣದ ಕಾಲದಲ್ಲಿ ಕನ್ನಡ

ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ಕನ್ನಡವನ್ನು ಉಳಿಸಿ ಬೆಳೆಸುವ ಒತ್ತಾಸೆ ಮತ್ತು ಹಕ್ಕೊತ್ತಾಯಗಳು ನಿರಂತರವಾಗಿ ಪ್ರಕಟಗೊಳ್ಳುತ್ತಲೇ ಇರುವುದು ಕನ್ನಡಾಭಿಮಾನದ ಒಂದು ಮಾದರಿ. ಇದು ಅಗತ್ಯವೂ ಹೌದು. ಆದರೆ ಇದೇ ಸಂದರ್ಭದಲ್ಲಿ ಭಾಷೆಯ ಭವಿಷ್ಯಕ್ಕೂ ಸಾಮಾಜಿಕ ಆರ್ಥಿಕ ನೀತಿ ಮತ್ತು ಸ್ಥಿತಿಗತಿಗಳಿಗೂ ಇರುವ ಸಂಬಂಧವನ್ನು ಅರ್ಥ ಮಾಡಿಕೊಳ್ಳುವ ಅಗತ್ಯವಿದೆ.

ಹಿಂದಿನಿಂದಲೂ ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿಯವರ ಸಹಭಾಗಿತ್ವವಿದೆ. ಅಂದಿನ ಮಿಶ್ರ ಆರ್ಥಿಕ ಪದ್ಧತಿಯ ಪರಿವಲಯದಲ್ಲೇ ಖಾಸಗಿ ಶಿಕ್ಷಣ ಸಂಸ್ಥೆಗಳು ನಡೆಯುತ್ತಿದ್ದವು. ಸರ್ಕಾರದ ಉದ್ಯೋಗ ನೀತಿಯನ್ನು ಒಪ್ಪಿಕೊಂಡು ಅನುದಾನಕ್ಕೂ ಒಳಪಡುತ್ತಿದ್ದವು. ಉತ್ತಮ ಶೈಕ್ಷಣಿಕ ಸೇವೆ ಮಾಡುತ್ತಿದ್ದವು. ಆದರೆ ಈಗ ಅನುದಾನವೂ ಬೇಡ, ಸರ್ಕಾರದ ಉದ್ಯೋಗ ಸಂಹಿತೆಯೂ ಬೇಡ ಎನ್ನುವ ಧಾರ್ಷ್ಟ್ಯವನ್ನು ಕೆಲವು ಪ್ರತಿಷ್ಠಿತ ಖಾಸಗಿ ಸಂಸ್ಥೆಗಳು ತೋರುತ್ತಿವೆ. ಇದು ರಾಷ್ಟ್ರ ಮಟ್ಟದಲ್ಲಿ ಜಾರಿಗೆ ಬಂದ ಆರ್ಥಿಕ ಖಾಸಗೀಕರಣದ ಫಲ.

ಮುಂದುವರೆದಂತೆ, ಸ್ವಾಯತ್ತ ಕಾಲೇಜುಗಳ ಕಲ್ಪನೆ ಬಂತು. ಈ ಕಾಲೇಜುಗಳು ಸರ್ಕಾರ ನಿಗದಿಪಡಿಸಿದ ಪಠ್ಯಕ್ರಮದಲ್ಲೂ ಒಂದಷ್ಟು ಬದಲಾವಣೆ ಮಾಡಿಕೊಳ್ಳುವ 'ಅಧಿಕಾರ' ಪಡೆದಿರುವುದರಿಂದ ಕನ್ನಡಕ್ಕೆ ಪೂರ್ಣನ್ಯಾಯ ಒದಗುವುದಿಲ್ಲ. ಡೀಮ್ಡ್ ಮತ್ತು ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಇದಕ್ಕಿಂತ ಘೋರಸ್ಥಿತಿಯನ್ನು ಕನ್ನಡ ಭಾಷೆ ಎದುರಿಸಬೇಕಾಗಿದೆ. ಯಾಕೆಂದರೆ ಅವುಗಳಿಗೆ ಅಪರಿಮಿತ 'ಅಧಿಕಾರ'ವಿದೆ. ಈ ಸಂಸ್ಥೆಗಳಲ್ಲಿ ಕನ್ನಡ ಪಠ್ಯಕ್ಕೆ ನಿಗದಿಪಡಿಸಿರುವ ಬೋಧನಾ ಅವಧಿಗೂ ಸರ್ಕಾರಿ ಕಾಲೇಜುಗಳ ಬೋಧನಾ ಅವಧಿಗೂ ಬಹಳಷ್ಟು ವ್ಯತ್ಯಾಸವಿದೆ.

ರಾಷ್ಟ್ರೀಯ ಶಿಕ್ಷಣ ನೀತಿಯ 10.4ನೇ ಪರಿಚ್ಛೇದವು ಉನ್ನತ ಶಿಕ್ಷಣವನ್ನು 'ಹಂತಹಂತವಾಗಿ ಸ್ವಾಯತ್ತಗೊಳಿಸುವುದು' ಎಂದು ಹೇಳುತ್ತದೆ. ಅಂದರೆ ಪೂರ್ಣಪ್ರಮಾಣದ ಖಾಸಗೀಕರಣಕ್ಕೆ ರಾಷ್ಟ್ರೀಯ ಹೆದ್ದಾರಿಯನ್ನು ಸಿದ್ಧಪಡಿಸಲಾಗಿದೆ. ಇನ್ನು ಕರ್ನಾಟಕ ಸರ್ಕಾರವು 2021ರ ಆಗಸ್ಟ್ 7ರಂದು ಹೊರಡಿಸಿರುವ ಆದೇಶದ ಪ್ರಕಾರ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ವ್ಯಾಪ್ತಿಗೆ ಸರ್ಕಾರಿ ವಿಶ್ವವಿದ್ಯಾಲಯಗಳು ಮತ್ತು ಸಂಯೋಜಿತ ಕಾಲೇಜುಗಳು ಮಾತ್ರ ಬರುತ್ತವೆ. ಡೀಮ್ಡ್, ಖಾಸಗಿ ವಿಶ್ವವಿದ್ಯಾಲಯಗಳು ಈ ವ್ಯಾಪ್ತಿಗೆ ಬರುವುದಿಲ್ಲ. ಇದು ಆರ್ಥಿಕ ಖಾಸಗೀಕರಣದ ನೀತಿಯ ಶೈಕ್ಷಣಿಕ ವಿಸ್ತರಣೆ. ಇದರ ಫಲವಾಗಿ ಪಠ್ಯಕ್ರಮ ಮತ್ತು ಉದ್ಯೋಗ ನೇಮಕಾತಿಯಲ್ಲಿ ಸರ್ಕಾರದ ಪಾತ್ರ ಇರುವುದಿಲ್ಲ.

ಹೊಸ ಶಿಕ್ಷಣ ನೀತಿಯನ್ನು ಪದವಿ ಹಂತದಲ್ಲಿ ಜಾರಿಗೆ ತರಲು ಮುಂದಾದ ರಾಜ್ಯ ಸರ್ಕಾರವು ಕನ್ನಡವನ್ನೂ ಒಳಗೊಂಡಂತೆ ಭಾಷಾ ವಿಷಯಗಳನ್ನು ಕೇವಲ ಎರಡು ಸೆಮಿಸ್ಟರ್‌ಗೆ ಸೀಮಿತಗೊಳಿಸಿದ್ದರಲ್ಲೂ ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳ ಮಾದರಿಯಿದೆ. ಪ್ರಬಲ ಪ್ರತಿರೋಧ ಬಂದಾಗ ನಾಲ್ಕು ಸೆಮಿಸ್ಟರ್‌ಗಳಿಗೆ ವಿಸ್ತರಿಸಿದ್ದಲ್ಲದೆ ಕನ್ನಡವನ್ನು ಕಡ್ಡಾಯ ಮಾಡಿದ್ದು ಸ್ವಾಗತಾರ್ಹ. ಆದರೆ ಗೋಕಾಕ್ ವರದಿಗೆ ಅನುಗುಣವಾಗಿ ಪ್ರೌಢಶಾಲೆಯಲ್ಲಿ ಕನ್ನಡ ಭಾಷೆಯೊಂದನ್ನೇ ಕಡ್ಡಾಯ ಮಾಡಿ 1982ರ ಜೂನ್ 20ರಂದು ರಾಜ್ಯ ಸರ್ಕಾರವು ಹೊರಡಿಸಿದ್ದ ಆದೇಶವನ್ನು ರಾಜ್ಯ ಹೈಕೋರ್ಟು ರದ್ದುಗೊಳಿಸಿದ್ದನ್ನು ನಾನು ನೆನಪಿಸಿ, ಕಾನೂನು ತೊಡಕುಗಳನ್ನು ನಿವಾರಿಸಿಕೊಳ್ಳಬೇಕೆಂದು ಉನ್ನತ ಶಿಕ್ಷಣ ಸಚಿವರಿಗೆ ಆಗಲೇ ಪತ್ರ ಬರೆದಿದ್ದೆ.

ಸಂವಿಧಾನದ 14, 29(1) ಮತ್ತು 39(1)ನೇ ವಿಧಿ ಪ್ರಕಾರ ಅಂದಿನ ಆದೇಶವನ್ನು ರದ್ದು ಮಾಡಿದ್ದು, ಈ ವಿಧಿಗಳು ಸಮಾನತೆ ಮತ್ತು ಭಾಷಿಕ ಅಲ್ಪಸಂಖ್ಯಾತರ ಹಕ್ಕುಗಳಿಗೆ ಸಂಬಂಧಿಸಿವೆ. ನನ್ನ ತಿಳಿವಳಿಕೆಯಂತೆ, ಭಾಷಿಕ ಅಲ್ಪಸಂಖ್ಯಾತರ ಬದಲು ಬೇರೆ ಖಾಸಗಿ ಸಂಸ್ಥೆಯವರು ಕನ್ನಡ ಕಡ್ಡಾಯವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದಾರೆ. ಸರ್ಕಾರವು ಯಾವುದೇ ಭಾಷಾ ಬೋಧನೆಗೆ ಧಕ್ಕೆಯಾಗದಂತೆ ಕನ್ನಡವನ್ನು ಕಡ್ಡಾಯ ಮಾಡುವ ಕಾನೂನಾತ್ಮಕ ಮಾರ್ಗೋಪಾಯವನ್ನು ಚಿಂತಿಸಬೇಕು; ತಜ್ಞರ ಜೊತೆ ಚರ್ಚಿಸಬೇಕು.

ಖಾಸಗೀಕರಣದ ಪರವಾದ ನೀತಿಗಳು ದೃಷ್ಟಿಕೋನವನ್ನು ಹೇಗೆ ಬದಲಾಯಿಸುತ್ತವೆ ಎಂಬುದಕ್ಕೆ ರಾಜ್ಯ ಸರ್ಕಾರವು 1989 ಮತ್ತು 1994ರಲ್ಲಿ ಹೊರಡಿಸಿದ ಆದೇಶಗಳ ಬಗ್ಗೆ ಬಂದ ತೀರ್ಪುಗಳ ಸಾರವನ್ನು ಗಮನಿಸಬೇಕು. 1989ರ ಆದೇಶವನ್ನು ಪ್ರಶ್ನಿಸಿದ ಅರ್ಜಿಗಳನ್ನು ಇತ್ಯರ್ಥ ಮಾಡಿದ ಸುಪ್ರೀಂ ಕೋರ್ಟು 1993ರಲ್ಲಿ 'ಭಾಷಾ ನೀತಿಯನ್ನು ಹೇಗೆ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕೆಂದು ರಾಜ್ಯಕ್ಕೆ ತಿಳಿದಿದೆ. ಈ ವಿಚಾರದಲ್ಲಿ ನ್ಯಾಯಾಲಯವು ಹಸ್ತಕ್ಷೇಪ ಮಾಡುವುದು ಸರಿಯಲ್ಲ' ಎಂದು ಹೇಳಿತ್ತು. 1994ರ ಆದೇಶ ಪ್ರಶ್ನಿಸಿದ್ದ ಅರ್ಜಿಗಳ ಸಂಬಂಧವಾಗಿ ಸುಪ್ರೀಂ ಕೋರ್ಟು 1999ರಲ್ಲಿ 'ಈ ಪ್ರಕರಣವೇ ನಿರರ್ಥಕ' ಎಂದಿತ್ತು. ಆದರೆ 2014ರಲ್ಲಿ ಹಿಂದಿನ ತೀರ್ಪುಗಳನ್ನು ಮೀರಿ ಇದೇ ಸುಪ್ರೀಂ ಕೋರ್ಟು ರಾಜ್ಯ ಸರ್ಕಾರದ ಶಿಕ್ಷಣ ಮಾಧ್ಯಮ ಭಾಷಾ ನೀತಿಗೆ ವಿರುದ್ಧವಾಗಿ ತೀರ್ಪು ನೀಡಿ ಪೋಷಕರ ಆಯ್ಕೆಯೇ ಅಂತಿಮ ಎಂದಿತು. ಇದು ಖಾಸಗೀಕರಣದ ಫಲವಾಗಿ ಮೂಡಿದ ದೃಷ್ಟಿಕೋನವಲ್ಲವೇ?

ವಸ್ತುಸ್ಥಿತಿ ಹೀಗಿರುವಾಗ, ರಾಷ್ಟ್ರೀಯ ಶಿಕ್ಷಣ ನೀತಿಯ 4.11ನೇ ಪರಿಚ್ಛೇದದಲ್ಲಿ 5ನೇ ತರಗತಿಯವರೆಗೆ ಮಾತೃಭಾಷೆ ಅಥವಾ ರಾಜ್ಯಭಾಷೆ ಮಾಧ್ಯಮದಲ್ಲಿ ಬೋಧಿಸುವ, ಸಾಧ್ಯವಾದರೆ 8ನೇ ತರಗತಿಯವರೆಗೆ ವಿಸ್ತರಿಸುವ ಅಂಶವಿರುವುದು ಕೇವಲ ಆಶಯವಷ್ಟೇ ಆಗುತ್ತದೆ. ಸಂವಿಧಾನದ ತಿದ್ದುಪಡಿಯಿಲ್ಲದೆ ಜಾರಿಯಾಗುವುದಿಲ್ಲ.

ಶಿಕ್ಷಣ ಮಾಧ್ಯಮದ ವಿಷಯ ಹೀಗಿದ್ದರೆ, ಒಂದು ಭಾಷೆಯಾಗಿ ಕನ್ನಡವನ್ನು ಕಡ್ಡಾಯ ಮಾಡುವುದನ್ನು ಕೂಡ ಪ್ರಶ್ನಿಸಲಾಗುತ್ತಿದೆ. 2015ರಲ್ಲಿ ಪ್ರೌಢಶಾಲೆಯವರೆಗೆ ಕರ್ನಾಟಕ ಸರ್ಕಾರವು ಕೇಂದ್ರೀಯ ಶಾಲೆಗಳನ್ನೂ ಒಳಗೊಂಡಂತೆ ಹತ್ತನೇ ತರಗತಿಯವರೆಗೆ ಒಂದು ಭಾಷಾ ವಿಷಯವಾಗಿ ಕನ್ನಡವನ್ನು ಕಡ್ಡಾಯಗೊಳಿಸಿ ಕಾಯ್ದೆ ಮಾಡಿದ್ದನ್ನು ಕೇಂದ್ರೀಯ ಶಾಲೆಯ ವಿದ್ಯಾರ್ಥಿ-ಪೋಷಕರ ಮೂಲಕ ಹೈಕೋರ್ಟಿನಲ್ಲಿ ಪ್ರಶ್ನಿಸಲಾಗಿದೆ. ಇದೇ ಮಾದರಿಯ ಕಾಯ್ದೆಯನ್ನು 2006ರಲ್ಲಿ ತಮಿಳುನಾಡು, 2020ರಲ್ಲಿ ಮಹಾರಾಷ್ಟ್ರ ಸರ್ಕಾರಗಳು ರೂಪಿಸಿ ಜಾರಿಗೊಳಿಸಿರುವುದನ್ನು ಇಲ್ಲಿ ನೆನೆಯಬಹುದು.

ಇದು ಜಾಗತೀಕರಣದ ಕಾಲ. ಜಾಗತೀಕರಣವೆಂದರೆ ಆರ್ಥಿಕ ಖಾಸಗೀಕರಣ. ಆರ್ಥಿಕ ಖಾಸಗೀಕರಣವು ರಾಷ್ಟ್ರೀಯ ನೀತಿಯಾಗಿರುವುದರಿಂದ ಸ್ಥಳೀಯ ಅರ್ಹ ಕನ್ನಡಿಗರಿಗೆ ಉದ್ಯೋಗದಲ್ಲಿ ಆದ್ಯತೆ ನೀಡಬೇಕೆಂದು, ಬಹುರಾಷ್ಟ್ರೀಯ ಬೃಹತ್ ಖಾಸಗಿ ಉದ್ಯಮಗಳನ್ನು ಕಾನೂನಾತ್ಮಕವಾಗಿ ಕೇಳುವ ಸ್ಥಿತಿಯಲ್ಲಿ ರಾಜ್ಯ ಸರ್ಕಾರಗಳು ಇಲ್ಲ. ಷರತ್ತುಗಳನ್ನು ಹಾಕಿದರೆ ಅವನ್ನು ಲೆಕ್ಕಿಸದೆ ಬೇರೆ ರಾಜ್ಯಗಳಿಗೆ ಹೋಗುವ ಸೂಚನೆ ಕೊಟ್ಟ ಖಾಸಗಿ ಬೃಹತ್ ಉದ್ಯಮ ಸಂಸ್ಥೆಗಳೂ ಇವೆ. ಆದ್ದರಿಂದ ಸ್ಥಳೀಯ ಅರ್ಹ ಅಭ್ಯರ್ಥಿಗಳಿಗೆ ಬೃಹತ್ ಉದ್ಯಮ ಸಂಸ್ಥೆಗಳು ಆದ್ಯತೆಯ ಮೇಲೆ ಉದ್ಯೋಗಾವಕಾಶ ನೀಡಬೇಕು ಎಂಬುದು ರಾಷ್ಟ್ರೀಯ ನೀತಿಯಾಗಬೇಕು. ಜೊತೆಗೆ ಸಂವಿಧಾನಾತ್ಮಕ ಮೀಸಲಾತಿಗೂ ಅವಕಾಶ ಕಲ್ಪಿಸಬೇಕು.

ಸರ್ಕಾರಿ ಉದ್ಯಮ ಸಂಸ್ಥೆಗಳನ್ನು ಖಾಸಗಿಯವರಿಗೆ ಮಾರಾಟ ಮಾಡುತ್ತ ಪೂರ್ಣ ಖಾಸಗೀಕರಣಕ್ಕೆ ಪಣ ತೊಟ್ಟಂತಿರುವ ಕೇಂದ್ರ ಸರ್ಕಾರದಿಂದ ಇದನ್ನು ನಿರೀಕ್ಷಿಸಲು ಸಾಧ್ಯವೇ? 1991-92ರಲ್ಲಿ ಖಾಸಗೀಕರಣದ ಬೀಜ ಬಿತ್ತಿದ ಕಾಂಗ್ರೆಸ್ ಪಕ್ಷಕ್ಕೆ ಈ ಹಕ್ಕೊತ್ತಾಯವನ್ನು ಮಂಡಿಸುವ ತಾತ್ವಿಕ ನೆಲೆ ಇದೆಯೇ? ಒಟ್ಟಿನಲ್ಲಿ ಖಾಸಗೀಕರಣದ ವ್ಯಾಪ್ತಿ ವಿಸ್ತರಿಸುತ್ತಿರುವಾಗ ಕನ್ನಡಿಗರಿಗೆ ಉದ್ಯೋಗವೆಂಬುದು ಅಲ್ಪಪ್ರಮಾಣದ ಸರ್ಕಾರಿ ವಲಯಕ್ಕೆ ಸೀಮಿತವಾಗುತ್ತದೆ.

ವಸ್ತುಸ್ಥಿತಿ ಹೀಗಿರುವಾಗ, ಕನ್ನಡ ಮತ್ತು ಕನ್ನಡಿಗರಿಗೆ ಬದುಕಿನ ಭದ್ರತೆ ಒದಗಿಸಲು ಭಾಷಿಕ ನೆಲೆಯಲ್ಲಷ್ಟೇ ಚಿಂತಿಸದೆ, ಪೂರ್ಣಪ್ರಮಾಣದ ಆರ್ಥಿಕ ಖಾಸಗೀಕರಣಕ್ಕೆ ಪ್ರತಿರೋಧ ಒಡ್ಡುತ್ತ ಹೊಸ ಸಾಧ್ಯತೆಗಳ ಪ್ರಜಾಸತ್ತಾತ್ಮಕ ಹೋರಾಟ ಮತ್ತು ಪರಿಹಾರ ಮಾರ್ಗಗಳಿಗೆ ಮುಂದಾಗಬೇಕಾಗುತ್ತದೆ.

ಹೋರಾಟ ಮತ್ತು ಪರಿಹಾರ ಮಾರ್ಗಗಳನ್ನು ಕುರಿತು ಕ್ರಿಯಾಶೀಲರಾಗುವಾಗ ಈಗಾಗಲೇ ಅನುಷ್ಠಾನಗೊಂಡಿರುವ ಮುಕ್ತ ಆರ್ಥಿಕ ಪದ್ಧತಿಯ ಫಲವಾಗಿ ಪ್ರಜಾಸತ್ತಾತ್ಮಕ ಸರ್ಕಾರಗಳನ್ನೇ ನಿಯಂತ್ರಿಸುವಷ್ಟು ಶಕ್ತಿಯುತವಾಗಿರುವ ಖಾಸಗಿ ಬಂಡವಾಳಶಾಹಿಯ ಹಿಡಿತವನ್ನು ಪ್ರತಿರೋಧಿಸಬೇಕು. ಕನ್ನಡವಷ್ಟೇ ಅಲ್ಲ, ಎಲ್ಲ ರಾಜ್ಯಗಳ ಭಾಷೆಗಳೂ ಬಿಕ್ಕಟ್ಟನ್ನು ಎದುರಿಸುತ್ತಿರುವ ಕಟು ವಾಸ್ತವದ ಹಿನ್ನೆಲೆಯಲ್ಲಿ ರಾಜ್ಯ ಭಾಷೆಗಳನ್ನೂ ರಾಷ್ಟ್ರೀಯ ಭಾಷೆಗಳೆಂದು ಪರಿಗಣಿಸುವಂತೆ ಒತ್ತಾಯಿಸಬೇಕು. ಈ ನೆಲೆಯ ರಾಷ್ಟ್ರೀಯ ಭಾಷಾ ನೀತಿ ಮತ್ತು ಅದರ ಆಧಾರಿತ ಉದ್ಯೋಗ ನೀತಿ ರೂಪುಗೊಳ್ಳಬೇಕು.

ಚುರುಮುರಿ

'ಗುಂಡು'ಗೋವಿ ಗೆಳೆಯ

● ಎಸ್.ಬಿ.ರಂಗನಾಥ್

ಎರಡನೇ ಡೋಸ್ ಕೋವಿಡ್ ಲಸಿಕೆ ತೆಗೆದುಕೊಳ್ಳಲು ಹಿಂದೇಟು ಹಾಕುತ್ತಿದ್ದ 'ಗುಂಡು'ಗೋವಿ ಗೆಳೆಯನನ್ನು ಕೇಳಿದೆ– 'ಮೂರನೇ ಅಲೆ ಭೀತಿ ಇದ್ದೇ ಇದೆ ಕಣಯ್ಯಾ. ಅದಕ್ಕೇ ನಾನು ಬೂಸ್ಟರ್ ಡೋಸ್ ಅನ್ನೂ ತಗೊಂಡ್ಬಿಟ್ಟಿದೀನಿ. ನೀನಿನ್ನೂ ಎರಡನೇದ್ದೇ ತಗೊಂಡಿಲ್ಲ ಯಾಕೋ?'

'ನಮ್ಮ ದೇಶ ನೂರು ಕೋಟಿ ಲಸಿಕೆ ದಾಖಲೆ ಮಾಡಿದೆಯಲ್ಲ ಸಾಕು ಬಿಡಯ್ಯಾ' ಎಂದ.

'ಈ ಉಡಾಫೆ ಮಾತೆಲ್ಲ ಬೇಡ. ಎರಡು ಡೋಸ್ ತಗೊಂಡೋರನ್ನೂ ಈ ಮಾರಿ ಬಲಿ ತಗೊಂಡಿರೋ ನಿದರ್ಶನ ಇದೆ, ಕೂಡ್ಲೇ ತಗೊಳ್ಳೋ'.

ತಲೆ ಕೆರೆಯುತ್ತಾ ನಿಂತ ಅವನನ್ನು ನೋಡುತ್ತಿದ್ದಂತೆ ಅವನ ಸಮಸ್ಯೆ ನಂಗೆ ಅರ್ಥವಾಯಿತು. 'ವ್ಯಾಕ್ಸಿನ್ ತಗೊಳ್ಳೋದ್ರಿಂದ ನಿನ್ನ ಗುಂಡು ಪಾರ್ಟಿಗೇನೂ ಬಾಧಕ ಇಲ್ಲಾಂತ ಅವತ್ತೇ ಹೇಳಿದ್ದೆನಲ್ಲೋ'.

'ಅದಕ್ಕಲ್ಲ... ಆಸ್ಟ್ರಿಯಾದಲ್ಲಿ ಶೇ 35ರಷ್ಟು ಜನ ಇನ್ನೂ ತಗೊಂಡೇ ಇಲ್ವಂತೆ!'

'ಅದ್ರಿಂದ ಆ ಸರ್ಕಾರ ಏನ್ಮಾಡಿದೆ ಗೊತ್ತೇನೋ ಬುದ್ದೂ? ಅದರಹಾಗೇ ನಮ್ಮ ಸರ್ಕಾರನೂ ಮಾಡಿದ್ರೆ ಏನ್ಮಾಡ್ತೀಯೋ?'

'ಅಂಥದ್ದು ಏನ್ಮಾಡಿದೆಯಪ್ಪಾ?'

'ಲಸಿಕೆ ಹಾಕಿಸಿಕೊಳ್ಳದವರು ಹೊರಗೆ ಬರುವಂತಿಲ್ಲ. ಸಾರ್ವಜನಿಕವಾಗಿ ಕಾಣಿಸಿಕೊಂಡ್ರೆ ಲಕ್ಷ ರೂಪಾಯಿಗಿಂತ ಹೆಚ್ಚು ದಂಡವಂತೆ. ಅದಕ್ಕಿಂತ ಮಿಗಿಲಾಗಿ...'

'ಅದೇನು ಪೂರ್ತಿ ಹೇಳಯ್ಯಾ!'

'ಅಂಥೋರಿಗೆ ಬಾರು, ಪಬ್‌ಗಳ ಪ್ರವೇಶಾನೂ ನಿಷಿದ್ಧ!'

'ಹಾಗಾದ್ರೆ ನಡೆಯಪ್ಪಾ ಹೋಗೋಣ, ಈಗ್ಲೇ ವ್ಯಾಕ್ಸಿನ್ ಹಾಕಿಸು'.

'ಹಂಗ್ಯಾಕೆ ಬೆಚ್ಚಿಬೀಳ್ತೀಯೋ? ಹಾಗೆ ಮಾಡಿರೋದು ಯುರೋಪಿನ ಆಸ್ಟ್ರಿಯಾ ಸರ್ಕಾರ, ನಮ್ಮದಲ್ಲ'.

'ಯಾರಿಗ್ಗೊತ್ತಯ್ಯಾ, ದಿನಕ್ಕೊಂದು ಹೊಸ ಯೋಜನೆ ಘೋಷಿಸ್ತಾ ಫುಲ್ ಜೋಶ್‌ನಲ್ಲಿದ್ದ ಮೋದೀಜಿ ಈಗ ಕೃಷಿ ಕಾಯ್ದೆಗಳನ್ನ ಅನಿವಾರ್ಯವಾಗಿ ವಾಪಸ್ ತಗೊಂಡ ಸಿಟ್ಟಲ್ಲಿದಾರೆ. ಅವ್ರಿಗೆ ಈ ಆಸ್ಟ್ರಿಯಾ ರೂಲ್ಸ್ ಗೊತ್ತಾದ್ರೆ ನಮ್ಗೆ ಕಷ್ಟ'.

ಗೆಳೆಯನ ಮುಂದಾಲೋಚನೆಗೆ ನಾನು ಮೂಕವಿಸ್ಮಿತನಾದೆ!

ಸಂಗತ

ಕಾಲದ ಸ್ಮರಣೆಯಲ್ಲಿ ಘನಮೌಲ್ಯದ ಅಭಿವ್ಯಕ್ತಿ

ವಿಶ್ವಸೃಷ್ಟಿಯ ಕೌತುಕದ ವಿದ್ಯಮಾನಗಳು ನಮ್ಮಲ್ಲಿ ಜೀವಚೈತನ್ಯವನ್ನು ಪೊರೆಯಬಲ್ಲವು

● ಸತೀಶ್ ಜಿ.ಕೆ. ತೀರ್ಥಹಳ್ಳಿ

ಬದುಕು ಹರಿವ ನದಿ. ನಿಂತರೆ ನೀರೂ ಕೊಳೆತು ನಾರುತ್ತದೆ! ಚಲನಶೀಲತೆಯೇ ಪರಮಸತ್ಯ ಮತ್ತು ಅಸ್ತಿತ್ವದ ಅಗತ್ಯ. 'ಓಡು, ಇಲ್ಲದಿದ್ದರೆ ನಡೆ, ಅದೂ ಆಗದಿದ್ದಲ್ಲಿ ತೆವಳು. ಆದರೆ ನಿಂತಲ್ಲೇ ನಿಂತಿರಬೇಡ' ಎಂದಿದ್ದಾರೆ ದಾರ್ಶನಿಕರೊಬ್ಬರು. ಜಗದಸತ್ಯವೆನಿಸುವ ಶರಣವಾಣಿ 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಅಂದಿದೆ. 'ಎಲ್ಲಿಯೂ ನಿಲ್ಲದಿರು...' ಎಂದ ಕುವೆಂಪು, 'ಸಂಚಾರಿಯಾಗು...' ಎಂದ ಲಂಕೇಶರ ಮಾತುಗಳು ಧ್ವನಿಸುವುದು ಕೂಡ 'ನಡೆದರಷ್ಟೇ ಬದುಕು' ಎಂಬ ಸತ್ಯವನ್ನು!

ಇಲ್ಲಿ ಯಾವುದೂ ಸ್ಥಿರವಲ್ಲ. ನಿಶ್ಚಲವಾದರೆ ಅವಕ್ಕೆಲ್ಲಾ ಉಳಿವಿಲ್ಲ. ಬಣ್ಣ, ರೂಪ, ಆಕಾರ, ವಯಸ್ಸು, ಹಣ, ಆಸ್ತಿ, ಅಹಂಕಾರ, ಸಾಮ್ರಾಜ್ಯ, ದೇಶ, ಕೋಶ, ಭಾಷೆ ಎಲ್ಲವೂ ಒಂದು ದಿನ ಅಳಿದು ಹೋಗುತ್ತವೆ. ಆದರೆ ಬಗೆಬಗೆಯಾಗಿ ದಾಖಲಿಸಿದ ಸಾಧನೆಗಳು ಮಾತ್ರವೇ ಅಳಿಯುವ ಜೀವವನ್ನು ಕಾಲದ ಸ್ಮರಣೆಯಲ್ಲಿ ಉಳಿಸುತ್ತವೆ. ಪುನೀತ್ ರಾಜ್‌ಕುಮಾರ್ ಅವರ ಅಗಲಿಕೆಯಲ್ಲಿಯೂ ಇಂತಹ ಘನಮೌಲ್ಯದ ಅಭಿವ್ಯಕ್ತಿಯಾಗಿದೆ.

ಕಾಲಘಟ್ಟದ ಧಾವಂತದಲ್ಲಿ, ನಿತ್ಯದ ಗಡಿಬಿಡಿ, ದಣಿವು, ಮಾನಸಿಕ ಒತ್ತಡ, ತನ್ನನ್ನೂ ತನ್ನವರನ್ನೂ ಆಲಿಸಲು- ಧ್ಯಾನಿಸಲು ಸಮಯಾಭಾವದ ಸ್ಥಿತಿ. 'ಟೈಮೇ ಇಲ್ಲ...' ಎಂಬ ಮಾಮೂಲಿ ರೋದನೆಗಳಂತಹ ಬದುಕಿನ ವಿಪರ್ಯಾಸಗಳನ್ನೆಲ್ಲಾ ಕಟ್ಟಿಕೊಟ್ಟಿದ್ದ ನಾಟಕವೊಂದನ್ನು ಕಾಲೇಜು ದಿನಗಳಲ್ಲಿ ಅಭಿನಯಿಸಿದ ನೆನಪು, ನಾಟಕದ ಹೆಸರು 'ಓಡುವವರು...!' ಹೌದು, ಅದೀಗ ನಮ್ಮ ಜರೂರತ್ತು. ಕಾರಣ, ನಮ್ಮದು ವಿಪರೀತ ಭರದಲ್ಲಿ ಓಡುವ ಜಗತ್ತು. ನಾವೂ ಅದರೊಟ್ಟಿಗೆ ಓಡದಿದ್ದಲ್ಲಿ ಇದ್ದಲ್ಲೇ ಉಳಿಯುತ್ತೇವೆ ಅಥವಾ ಅಳಿಯುತ್ತೇವೆಂಬ ಭಯ. ಒಟ್ಟಾರೆ, ಇವತ್ತಿನ ಜಗದಲ್ಲಿ ವೇಗ ಮತ್ತು ನಿಖರತೆಗಳು ಗೆಲ್ಲುವ ಅಸ್ತ್ರಗಳು. ಹಾಗಾಗಿ ನಾವೆಲ್ಲಾ ಅವಸರದ ಶಿಶುಗಳು!

ಖಗೋಳ ವಿಜ್ಞಾನದ ಆರಂಭದ ದಿನಗಳಲ್ಲಿ ಪ್ಲೇಟೊ, ಟಾಲೆಮಿಯವರು ಭೂಕೇಂದ್ರಿತ ಸಿದ್ಧಾಂತವನ್ನು ಪ್ರತಿಪಾದಿಸಿ, ಭೂಮಿಯು ಸ್ಥಿರಕಾಯವೆಂಬ ಕಲ್ಪನೆಯನ್ನು ಹುಟ್ಟುಹಾಕಿದ್ದರು. ಕೋಪರ್ನಿಕಸ್‌ನ ನಂತರದಲ್ಲಿ ಸೌರಕೇಂದ್ರಿತ ಸಿದ್ಧಾಂತವು ಪ್ರತಿಪಾದಿಸಲ್ಪಟ್ಟಿತು. ವಾಸ್ತವವಾಗಿ ಅಸ್ತಿತ್ವದಲ್ಲಿರುವ ಪ್ರತಿಯೊಂದು ಆಕಾಶಕಾಯವೂ ಮತ್ತೊಂದು ಭಾರಯುತ ಕಾಯದ ಸುತ್ತ ಪರಿಭ್ರಮಣೆಯನ್ನು ಹೊಂದಿರುತ್ತದೆ, ಹೊಂದಿರಲೇಬೇಕು.

ನಮಗೆಲ್ಲಾ ಚಿಕ್ಕಂದಿನಿಂದಲೂ ವೇಗದ ಬಗ್ಗೆ ಅತೀವ ಆಸಕ್ತಿ ಮತ್ತು ಕುತೂಹಲವಿತ್ತು. ವೇಗವಾಗಿ ವಾಹನ ಓಡಿಸುವವನೇ ಉತ್ತಮ ಚಾಲಕ ಎಂಬ ತಪ್ಪುಗ್ರಹಿಕೆ ಆಗ. ಚುರುಕಿನ ಗೆಳೆಯನಿಗೆ 'ಅವನದು ನೂರು ಮೈಲಿ ವೇಗ' ಅನ್ನೋ ಹಣೆಪಟ್ಟಿ ಅಂಟಿಸಿದ್ದಿದೆ. ಅಂದಿನ ರಾಷ್ಟ್ರಪತಿ ಡಾ. ಅಬ್ದುಲ್ ಕಲಾಂ ಅವರು ಸುಖೋಯ್-30 ಯುದ್ಧ ವಿಮಾನದಲ್ಲಿ ಹಾರಾಟ ನಡೆಸಿದ್ದು ಜಗತ್ತನ್ನು ಬೆರಗುಗೊಳಿಸಿತ್ತು. ಇದು ಬುಲೆಟ್‌ಟ್ರೈನ್‌ಗಳ ಜಮಾನ. ಮನಸು ವೇಗ ಬಯಸುತ್ತದೆ. 'ನಿಧಾನವೇ ಪ್ರಧಾನ' ಎಂಬ ಹಿರಿಯರ ಮಾತಿಗೀಗ ಬೆಲೆಯಿಲ್ಲ.

ಮೊದಮೊದಲು ಬೋಯಿಂಗ್-747 ವಿಮಾನದ ಗಂಟೆಗೆ 880 ಕಿ.ಮೀ. ವೇಗ ನಮ್ಮಲ್ಲೊಂದು ಅಚ್ಚರಿ ಹುಟ್ಟಿಸಿತ್ತು. ಸೂಪರ್ ಸಾನಿಕ್‌ಗಳ 2,160 ಕಿ.ಮೀ. (ಗಂಟೆಗೆ) ವೇಗ ಸಾಮರ್ಥ್ಯದ ಕುರಿತು ಹಲವಾರು ರೋಚಕ ಕಥೆಗಳಿದ್ದವು. ಭೂಗುರುತ್ವವನ್ನು ಮೀರಿ ಮೇಲೇರಲು ರಾಕೆಟ್‌ಗಳು ಹೊಂದಿರಬೇಕಾದ ವಿಮೋಚನಾ ವೇಗದ ಬಗ್ಗೆ ಎಳೆಯರಿದ್ದಾಗ ನಮಗೆಲ್ಲಾ ನಂಬಿಕೆಯೇ ಹುಟ್ಟುತ್ತಿರಲಿಲ್ಲ. ಒಂದು ಸೆಕೆಂಡು ಟಕ್‌ಟಕ್ ಅನ್ನುವಷ್ಟರಲ್ಲಿ ರಾಕೆಟ್ 11.2 ಕಿ.ಮೀ. ದೂರಕ್ಕೆ ಚಿಮ್ಮುವುದೆಲ್ಲಾ ನಮ್ಮ ಊಹೆಗೆ ನಿಲುಕದ ಸಂಗತಿಯಾಗಿತ್ತು. ಆದರೆ ನಮಗರಿವಿಲ್ಲದಂತೆ ನಿಂತ ನೆಲವೇ ಭೂಕಕ್ಷೆಯಲ್ಲಿ ಕಣ್ಮಿಟುಕಿಸುವುದರೊಳಗೆ ಮೈಲುಗಟ್ಟಲೆ ಕ್ರಮಿಸಿರುತ್ತದೆ! ನಮ್ಮನ್ನೊಳಗೊಂಡ ಬ್ರಹ್ಮಾಂಡವೂ ಮಿಂಚಿನ ವೇಗದಲ್ಲಿ ಓಡುತ್ತಿದೆ.

ಭೂಮಿ, ಸೂರ್ಯ, ಚಂದ್ರರು ಸೇರಿದಂತೆ ಇತರ ಪ್ರತಿಯೊಂದು ಆಕಾಶಕಾಯವೂ ಮತ್ತೊಂದು ತೂಕದ ಕಾಯದ ಸುತ್ತ ನಿರ್ದಿಷ್ಟ ಕಕ್ಷಾವೇಗದಲ್ಲಿ ಪರಿಭ್ರಮಿಸುತ್ತದೆ. ಅಲ್ಲಿ ಗುರುತ್ವಬಲ ಮತ್ತು ರಾಶಿಗಳು ಕಾಯಗಳ ವೇಗ, ಕಕ್ಷೆ, ಪರಿಭ್ರಮಣಾವಧಿಗಳನ್ನು ನಿರ್ಧರಿಸುತ್ತವೆ. ನಕ್ಷತ್ರಪುಂಜಗಳ ಭ್ರಮಣೆಯು ತಮ್ಮ ಕೇಂದ್ರದ ಸುತ್ತಲಿರುತ್ತದೆ.

ನಮ್ಮ ಭೂಮಿ, ಸೌರಮಂಡಲ, ಗೆಲಾಕ್ಸಿ ಹೀಗೆ ನಮ್ಮನ್ನು ಹೊತ್ತ ವಿಶ್ವವೇ ಮಿಂಚಿನ ವೇಗದಲ್ಲಿ ಓಡುತ್ತಿದ್ದರೂ ಅವೆಂದಿಗೂ ಹಾದಿ ತಪ್ಪದೆ ಉರುಳಬೇಕಾದಲ್ಲೇ ಉರುಳುತ್ತವೆ! ಗಲಿಬಿಲಿಗೊಳ್ಳದ ಅಂಥಾ ನಿಖರವೂ ನಿರಂತರವೂ ಆದ ಚಲನೆಗೆ ಅಗತ್ಯ ಸಾಮರ್ಥ್ಯ ಎಲ್ಲಿಂದ ಬಂತು? ಒಂದೊಮ್ಮೆ ಅವು ಸುತ್ತಿಬರುವ ಪಥ ಮತ್ತು ಅವಧಿಯಲ್ಲಿ ಸಣ್ಣಪುಟ್ಟ ದೋಷಗಳಾದರೂ ಕಾಲಮಾನಗಳೇ ಏರುಪೇರಾಗಬಹುದಿತ್ತು. ಆದರೆ ಹಾಗಾಗದು.

ಹೌದು, ನಮ್ಮದು ವೇಗದ ಜಮಾನ. ನಿತ್ಯದ ಜಂಜಡ, ಕಾರ್ಯಭಾರಗಳ ನಡುವೆ ಬಂಧುತ್ವವನ್ನು ಕಾಯ್ದುಕೊಂಡು ಮುಂದುವರಿಯಬೇಕಾದ ಸವಾಲಿದೆ. ವಿಶ್ವಸೃಷ್ಟಿಯ ಅಂತಹ ಕೌತುಕದ ವಿದ್ಯಮಾನಗಳು ನಮ್ಮ ವರ್ತಮಾನಕ್ಕೊಂದು ಗುರಿ, ಸ್ಪಷ್ಟತೆಯನ್ನು ಕರುಣಿಸಲಿ, ಬದುಕಿನ ಅಗಾಧ ಸಾಧ್ಯತೆಗಳನ್ನು ಎದುರಿಗೆ ತೆರೆದಿಟ್ಟು ಜೀವಚೈತನ್ಯವನ್ನು ನಮ್ಮಲ್ಲಿ ಸದಾಕಾಲ ಪೊರೆಯಲಿ ಎಂಬುದು ಹಾರೈಕೆ.

ವಾಚಕರ ವಾಣಿ

ಮಹಾನ್ ಸಾಧಕನಿಗೆ ಸಿಗದ ಪ್ರಚಾರ

ಕೊಡಗಿನ ಏಳುನೂರು ಎಕರೆ ಖಾಸಗಿ ಕಾಡಿನ ಮಾಲೀಕ ಡಾ. ಅನಿಲ್ ಮಲ್ಹೋತ್ರ ಎಂಬ ಮಹಾನ್ ವ್ಯಕ್ತಿಯೊಬ್ಬರ ಸಾಧನೆಗೆ ಮಾಧ್ಯಮಗಳಲ್ಲಿ ಸೂಕ್ತ ಮನ್ನಣೆ ಸಿಗಲಿಲ್ಲವೇಕೆ?

ತಾಪಮಾನ ಹೆಚ್ಚಳ ಎಂಬ ವ್ಯಾಪಕ ಕೂಗಿನ ಸಂದರ್ಭದಲ್ಲಿ ಮುಂದಿನ ಹತ್ತು ತಲೆಮಾರು ಅನುಭವಿಸುವಂತಹ ಪರಿಸರದ ರೂವಾರಿಯೊಬ್ಬರು ನಮ್ಮ ರಾಜ್ಯದಲ್ಲಿದ್ದರು ಎಂಬ ವಿಚಾರವನ್ನು ಹೆಚ್ಚಿನ ಜನಸಾಮಾನ್ಯರು ಇವರ ಮರಣದಿಂದಲೇ ಅರಿಯಬೇಕಾದ ಸಂವಹನದ ಕೊರತೆಗೆ ಯಾರನ್ನು ದೂರಬೇಕು? ಕೇಂದ್ರ ಸರ್ಕಾರವು 'ಪದ್ಮ' ಪ್ರಶಸ್ತಿಗಳಿಗೆ ಯೋಗ್ಯರನ್ನು ಆಯ್ಕೆ ಮಾಡುವ ಹಂತದಲ್ಲೂ ಏಷ್ಯಾದಲ್ಲೇ ಪ್ರಖ್ಯಾತರಾದ ಇವರ ಹೆಸರನ್ನು ಕನ್ನಡಿಗರಾರೂ ಸೂಚಿಸಲಿಲ್ಲವೇ? ಸೂತಕದ ಸಂದರ್ಭದಲ್ಲಾದರೂ ಅವರ ಸಾಧನೆಯು ಯುಕ್ತ ರೀತಿಯಲ್ಲಿ ಸ್ಮರಣೆಗೆ ಒಳಗಾಗಿಲ್ಲವೇಕೆ- ಹೀಗೆ ಯೋಚಿಸಿದಾಗಲೆಲ್ಲಾ ಜಾತಿ, ರಾಜಕೀಯ ಹಿನ್ನೆಲೆ, ಅಂಧಾಭಿಮಾನದ ವರ್ತುಲದಲ್ಲೇ ನಾವಿನ್ನೂ ಗಿರಕಿ ಹೊಡೆಯುತ್ತಿದ್ದೇವೆಯೇ ಎಂದೆನಿಸುತ್ತಿದೆ!

ಗೋಪು ಗೋಖಲೆ, ಶಿಶಿಲ

ಎಸಿಬಿ ದಾಳಿ: ಅಖಿಲ ಭಾರತ ನಾಟಕ ಸಮ್ಮೇಳನ!

ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಆರೋಪವಿದ್ದ ಅಧಿಕಾರಿಗಳ ಮೇಲೆ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ನಡೆಸಿದ ದಾಳಿಯಿಂದ ಕೋಟಿಗಟ್ಟಲೆ ಹಣ, ಆಸ್ತಿ ದಾಖಲೆ ಪತ್ತೆಯಾಗಿರುವುದಾಗಿ ವರದಿಯಾಗಿದೆ. ಇದನ್ನು ನೋಡಿದರೆ ಅಖಿಲ ಭಾರತ ನಾಟಕ ಸಮ್ಮೇಳನದಂತೆ ಭಾಸವಾಗುತ್ತದೆ. ಯಾಕೆಂದರೆ ಕಳೆದ 40 ವರ್ಷಗಳಿಂದಲೂ ಈ ಬಗೆಯ ದಾಳಿಗಳನ್ನು ನೋಡಿ ಸಾಕಾಗಿದೆ. ದಾಳಿಯಾದ ಯಾವ ಅಧಿಕಾರಿಯನ್ನೂ ವಜಾ ಮಾಡಿಲ್ಲ, ಜೈಲಿಗೆ ಹಾಕಿಲ್ಲ, ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿಲ್ಲ. ಇಂತಹ ಅಧಿಕಾರಿಗಳು ಲಂಚ ನೀಡಿ ಪುನಃ ಕೆಲಸಕ್ಕೆ ಹಾಜರಾಗುವುದು ನಡೆದಿದೆ. ಈ ಹಿಂದೆ ಹೀಗೆ ಎಸಿಬಿ, ಲೋಕಾಯುಕ್ತ ದಾಳಿಗೊಳಗಾದ ಅಧಿಕಾರಿಗಳ ಪಟ್ಟಿ, ಅವರಿಗಾದ ಶಿಕ್ಷೆಯನ್ನು ಸರ್ಕಾರ ಮೊದಲು ಪ್ರಕಟಿಸಲಿ.

ಡಾ. ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ಮಾಲಿನ್ಯ ನಿಯಂತ್ರಣದ ಮಹತ್ವದ ಕ್ರಮ

ಹಾವೇರಿ ಜಿಲ್ಲೆ, ರಟ್ಟೀಹಳ್ಳಿ ತಾಲ್ಲೂಕಿನ ಕಿರಿಗೇರಿ ಎಂಬ ಗ್ರಾಮದಲ್ಲಿ ಕಂಪನಿಯೊಂದು ಸಕ್ಕರೆ ಕಾರ್ಖಾನೆ ನಿರ್ಮಾಣಕ್ಕಾಗಿ ಕಲ್ಲು ಗಣಿಗಾರಿಕೆಗೆ ಪರವಾನಗಿ ಪಡೆದು ಕಲ್ಲುಪುಡಿ ಮಾಡಿ ವ್ಯಾಪಕವಾಗಿ ಮಾರಾಟ ಮಾಡುತ್ತಿದೆ ಎಂಬ ದೂರುಗಳಿವೆ. ಇದರಿಂದ ವಾಯು ಮತ್ತು ದೂಳು ಮಾಲಿನ್ಯ ಉಂಟಾಗಿದ್ದು, ಇದರ ವಿರುದ್ಧ ಗ್ರಾಮಸ್ಥರು ಹೋರಾಟ ನಡೆಸುತ್ತಿದ್ದಾರೆ. ಇದಕ್ಕೆ ಸಮಾಜ ಪರಿವರ್ತನ ಸಮುದಾಯವು ಬೆಂಬಲ ನೀಡಿದೆ. ಈ ಹೋರಾಟಕ್ಕೆ ಮಣಿದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕಲ್ಲುಪುಡಿ ಮಾಡುವ ಘಟಕವನ್ನು ನಿಲ್ಲಿಸುವಂತೆ ಕಂಪನಿಗೆ, ಘಟಕವನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಜಿಲ್ಲಾಧಿಕಾರಿಗೆ ಹಾಗೂ ಘಟಕಕ್ಕೆ ವಿದ್ಯುತ್ ಸರಬರಾಜನ್ನು ನಿಲ್ಲಿಸುವಂತೆ ಸಂಬಂಧಿಸಿದ ವಿದ್ಯುತ್ ಕಂಪನಿಗೆ ನಿರ್ದೇಶನ ನೀಡಿದೆ. ಜನಾಂದೋಲನಕ್ಕೆ ಹಾಗೂ ಜನಾಗ್ರಹಕ್ಕೆ ದೊರೆತ ಜಯ ಇದಾಗಿದೆ. ರಾಜಕೀಯ ಒತ್ತಡಕ್ಕೆ ಮಣಿಯದೆ ಮಂಡಳಿಯು ತೆಗೆದುಕೊಂಡ ಕ್ರಮವು ಸ್ವಾಗತಾರ್ಹವಾಗಿದೆ. ಪರಿಸರ ಸಂರಕ್ಷಣೆ ಬಗ್ಗೆ ಗ್ರಾಮಸ್ಥರು ನಡೆಸಿದ ಹೋರಾಟವು ಅನುಕರಣೀಯವಾದುದಾಗಿದೆ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಸಮಷ್ಟಿ ಪ್ರಜ್ಞೆಗೆ ಸಕಾಲಿಕ ಎಚ್ಚರಿಕೆ

'ಸಂಘಟಿತ ಹೋರಾಟದ ಎರಡು ಮಾದರಿ' ಎಂಬ ಸಿ.ಎನ್.ರಾಮಚಂದ್ರನ್ ಅವರ ಲೇಖನ (ಸಂಗತ, ನ. 24) ತಿಳಿವಳಿಕೆ ಮತ್ತು ಎಚ್ಚರಿಕೆ ಎರಡೂ ದೃಷ್ಟಿಯಿಂದ ಸಕಾಲಿಕವಾಗಿದೆ. 160 ವರ್ಷಗಳ ಹಿಂದೆ ನೀಲಿ (ಇಂಡಿಗೊ) ಬೆಳೆ ವಿರುದ್ಧ ಬಂಗಾಳದಲ್ಲಿ ನಡೆದ ಹೋರಾಟಕ್ಕೂ ಈಗಿನ ರೈತರ ಹೋರಾಟಕ್ಕೂ ಸಾಮ್ಯತೆ ಇದೆ ಎನ್ನುವುದು ನೂರಕ್ಕೆ ನೂರರಷ್ಟು ಸತ್ಯ. ಆಗ ಭಾರತೀಯ, ಬ್ರಿಟಿಷ್ ಮತ್ತು ಐರೋಪ್ಯ ಜಮೀನ್ದಾರರಿಂದ ಜಮೀನನ್ನು ಗೇಣಿಗೆ ಪಡೆದಿದ್ದ ರೈತರು ನೀಲಿ ಬೆಳೆಯನ್ನೇ ಬೆಳೆಯಬೇಕೆಂಬ ಕಡ್ಡಾಯ ಬಂಗಾಳದಲ್ಲಿ ಮಾತ್ರವಲ್ಲ ಬಿಹಾರದಲ್ಲೂ ಜಾರಿಯಲ್ಲಿತ್ತು. 'ಟಿಂಕಾಥಿಯಾ' ಎನ್ನುವ ಕಾನೂನು ಕಟ್ಟಳೆಯ ಮೂಲಕ ಅಲ್ಲಿ ಲಾಭದಾಯಕವಲ್ಲದಿದ್ದರೂ ರೈತರು ತಮ್ಮ ಜಮೀನುಗಳಲ್ಲಿ ಇಂಡಿಗೊ ಬೆಳೆಯನ್ನೇ ಬೆಳೆಯತಕ್ಕದ್ದೆಂದು ಕಡ್ಡಾಯಗೊಳಿಸಲಾಗಿತ್ತು.

1917ರ ಸುಮಾರಿನಲ್ಲಿ ಉತ್ತರ ಬಿಹಾರದ ಚಂಪಾರಣ್ಯ ವಿಭಾಗದ ರೈತರು ಈ ಕಾಯ್ದೆ ವಿರುದ್ಧ ಮಹಾತ್ಮ ಗಾಂಧಿ ನೇತೃತ್ವದಲ್ಲಿ ಸತ್ಯಾಗ್ರಹ ಆರಂಭಿಸಿದರು. ಗಾಂಧಿಯವರು ಬಿಹಾರದಲ್ಲಿ 'ಅನಪೇಕ್ಷಿತ ವ್ಯಕ್ತಿ' ಎಂದು ಅವರನ್ನು ಉಚ್ಚಾಟಿಸುವಂತೆ ಜಮೀನ್ದಾರರು ಸರ್ಕಾರದ ಮೇಲೆ ಒತ್ತಡ ತಂದರು. ಚಂಪಾರಣ್ಯ ಬಿಟ್ಟು ಹೋಗುವಂತೆ 1917ರ ಏಪ್ರಿಲ್ 16ರಂದು ಗಾಂಧಿಯವರಿಗೆ ನೋಟಿಸ್ ಜಾರಿ ಮಾಡಲಾಯಿತು. ಈ ಆಜ್ಞೆಯನ್ನು ಪಾಲಿಸುವುದಿಲ್ಲವೆಂದು ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಗಾಂಧಿ ಪ್ರತ್ಯುತ್ತರ ಕೊಟ್ಟರು. ಚಂಪಾರಣ್ಯದ ರೈತ ಚಳವಳಿ ಜೊತೆಗೆ ಗಾಂಧಿಯವರ ಸ್ವಾತಂತ್ರ್ಯ ಸತ್ಯಾಗ್ರಹ ರಾಷ್ಟ್ರವ್ಯಾಪಿ ಹಬ್ಬುತ್ತಿತ್ತು. ಇದನ್ನರಿತ ಬ್ರಿಟಿಷ್ ಸರ್ಕಾರಕ್ಕೆ ಗಾಂಧಿಯವರ ಉಚ್ಚಾಟನೆ ಹೆಚ್ಚು ಅಪಾಯಕಾರಿಯಾಗಬಹುದೆಂದು ಮನವರಿಕೆಯಾಗಿ ಉಚ್ಚಾಟನೆಯ ಆಜ್ಞೆಯನ್ನು ಹಿಂತೆಗೆದುಕೊಂಡಿತು. ಅದೇ ಕಾಲಕ್ಕೆ ವಾಣಿಜ್ಯ ಬೆಳೆಯಾಗಿ ವಿಶ್ವ ಮಾರುಕಟ್ಟೆಯಲ್ಲಿ ಇಂಡಿಗೊ ಕಿಮ್ಮತ್ತೂ ಕುಸಿಯುತ್ತಿತ್ತು. ಇದೆಲ್ಲವನ್ನೂ ಮನಗಂಡ ಸರ್ಕಾರ ಕೊನೆಗೆ ಸತ್ಯಾಗ್ರಹಕ್ಕೆ ಮಣಿದು 'ಟಿಂಕಾಥಿಯಾ' ಕಾನೂನನ್ನು ವಾಪಸು ತೆಗೆದುಕೊಂಡಿತು (ಈ ಬಗ್ಗೆ ಹೆಚ್ಚಿನ ವಿವರಗಳನ್ನು ನಾನು ಅನುವಾದಿಸಿರುವ 'ಮೋಹನದಾಸ್: ಒಂದು ಸತ್ಯ ಕಥೆ' ಗ್ರಂಥದಲ್ಲಿ ಕಾಣಬಹುದು).

ಅಂದಿನ ಇಂದಿನ ಎರಡು ರೈತ ಚಳವಳಿಗಳಲ್ಲಿ ಸಾಮ್ಯತೆಯನ್ನು ಗುರುತಿಸಿರುವ ರಾಮಚಂದ್ರನ್ '... ರೈತರು ಸಂಘಟಿತರಾಗಿ ಬಂಡೆದ್ದರೆ ಯಾವ ಪ್ರಭುತ್ವವೂ-ಅದು ಬ್ರಿಟಿಷ್ ಪ್ರಭುತ್ವವಾಗಲೀ ದೇಶಿ ಪ್ರಭುತ್ವವಾಗಲೀ- ಸೋಲಿಸಲು ಸಾಧ್ಯವಿಲ್ಲ' ಎಂಬ ಕಟುಸತ್ಯವನ್ನು ಎತ್ತಿತೋರಿದ್ದಾರೆ. ಮಂಕುಬೂದಿ ಎರಚಿಸಿಕೊಂಡು ಮಬ್ಬಾಗಿರುವ ದೇಶದ ಸಮಷ್ಟಿ ಪ್ರಜ್ಞೆಗೆ, ಇನ್ನಾದರೂ ಜಾಗೃತರಾಗಿ ಎನ್ನುವ ಸಕಾಲಿಕ ಎಚ್ಚರಿಕೆಯೂ ಆಗಿದೆ ಈ ಲೇಖನ.

ಜಿ.ಎನ್.ರಂಗನಾಥ ರಾವ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹಾಲಿನ ಹೊಳೆ ಹರಿಸಿದ ವರ್ಗೀಸ್ ಕುರಿಯನ್

ಕ್ಷೀರಕ್ರಾಂತಿಯ ಹರಿಕಾರನ ಜನ್ಮಶತಮಾನ

1949ರ ಡಿಸೆಂಬರ್‌ನ ಕೊನೆಯ ದಿನಗಳವು. ಗುಜರಾತ್‌ನ ಆಣಂದ್ ಜಿಲ್ಲೆಯ ಸರ್ಕಾರಿ ಕ್ರೀಮರಿಯಲ್ಲಿ (ಬೆಣ್ಣೆ ಮತ್ತು ಗಿಣ್ಣು ತಯಾರಿ ಕೇಂದ್ರ) ತಮ್ಮ ಒಂಬತ್ತು ತಿಂಗಳ ಪ್ರಭಾರಿ ಸೇವೆಯನ್ನು ಮುಗಿಸಿ, ಆ ವ್ಯಕ್ತಿ ಮುಂಬೈನಲ್ಲಿ ನೆಲೆಸಲು ಸಿದ್ಧತೆ ನಡೆಸಿದ್ದರು. ಒಂಬತ್ತು ತಿಂಗಳ ಸೇವಾವಧಿಯಲ್ಲಿ ಆ ವ್ಯಕ್ತಿಯು ಕಯಾರಾ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟದ ಅಧ್ಯಕ್ಷ ತ್ರಿಭುವನದಾಸ್ ಪಟೇಲ್ ಅವರ ಜತೆ ಸ್ನೇಹ ಬೆಳೆಸಿಕೊಂಡಿದ್ದರು. ಸೇವಾವಧಿ ಮುಗಿಯಲಿದ್ದ ಒಂದೆರಡು ದಿನ ಮೊದಲು ಆ ವ್ಯಕ್ತಿಯನ್ನು ಕರೆಸಿಕೊಂಡ ಪಟೇಲರು, ತಮ್ಮ ಒಕ್ಕೂಟದಲ್ಲಿರುವ ಹೊಸ ಹಾಲುಸಂಸ್ಕರಣ ಯಂತ್ರವನ್ನು ಜೋಡಿಸಲು ನೆರವು ನೀಡುವಂತೆ ಕೋರಿಕೊಂಡರು. ಆ ಯಂತ್ರವನ್ನು ಜೋಡಿಸಲು ಒಂದೆರಡು ದಿನ ಅಲ್ಲೇ ಉಳಿಯಲು ಆ ವ್ಯಕ್ತಿ ನಿರ್ಧರಿಸಿದರು. ಆದರೆ, ನಂತರ ಅವರು ತಮ್ಮ ಇಡೀ ಸೇವಾವಧಿಯನ್ನು ಆಣಂದ್ ಜಿಲ್ಲೆಯಲ್ಲಿಯೇ ಕಳೆದರು. ಭಾರತದಲ್ಲಿ ಕ್ಷೀರಕ್ರಾಂತಿ ಯಶಸ್ವಿಯಾಗಲು ಆ ನಿರ್ಧಾರವೂ ಕಾರಣವಾಯಿತು. ಅಂದು ಯಂತ್ರ ಜೋಡಿಸಲು ನಿಂತ ವ್ಯಕ್ತಿಯೇ ನಂತರದ ಎರಡು ದಶಕಗಳಲ್ಲಿ ಭಾರತದ ಕ್ಷೀರಕ್ರಾಂತಿಯನ್ನು ಮುನ್ನಡೆಸಿದರು. ಭಾರತದ ಕ್ಷೀರ ಕ್ರಾಂತಿಯ ಪಿತಾಮಹ ಎನಿಸಿಕೊಂಡರು. ಆ ವ್ಯಕ್ತಿಯೇ ಡಾ.ವರ್ಗೀಸ್ ಕುರಿಯನ್.

ದೇಶ ಮತ್ತು ವಿಶ್ವದ ಅತ್ಯಂತ ದೊಡ್ಡ ಹಾಲು ಉತ್ಪಾದಕರ ಒಕ್ಕೂಟವಾದ ಅಮೂಲ್ (ಆಣಂದ್ ಮಿಲ್ಕ್ ಯೂನಿಯನ್ ಲಿಮಿಟೆಡ್) ಅನ್ನು ರೂಪಿಸಿದ್ದು ಕುರಿಯನ್. 1946ರಲ್ಲಿ ದೇಶದ ಮೊದಲ ಹಾಲು ಉತ್ಪಾದಕರ ಸಂಘ ಗುಜರಾತ್‌ನಲ್ಲಿ ಆರಂಭವಾಗಿತ್ತು. 1948ರಲ್ಲಿ ಅದರ ಸದಸ್ಯರ ಸಂಖ್ಯೆ ಹೆಚ್ಚಾಯಿತು. ಜಿಲ್ಲಾಮಟ್ಟದಲ್ಲಿಯೂ ಹಾಲು ಉತ್ಪಾದಕರ ಸಂಘಗಳ ಒಕ್ಕೂಟಗಳು ಆರಂಭವಾದವು. ಅದರಲ್ಲಿ ಪ್ರಮುಖವಾದುದು ಕಯಾರಾ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ. ಈ ಎಲ್ಲಾ ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟಗಳನ್ನು ಒಳಗೊಂಡ ಆಣಂದ್ ಮಿಲ್ಕ್ ಯೂನಿಯನ್ ಲಿಮಿಟೆಡ್ ಅನ್ನು ಕುರಿಯನ್ ಸ್ಥಾಪಿಸಿದರು.

ಮೌಲ್ಯವರ್ಧನೆ

ಆರಂಭದ ದಿನಗಳಲ್ಲಿ ಕೆಲವೇ ಆಯ್ದ ಗ್ರಾಮ ಹಾಲು ಉತ್ಪಾದಕರ ಸಂಘಗಳಿಂದ ಖರೀದಿಸಲಾದ ಹಾಲನ್ನು ಗ್ರಾಹಕರಿಗೆ ತಲುಪಿಸುವ ಕೆಲಸವನ್ನು ಅಮೂಲ್ ಮಾಡುತ್ತಿತ್ತು. ಆಣಂದ್ ಮತ್ತು ಅಕ್ಕಪಕ್ಕದ ಜಿಲ್ಲೆಗಳಿಗಷ್ಟೇ ಅಮೂಲ್‌ನ ಹಾಲು ತಲುಪುತ್ತಿತ್ತು. ಉತ್ಪಾದಕರಿಂದ ಸಂಗ್ರಹಿಸಿದ ಹಾಲನ್ನು ಶೀಘ್ರವೇ ವಿತರಣೆ ಮಾಡಬೇಕಿತ್ತು. ತಡವಾದರೆ ಹಾಲು ಹಾಳಾಗುತ್ತಿತ್ತು. ಬಿಕರಿಯಾಗದೇ ಇದ್ದರೂ ಹಾಲು ಹಾಳಾಗುತ್ತಿತ್ತು. ಉಳಿದ ಹಾಲಿನಿಂದ ಬೆಣ್ಣೆ ಮತ್ತು ಗಿಣ್ಣು ತಯಾರಿಸಲು ಕುರಿಯನ್ ಕ್ರಮ ತೆಗೆದುಕೊಂಡರು. ಅದಕ್ಕೆ ಅಗತ್ಯವಿದ್ದ ಸಲಕರಣೆಗಳನ್ನು ಅಮೂಲ್‌ಗಾಗಿ ಖರೀದಿಸಿದರು. ಅಮೂಲ್‌ನ ಬೆಣ್ಣೆ ಮತ್ತು ಗಿಣ್ಣುವಿಗೆ ಮಾರುಕಟ್ಟೆ ಸೃಷ್ಟಿಸಲು ಕ್ರಮ ತೆಗೆದುಕೊಂಡರು. ಕೆಲವೇ ತಿಂಗಳಿನಲ್ಲಿ ಅವು ಜನಪ್ರಿಯತೆ ಪಡೆದವು, ಜತೆಗೆ ಅಮೂಲ್ ಸಹ.

ಅಮೂಲ್‌ನಲ್ಲಿ ಬಿಕರಿಯಾಗದೇ ಉಳಿದ ಹಸುವಿನ ಹಾಲಿನಿಂದ ಪುಡಿ ತಯಾರಿಸಲಾಗುತ್ತಿತ್ತು. ಆದರೆ ಈ ಭಾಗದಲ್ಲಿ ಎಮ್ಮೆಯ ಹಾಲಿನ ಉತ್ಪಾದನೆ ಅಧಿಕವಾಗಿತ್ತು. ಎಮ್ಮೆಯ ಹಾಲನ್ನು ಪುಡಿ ಆಗಿ ಬದಲಿಸುವ ತಂತ್ರಜ್ಞಾನ ಮತ್ತು ವಿಧಾನ ಜಗತ್ತಿನ ಎಲ್ಲಿಯೂ ಲಭ್ಯವಿರಲಿಲ್ಲ. ಸ್ವತಃ ಡೇರಿ ಎಂಜಿನಿಯರ್ ಆಗಿದ್ದ ಕುರಿಯನ್ ಅವರು, ಎಮ್ಮೆಯ ಹಾಲಿನಿಂದ ಪುಡಿ ತಯಾರಿಸುವ ವಿಧಾನವನ್ನು ರೂಪಿಸಿದರು. ಅದು ಯಶಸ್ವಿಯಾಯಿತು ಮತ್ತು ಹಾಲು ವ್ಯರ್ಥವಾಗುವುದನ್ನು ತಡೆದು, ಮೌಲ್ಯವರ್ಧಿಸುವ ಕೆಲಸವಾಯಿತು. ಒಂದೆರಡು ಉತ್ಪನ್ನಗಳಿಗಾಗಿ ಮಾಡಿದ ಈ ಮೌಲ್ಯವರ್ಧನೆ, ಈಗ 25 ಉತ್ಪನ್ನಗಳಿಗೆ ವಿಸ್ತರಿಸಿದೆ.



ಕೋಯಿಕ್ಕೋಡ್‌ನಿಂದ ಆಣಂದ್‌ಗೆ...

1921ರ ನವೆಂಬರ್ 26ರಂದು ಕೇರಳದ ಕೋಯಿಕ್ಕೋಡ್‌ನಲ್ಲಿ ಕ್ರೈಸ್ತ ಕುಟುಂಬದಲ್ಲಿ ಜನಿಸಿದ ವರ್ಗೀಸ್ ಕುರಿಯನ್, 1940ರಲ್ಲಿ ಮದ್ರಾಸ್‌ನ ಲೊಯೋಲಾ ಕಾಲೇಜ್‌ನಿಂದ ಬಿಎಸ್‌ಸಿ ಪದವಿ ಪಡೆದರು. ಅಲ್ಲಿಯೇ 1943ರಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿಯನ್ನೂ ಪಡೆದರು. ಜಮ್‌ಶೆಡ್‌ಪುರದ ಟಾಟಾ ಸಂಸ್ಥೆಯಲ್ಲಿ ಎಂಜಿನಿಯರಿಂಗ್ ಅಧ್ಯಯನ ಮಾಡಿ, ಬೆಂಗಳೂರಿನ ರಾಷ್ಟ್ರೀಯ ಡೇರಿ ಸಂಶೋಧನಾ ಸಂಸ್ಥೆಯಲ್ಲಿ ಡೇರಿ ವಿಭಾಗದಲ್ಲಿ ಎಂಜಿನಿಯರಿಂಗ್ ಓದಿದರು.

ನಂತರ ಅಮೆರಿಕಕ್ಕೆ ಹೋದ ಅವರು, ಮಿಶಿಗನ್ ವಿಶ್ವವಿದ್ಯಾಲಯದಿಂದ ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದರು. ಗುಜರಾತ್ ರಾಜ್ಯದ ಆಣಂದ್‌ನಲ್ಲಿರುವ ಸರ್ಕಾರಿ ಸಂಶೋಧನಾ ಕ್ರೀಮರಿ ಸಂಸ್ಥೆಯಲ್ಲಿ ಕೆಲಸ ಮಾಡಿದರು. 1965ರಲ್ಲಿ ಅವರು ರಾಷ್ಟ್ರೀಯ ಡೇರಿ ಅಭಿವೃದ್ಧಿ ಮಂಡಳಿ ಮೊದಲ ಅಧ್ಯಕ್ಷರಾಗಿ ನೇಮಕವಾದರು. ಇವರ ನೇತೃತ್ವದಲ್ಲಿ ಆಪರೇಷನ್ ಫ್ಲಡ್ ಕಾರ್ಯರೂಪಕ್ಕೆ ಬಂದಿತು. ಗುಜರಾತ್ ಸಹಕಾರಿ ಹಾಲು ಮಾರಾಟ ಒಕ್ಕೂಟ ಆರಂಭಿಸಿದರು. ರೇಮನ್ ಮ್ಯಾಗ್ಸೇಸೆ, ಪದ್ಮ ವಿಭೂಷಣ, ವಿಶ್ವ ಆಹಾರ ಪ್ರಶಸ್ತಿಗಳು ಅವರಿಗೆ ಸಂದಿವೆ. ಅವರು 2012ರ ಸೆಪ್ಟೆಂಬರ್ 9ರಂದು ನಿಧನರಾದರು.

ವಿಶ್ವದ ದೊಡ್ಡ ಹಾಲು ಉತ್ಪಾದಕರ ಸಂಘ

ಅಮೂಲ್ ಅಥವಾ ಗುಜರಾತ್ ಸಹಕಾರಿ ಹಾಲು ಮಾರ್ಕೆಟಿಂಗ್ ಫೆಡರೇಷನ್ ಲಿಮಿಟೆಡ್ ವಿಶ್ವದ ಅತ್ಯಂತ ದೊಡ್ಡ ಹಾಲು ಉತ್ಪಾದಕರ ಸಂಘಟನೆ ಎನಿಸಿದೆ. ಅಮೂಲ್ ಗುಜರಾತ್‌ನ ಸಂಸ್ಥೆಯಾದರೂ, ರಾಷ್ಟ್ರೀಯ ಡೇರಿ ಅಭಿವೃದ್ಧಿ ಮಂಡಳಿಯ ಮೂಲಕ ದೇಶದ ಎಲ್ಲಾ ರಾಜ್ಯಗಳಲ್ಲಿ ಹಾಲಿನ ಖರೀದಿ ಮತ್ತು ಹಾಲಿನ ಉತ್ಪನ್ನಗಳ ಮಾರುಕಟ್ಟೆಯನ್ನು ನಿರ್ವಹಿಸುತ್ತಿದೆ. ಸಂಘಟನೆಯ ಗುಜರಾತ್‌ನ ಸದಸ್ಯರು, ಹಾಲು ಉತ್ಪಾದಕರ ಸಂಖ್ಯೆಯ ವಿವರ ಇಲ್ಲಿದೆ

18 ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳು

18,600 ಗ್ರಾಮಮಟ್ಟದ ಹಾಲು ಉತ್ಪಾದಕರ ಸಂಘಗಳು

36.4 ಲಕ್ಷ ಹಾಲು ಉತ್ಪಾದಕರು

3.9 ಕೋಟಿ ಲೀಟರ್ ದಿನವೊಂದರಲ್ಲಿ ನಿರ್ವಹಣೆ ಮಾಡಬಹುದಾದ ಹಾಲಿನ ಪ್ರಮಾಣ

₹39,248 ಕೋಟಿ 2020–21ನೇ ಸಾಲಿನಲ್ಲಿ ಅಮೂಲ್‌ನ ಒಟ್ಟು ವಹಿವಾಟು

ಆಪರೇಷನ್ ಫ್ಲಡ್



ಗುಜರಾತಿನಲ್ಲಿ ವರ್ಗೀಸ್ ಕುರಿಯನ್ ಅವರು ರೂಪಿಸಿದ್ದ ಸಹಕಾರಿ ಹಾಲು ಒಕ್ಕೂಟ ವ್ಯವಸ್ಥೆಯ ಯಶಸ್ಸಿನ ಬಗ್ಗೆ ತಿಳಿದುಕೊಳ್ಳಲು ಅಂದಿನ ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿ ಅವರಿಗೆ ತೀವ್ರ ಕುತೂಹಲವಿತ್ತು. 1964ರಲ್ಲಿ ಅಮೂಲ್ ಘಟಕಕ್ಕೆ ಭೇಟಿ ನೀಡಿದ ಅವರು, ಹಳ್ಳಿಗರ ಸಾಮಾಜಿಕ–ಮತ್ತು ಆರ್ಥಿಕ ಸ್ಥಿತಿ ಉತ್ತಮಪಡಿಸುವ ಕುರಿಯನ್ ಅವರ ಈ ಮಾದರಿಯನ್ನು ದೇಶದ ಎಲ್ಲಡೆ ವಿಸ್ತರಿಸುವ ಕುರಿತ ಚರ್ಚೆ ನಡೆಸಿದ್ದರು. ಈ ಬಳಿಕ ರಾಷ್ಟ್ರೀಯ ಡೇರಿ ಅಭಿವೃದ್ಧಿ ಮಂಡಳಿ (ಎನ್‌ಡಿಡಿಬಿ) ರೂಪು ತಾಳಿತು. ಕುರಿಯನ್ ಅದರ ಮೊದಲ ಮುಖ್ಯಸ್ಥರಾದರು. ಮಂಡಳಿಯು 1970ರಲ್ಲಿ ಭಾರತದಲ್ಲಿ ಡೇರಿ ಅಭಿವೃದ್ಧಿ ಯೋಜನೆಯನ್ನು ಶುರು ಮಾಡಿತ್ತು. ಇದು 'ಆಪರೇಷನ್ ಫ್ಲಡ್' ಎಂದೇ ಹೆಸರಾಯಿತು.

'ಆಪರೇಷನ್ ಫ್ಲಡ್' ಯೋಜನೆಯು ದೇಶದಲ್ಲಿ ಕ್ಷೀರಕ್ರಾಂತಿಗೆ ನಾಂದಿಹಾಡಿತು. ಮಧ್ಯವರ್ತಿಯ ಹಾವಳಿ ತಪ್ಪಿಸಿ, ಹಾಲು ಉತ್ಪಾದಕರಿಂದ ಪ್ರಮುಖ ನಗರ ಮತ್ತು ಪಟ್ಟಣಗಳ ಗ್ರಾಹಕರಿಗೆ ಪೂರೈಸುವ ಉದ್ದೇಶವನ್ನು ಇದು ಹೊಂದಿತ್ತು. ಉತ್ಪಾದಕರಿಗೆ ಅರ್ಹ ಬೆಲೆ ದೊರಕಿಸಲು ಆದ್ಯತೆ ನೀಡಲಾಗಿತ್ತು. ಈ ಯೋಜನೆಯು ಡೇರಿ ಉದ್ಯಮಕ್ಕೆ ಸ್ಥಿರತೆ ತರುವುದರ ಜೊತೆಗೆ ಬಡ ರೈತರಿಗೆ ಉದ್ಯೋಗದ ದಾರಿ ಮಾಡಿಕೊಟ್ಟಿತು. ಆಪರೇಷನ್ ಫ್ಲಡ್‌ನ ತಳಹದಿಯಲ್ಲಿ ಬಹುತೇಕ ಹಳ್ಳಿಗಳಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳು ತಲೆ ಎತ್ತಿದವು. ಹಾಲು ಉತ್ಪಾದನೆ, ಸರಬರಾಜು ಸೇರಿದಂತೆ ವಿವಿಧ ಹಂತಗಳಲ್ಲಿ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಯಿತು. ಇದರ ಫಲವಾಗಿ ದೇಶದಲ್ಲಿ ಕ್ಷೀರ ಕ್ರಾಂತಿ ಆಯಿತು. ಆಪರೇಷನ್ ಫ್ಲಡ್ ಯೋಜನೆಯು ಜಗತ್ತಿನ ಅತಿದೊಡ್ಡ ಡೇರಿ ಅಭಿವೃದ್ಧಿ ಕಾರ್ಯಕ್ರಮ ಎಂದು ಹೆಸರಾಯಿತು. ಇದಕ್ಕೆ ಕಾರಣಕರ್ತರಾದ ವರ್ಗೀಸ್ ಕುರಿಯನ್ ಅವರನ್ನು ಕ್ಷೀರ ಕ್ರಾಂತಿಯ ಪಿತಾಮಹ ಎಂದು ಕರೆಯಲಾಯಿತು.

ಮೂರು ಹಂತಗಳು: ಯೋಜನೆಯಲ್ಲಿ ಮೂರು ಹಂತಗಳಿದ್ದವು. 1970ರಲ್ಲಿ ಮೊದಲ ಹಂತದಲ್ಲಿ, 10 ರಾಜ್ಯಗಳಲ್ಲಿ 18 ಹಾಲಿನ ಘಟಕಗಳನ್ನು ಸ್ಥಾಪಿಸಿ ಅದರ ಮೂಲಕ ದೇಶದ ನಾಲ್ಕು ಮಹಾ ನಗರಗಳಿಗೆ ಹಾಲು ಸರಬರಾಜು ಮಾಡುವ ಯೋಜನೆ ಹಾಕಿಕೊಳ್ಳಲಾಗಿತ್ತು. 1981ರಲ್ಲಿ ಈ ಹಂತ ಪೂರ್ಣಗೊಂಡಾಗ, ದೇಶದಲ್ಲಿ 13 ಸಾವಿರ ಸಹಕಾರಿ ಸಂಘಗಳು ರೂಪುಗೊಂಡಿದ್ದವು. ಕರ್ನಾಟಕ, ರಾಜಸ್ಥಾನ, ಮಧ್ಯಪ್ರದೇಶದಲ್ಲಿ ಎರಡನೇ ಹಂತ ಜಾರಿಯಾಯಿತು. 1985ರ ವೇಳೆಗೆ ದೇಶದಲ್ಲಿ 136 ಘಟಕಗಳು, 34 ಸಾವಿರ ಸಂಘಗಳು ಅಸ್ತಿತ್ವದಲ್ಲಿದ್ದವು. 36 ಲಕ್ಷ ಸದಸ್ಯರು ಡೇರಿ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದರು. ಮೂರನೇ ಹಂತದಲ್ಲಿ ಉತ್ಪಾದಕತೆ ಹೆಚ್ಚಿಸುವ ಹಾಗೂ ದೀರ್ಘಾವಧಿಯಲ್ಲಿ ಸ್ಥಿರತೆ ಕಾಯ್ದುಕೊಳ್ಳುವ ಉದ್ದೇಶ ಇರಿಸಿಕೊಳ್ಳಲಾಗಿತ್ತು. ಈ ಹಂತ ಪೂರ್ಣಗೊಂಡಾಗ (1996) ದೇಶದಲ್ಲಿ 93 ಸಾವಿರ ಡೇರಿ ಸಂಘಗಳಿದ್ದವು. ಸದಸ್ಯರ ಸಂಖ್ಯೆ 94 ಲಕ್ಷಕ್ಕೆ ಏರಿಕೆಯಾಗಿತ್ತು.

ಗುಜರಾತ್‌ನಲ್ಲಿ ಶುರುವಾದ ಅಮೂಲ್ ಹೊರತುಪಡಿಸಿದರೆ, ಕರ್ನಾಟಕದಲ್ಲಿ ಶುರುವಾದ ಕೆಎಂಎಫ್ ಅತಿ ಹೆಚ್ಚು ಯಶಸ್ಸು ಪಡೆದ ಹಾಲು ಉತ್ಪಾದಕ ಸಂಸ್ಥೆ ಎನಿಸಿತು. ಅಮೂಲ್‌ನಿಂದ ಪ್ರೇರಣೆ ಪಡೆದ 'ನಂದಿನಿ' ಉತ್ಪನ್ನಗಳು ಮನೆಮಾತಾದವು. ಉತ್ಪನ್ನಗಳನ್ನು ಪಕ್ಕದ ಆಂಧ್ರ ಪ್ರದೇಶ, ತಮಿಳುನಾಡು, ಕೇರಳ ರಾಜ್ಯಗಳಿಗೆ ಸರಬರಾಜು ಮಾಡಲಾಗುತ್ತಿದೆ. ಖಾಸಗಿ ಹಾಲು ಉತ್ಪಾದಕರ ಪೈಪೋಟಿಯ ನಡುವೆಯೂ ನಂದಿನಿಯ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಶೇ 80ರಷ್ಟು ಪಾಲು ಪಡೆದಿವೆ. ಚಾಕೋಲೆಟ್, ಐಸ್‌ಕ್ರೀಮ್, ಕೊಬ್ಬರಿ ಬರ್ಫಿ ಮೊದಲಾದ ನೂರಾರು ಉತ್ಪನ್ನಗಳನ್ನು ಸಂಸ್ಥೆ ಪರಿಚಯಿಸಿದೆ. ರಾಜ್ಯದ ಲಕ್ಷಾಂತರ ರೈತರು ಹೈನು ಉದ್ಯಮದ ಮೂಲಕ ಆರ್ಥಿಕ ದಾರಿ ಕಂಡುಕೊಂಡಿದ್ದಾರೆ.

ಉತ್ಪಾದಕರಿಗೆ ಗರಿಷ್ಠ ಬೆಲೆ

ದೇಶದಲ್ಲಿ ಕ್ಷೀರಕ್ರಾಂತಿಯನ್ನು ಆರಂಭಿಸುವ ಮುನ್ನವೇ ಹಾಲು ಉತ್ಪಾದಕರು ಮತ್ತು ಗ್ರಾಹಕರ ನಡುವೆ ಒಂದು ವ್ಯವಸ್ಥಿತವಾದ ಪೂರೈಕೆ ಜಾಲವನ್ನು ಅಮೂಲ್ ರೂಪಿಸಿತ್ತು. ಉತ್ಪಾದಕರಿಂದ ಸಂಗ್ರಹಿಸಿದ ಹಾಲನ್ನು ಹೆಚ್ಚಿನ ಕಾಲ ಸಂಸ್ಕರಿಸಿ ಇಡುವ ಸಲಕರಣೆಗಳು ಮತ್ತು ವಿಧಾನಗಳ ಬಳಕೆಯನ್ನು ಕುರಿಯನ್ ಪ್ರೋತ್ಸಾಹಿಸಿದರು. ಇದರಿಂದ ಹಾಲು ಉತ್ಪಾದಕರ ಸಂಘಗಳು ಮತ್ತು ಒಕ್ಕೂಟಗಳು ಹೆಚ್ಚಿನ ಅವಧಿಯವರೆಗೆ ಹಾಲನ್ನು ಸಂಗ್ರಹಿಸಿ ಇಡಲು ಸಾಧ್ಯವಾಯಿತು. ಜತೆಗೆ ಬಹಳ ದೂರದ ಗ್ರಾಹಕರಿಗೂ ಉತ್ತಮ ಗುಣಮಟ್ಟದ ಹಾಲನ್ನು ತಲುಪಿಸಲು ಸಾಧ್ಯವಾಯಿತು. ಇದು ಸಹ ಅಮೂಲ್‌ನ ಜನಪ್ರಿಯತೆಗೆ ಕಾರಣವಾಯಿತು.

ಸಹಕಾರ ತತ್ವಗಳ ಅಡಿ ಗುಜರಾತ್‌ನಲ್ಲಿ ಹಲವು ಹಾಲು ಉತ್ಪಾದಕರ ಒಕ್ಕೂಟಗಳು 1950ಕ್ಕೂ ಮೊದಲೇ ಆರಂಭವಾಗಿದ್ದವು. ಆದರೆ ಉತ್ಪಾದಕರಿಂದ ಕಡಿಮೆ ಬೆಲೆಗೆ ಖರೀದಿಸಿ, ಗ್ರಾಹಕರಿಗೆ ದುಬಾರಿ ಬೆಲೆಯಲ್ಲಿ ಮಾರಾಟ ಮಾಡಲಾಗುತ್ತಿತ್ತು. ಸಹಕಾರ ಸಂಘಗಳೇ ಲಾಭದ ಹೆಚ್ಚಿನಂಶವನ್ನು ಪಡೆದುಕೊಳ್ಳುತ್ತಿದ್ದವು. ಈ ಸ್ವರೂಪದ ವ್ಯವಹಾರ ಮಾದರಿಗೆ ಅಮೂಲ್ ಕೊನೆ ಹಾಡಿತು. ಗ್ರಾಹಕರಿಗೆ ಮಾರಾಟ ಮಾಡಲಾದ ಹಾಲು ಮತ್ತು ಹಾಲಿನ ಉತ್ಪನ್ನದ ಬೆಲೆಯ ಸಿಂಹಪಾಲು ಉತ್ಪಾದಕರಿಗೆ ತಲುಪುವ ವ್ಯವಸ್ಥೆಯನ್ನು ಕುರಿಯನ್ ರೂಪಿಸಿದರು. ಹೀಗಾಗಿ ಹೆಚ್ಚಿನ ಉತ್ಪಾದಕರು ಅಮೂಲ್‌ಗಷ್ಟೇ ಹಾಲು ಮಾರಾಟ ಮಾಡಲು ಮುಂದಾದರು. ಇದರಿಂದ ಅಮೂಲ್‌ನ ಹಾಲು ಉತ್ಪಾದಕರ ಜಾಲ ವಿಸ್ತೃತವಾಗಿ ಬೆಳೆಯಿತು.

ಇದರ ಜತೆಯಲ್ಲಿಯೇ ಹಾಲಿನ ಗುಣಮಟ್ಟ ಕಾಪಾಡಿಕೊಳ್ಳುವುದರತ್ತಲೂ ಕುರಿಯನ್ ಗಮನ ಕೇಂದ್ರೀಕರಿಸಿದ್ದರು. ನಿಗದಿತ ಗುಣಮಟ್ಟದ ಹಾಲನ್ನಷ್ಟೇ ಖರೀದಿಸಲಾಗುತ್ತಿತ್ತು. ಇದರಿಂದ ಗ್ರಾಹಕರಿಗೆ ತಲುಪುವ ಹಾಲು ಮತ್ತು ಮೌಲ್ಯವರ್ಧಿತ ಉತ್ಪನ್ನಗಳ ಗುಣಮಟ್ಟವನ್ನು ಕಾಯ್ದುಕೊಳ್ಳಲು ಸಾಧ್ಯವಾಯಿತು. ಇದು ಅಮೂಲ್‌ನ ಗ್ರಾಹಕರ ಸಂಖ್ಯೆಯನ್ನು ಹೆಚ್ಚಿಸಿತು. 1973ರಲ್ಲಿ ಇದನ್ನು ಗುಜರಾತ್ ಸಹಕಾರಿ ಹಾಲು ಮಾರಾಟ ಫೆಡರೇಷನ್ ಲಿಮಿಟೆಡ್ ಆಗಿ ಮರುನಾಮಕರಣ ಮಾಡಲಾಯಿತು. ಆದರೆ ಅಮೂಲ್ ಬ್ರ್ಯಾಂಡ್ ಅನ್ನು ಉಳಿಸಿಕೊಳ್ಳಲಾಯಿತು.

ಆಧಾರ: ಅಮೂಲ್, ರಾಷ್ಟ್ರೀಯ ಡೇರಿ ಅಭಿವೃದ್ಧಿ ಮಂಡಳಿ
ವರದಿ: **ಜಯಸಿಂಹ ಆರ್., ಅಮೃತ ಕಿರಣ್ ಬಿ.ಎಂ.**

ವೇದವ್ಯಾಸರ ಶಿವಪುರಾಣದ ಕುಮಾರಖಂಡಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 15

ಶಿವ-ಗಣೇಶ ಯುದ್ಧ

ಶಿವನ ಆಜ್ಞೆಯಂತೆ ಅವನ ಗಣಗಳೆಲ್ಲಾ ಯುದ್ಧಸನ್ನದ್ಧರಾಗಿ ಹೊರಟರು. ಶಿವಗಣಗಳು ತನ್ನ ಕಡೆಗೆ ಬರುತ್ತಿರುವುದನ್ನು ಕಂಡು ಗಣೇಶ ಹೇಳಿದ 'ಎಲೈ ಗಣಗಳೇ, ನೀವೆಲ್ಲರೂ ಶಿವನ ಅಪ್ಪಣೆಯಂತೆ ಬರುತ್ತಿರುವಿರಿ. ನಾನೂ ಪಾರ್ವತಿಯ ಅನುಜ್ಞೆಯಂತೆ ನಡೆಯುವವ. ಗಿರಿಜೆಯ ಪುತ್ರನಾದ ನನ್ನ ಬಲ ಹೆಚ್ಚೋ, ಇಲ್ಲ ಗಣಗಳ ಬಲ ಹೆಚ್ಚೋ ಎಂಬುದನ್ನು ಶಿವ ನೋಡಲಿ. ಪಾರ್ವತೀಪಕ್ಷದಲ್ಲಿ ಬಾಲಕನಾದ ನಾನು ಒಬ್ಬನು ಮಾತ್ರ. ಶಿವನ ಪಕ್ಷ ದಲ್ಲಿ ಬಲಿಷ್ಠರಾದ ನೀವೆಲ್ಲರೂ ಇರುವಿರಿ. ಇಂತಹ ನಮ್ಮಿಬ್ಬರಿಗೂ ಯುದ್ಧ ವಾಗಬೇಕು. ನೀವಾದರೆ ಯುದ್ಧದಲ್ಲಿ ವಿಶಾರದರು. ಹಿಂದೆ ಎಷ್ಟೋ ಯುದ್ಧ ವನ್ನು ಮಾಡಿರುವಿರಿ. ನಾನೂ ಹಿಂದೆಂದೂ ಯುದ್ಧ ಮಾಡಿಲ್ಲ. ನೀವು ನಿಮ್ಮ ಸ್ವಾಮಿಯಾದ ಶಿವನ ಪರವಾಗಿ ಯುದ್ಧ ಮಾಡಿರಿ. ನಾನು ನನ್ನ ತಾಯಿಯಾದ ಭವಾನಿಯ ಪರವಾಗಿ ಯುದ್ಧ ಮಾಡುವೆ. ಈ ಯುದ್ಧವನ್ನು ನಿಲ್ಲಿಸಲು ಮೂರು ಲೋಕದಲ್ಲಿ ಯಾರಿಗೂ ಸಾಧ್ಯವಿಲ್ಲ' ಎಂದು ಶಿವಗಣಗಳನ್ನು ಲೇವಡಿ ಮಾಡಿದ.

ಗಣೇಶನ ಮಾತಿನಿಂದ ಆಕ್ರೋಶಗೊಂಡ ನಂದಿಯು ನುಗ್ಗಿ ಬಂದು ಗಣಪತಿಯ ಒಂದು ಕಾಲನ್ನು ಹಿಡಿದೆಳೆದನು. ಭೃಂಗಿಯು ಸಹ ಧಾವಿಸಿ ಬಂದು ಗಣಪತಿಯ ಮತ್ತೊಂದು ಪಾದವನ್ನು ಹಿಡಿದೆಳೆದನು. ಅವರಿಬ್ಬರೂ ಕಾಲನ್ನು ಹಿಡಿದೆಳೆಯುತ್ತಿರುವಾಗ ಗಣಪತಿಯು ತನ್ನ ಎರಡು ಕೈಗಳಿಂದ ಅವರಿಬ್ಬರನ್ನು ಬಲವಾಗಿ ತಳ್ಳಿದ. ಅವರು ದೂರಹೋಗಿ ಬಿದ್ದರು. ಬಳಿಕ ವೀರನಾದ ಗಣಪತಿಯು ಪರಿಘಾಯುಧವನ್ನು ಬಾಗಿಲಿನಲ್ಲಿ ನಿಂತುಕೊಂಡೇ ಎಸೆದನು. ಅದರ ಏಟಿನಿಂದ ಕೆಲ ಶಿವಗಣಗಳ ಕೈಗಳು ಮುರಿದುಹೋದವು. ಕೆಲವರ ಬೆನ್ನುಗಳು ಮುರಿದವು. ಕೆಲವರ ತಲೆಗಳು ಉರುಳಿದವು. ಕೆಲವರ ಹಣೆಗಳು ಚೂರಾದವು. ಕೆಲವರ ಮಂಡಿಗಳು, ಕೆಲವರ ಬಾಹುಗಳೂ ಚೂರುಚೂರಾದವು. ಗಣಪತಿಯ ಎದುರಿಗೆ ನುಗ್ಗಿ ಬರುವವರ ಹೃದಯಕ್ಕೆ ಏಟುಬಿದ್ದು ಸಾಯುತ್ತಿದ್ದರು. ಕೆಲವರು ದಿಕ್ಕೆಟ್ಟು ಓಡಿದರು. ಮತ್ತೆ ಕೆಲವರ ಕಾಲುಗಳು ಕತ್ತರಿಸಿಬಿದ್ದವು. ಹೆದರಿಕೊಂಡ ಕೆಲವರು ಪಲಾಯನ ಮಾಡಿ, ಶಿವನ ಹತ್ತಿರಕ್ಕೆ ಓಡಿಹೋದರು. ಗಣಪತಿ ಮಾತ್ರ ಬಾಗಿಲಿನಲ್ಲಿ ನಿಂತೇ ಇದ್ದನು. ಆ ಸಮಯದಲ್ಲಿ ಅವನು ಪ್ರಳಯಕಾಲದ ಕಾಲಪುರುಷನಂತೆ ಭಯಂಕರನಾಗಿ ಕಾಣಿಸುತ್ತಿದ್ದ.

ಈ ಸಂದರ್ಭದಲ್ಲಿ ಬ್ರಹ್ಮ ವಿಷ್ಣು ಮೊದಲಾದ ದೇವತೆಗಳು ನಾರದನಿಂದ ಶಿವ-ಗಣೇಶ ಯುದ್ಧ ಮಾಡುತ್ತಿರುವ ವಿಷಯ ತಿಳಿದು, ಶಿವನ ಪರವಾಗಿ ಗಣೇಶನ ಮೇಲೆ ಯುದ್ಧ ಮಾಡಲು ಬಂದರು. ಗಣಪತಿ ಪರಿಘಾಯುಧವನ್ನು ತೆಗೆದುಕೊಂಡ ತಕ್ಷಣವೇ ಬ್ರಹ್ಮನ ಸಹಿತ ಎಲ್ಲ ದೇವತೆಗಳು ಓಡಿಹೋದರು. ದೇವತೆಗಳೆಲ್ಲರೂ ಓಡಿಬಂದುದನ್ನೂ ನೋಡಿ ಶಂಕರನು ಅತಿಕೋಪಗೊಂಡ. ಇಂದ್ರ, ಷಣ್ಮುಖ ಮುಂತಾದ ಪ್ರಮಥಗಳನ್ನೂ, ಭೂತ, ಪ್ರೇತ, ಪಿಶಾಚಗಳನ್ನೂ ಕಳುಹಿಸಿದ. ಅವರೆಲ್ಲಾ ದಾಳಿ ಮಾಡಿ ಗಣಪತಿಗೆ ಬಲವಾಗಿ ಹೊಡೆಯುತ್ತಿದ್ದರು. ವಿಷಯ ತಿಳಿದ ಪಾರ್ವತಿ ಕೋಪಗೊಂಡು ಗಣಪತಿಗೆ ಸಹಾಯಮಾಡಲು ಇಬ್ಬರು ಶಕ್ತಿ ದೇವತೆಯನ್ನು ಸೃಷ್ಟಿಮಾಡಿದಳು. ಅವರಲ್ಲಿ ಒಬ್ಬಳು ಭಯಂಕರವಾಗಿದ್ದಳು. ಕಪ್ಪಗೆ ಪರ್ವತದ ಗಾತ್ರವಾಗಿದ್ದಳು. ಗುಹೆಯಂತಿರುವ ತನ್ನ ಬಾಯನ್ನು ತೆರೆದುಕೊಂಡಿದ್ದಳು. ಮತ್ತೊಬ್ಬಳು ಮಿಂಚಿನಂತೆ ಹೊಳೆಯುತ್ತಿರುವ ರೂಪವುಳ್ಳವಳು. ಅವಳಿಗೆ ಅನೇಕ ಕೈಗಳಿದ್ದವು. ದುಷ್ಟರನ್ನು ಶಿಕ್ಷಿಸಲು ಸಮರ್ಥಳಾಗಿದ್ದಳು. ಅವರಿಬ್ಬರೂ ದೇವತೆಗಳ ಆಯುಧಗಳನ್ನು ತಮ್ಮ ಬಾಯಿಯಲ್ಲಿ ಹಾಕಿಕೊಳ್ಳುತ್ತಿದ್ದರು. ಇದರಿಂದ ಇಂದ್ರಾದಿ ದೇವತೆಗಳೆಲ್ಲರೂ ಪರಾಜಿತರಾದರು. ಮಹಾವೀರನಾದ ಷಣ್ಮುಖನು ಮಾತ್ರ ಯುದ್ಧದಲ್ಲಿ ಹಿಮ್ಮೆಟ್ಟದೆ ದೇವತೆಗಳನ್ನೆಲ್ಲಾ ಹಿಂದಿಟ್ಟುಕೊಂಡು ಧೈರ್ಯವಾಗಿ ಮುಂದೆ ನಿಂತಿದ್ದ. ಉಳಿದ ದೇವತೆಗಳೆಲ್ಲರೂ ಯುದ್ಧರಂಗದಿಂದ ಓಡಿ ಶಿವನ ಬಳಿ ದಯನೀಯವಾಗಿ ನಿಂತರು. ರುದ್ರನು ಅತ್ಯಂತ ಕೋಪದಿಂದ ಗಣಪತಿ ಇದ್ದೆಡೆಗೆ ಹೊರಟನು. ವಿಷ್ಣು ಮತ್ತು ದೇವಸೈನ್ಯವೂ ಹಿಂಬಾಲಿಸಿತು. ಈ ಸಂದರ್ಭದಲ್ಲಿ 'ನಿನ್ನ ವಿರೋಧಿಯನ್ನು ನಾಶಮಾಡು' ಎಂದು ಶಿವನಿಗೆ ಹೇಳಿ ನಾರದ ಅಂತರ್ಧಾನನಾದ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ಆಹಾರ ಸೇವಿಸುತ್ತಿರುವ ಫೋಟೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಬ್ರಾಹ್ಮಣರೆಂದು ಹೇಳಿಕೊಳ್ಳುವ ಇಂದಿರಾ ಮೀನು ತಿನ್ನುತ್ತಿದ್ದಾರೆ' ಎಂದು ಈ ಫೋಟೊ ಪೋಸ್ಟ್ ಮಾಡಿರುವವರು ಪ್ರತಿಪಾದಿಸಿದ್ದಾರೆ. 'ದತ್ತಾತ್ರೇಯ ಬ್ರಾಹ್ಮಣ ರಾಹುಲ್ ಗಾಂಧಿಯ ಅಜ್ಜಿ ಮೀನು ತಿನ್ನುತ್ತಿದ್ದಾರೆ. ನಕಲಿ ಗಾಂಧಿ, ಅಸಲಿ ಮುಸ್ಲಿಂ' ಎಂಬ ಅಡಿ ಬರಹವನ್ನು ಫೋಟೊಕ್ಕೆ ನೀಡಲಾಗಿದೆ.

ಇದು ತಿರುಚಿರುವ ಫೋಟೊ ಎಂದು 'ದಿ ಲಾಜಿಕಲ್ ಇಂಡಿಯನ್' ವರದಿ ಮಾಡಿದೆ. ಜೊತೆಗೆ ಮೂಲ ಫೋಟೊವನ್ನೂ ಪೋಸ್ಟ್ ಮಾಡಿದೆ. ಇಂದಿರಾ ತಿನ್ನುತ್ತಿರುವುದು ಮೀನು ಅಲ್ಲ, ಅದು ಮೆಕ್ಕೆಜೋಳ ಎಂದು ಹೇಳಿದೆ. ಈ ಫೋಟೊ ತೆಗೆದಿರುವುದು ಖ್ಯಾತ ಛಾಯಾಚಿತ್ರ ಗ್ರಾಹಕ ಶ್ರೀಧರ್ ನಾಯ್ಡು. ಶ್ರೀಧರ್ ನಿಧನರಾದ ವೇಳೆ, 2017ರ ಸೆ.25ರಂದು 'ದಿ ಹಿಂದೂ' ಪತ್ರಿಕೆಯಲ್ಲಿ ಈ ಫೋಟೊ ಪ್ರಕಟವಾಗಿತ್ತು. ಮೂಲ ಫೋಟೊದಲ್ಲಿ ಇಂದಿರಾ ತಿನ್ನುತ್ತಿರುವುದು ಮೆಕ್ಕೆಜೋಳ ಎಂದು ಸ್ಪಷ್ಟವಾಗಿ ಕಾಣುತ್ತದೆ.

ಗುಂಡಣ್ಣ

ದಿನ ಭವಿಷ್ಯ

ಶುಕ್ರವಾರ ನವೆಂಬರ್ 26, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಅನೂರಾಧಾ ಸಪ್ತಮೀ ಗಂ. 43-58 (ರಾ. 12-05) ಶುಕ್ರವಾರ ನಿತ್ಯ ನಕ್ಷತ್ರ ಆಶ್ಲೇಷಾ ಗಂ. 24-41 (ಹ. 4-22) ಐಂದ್ರ ನಾಮ ಯೋಗ ಗಂ. 54-27 ಭದ್ರೆ ಕರಣ ಗಂ. 13-12 ವಿಷ ಗಂ. 55-50 ಅಮೃತ ಗಂ 19-34 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 : ಸೂರ್ಯೋದಯ: 6-26 ಸೂರ್ಯಾಸ್ತ: 5-47 ಅದೃಷ್ಟ ಸಂಖ್ಯೆ 5 8

ಮೇಷ: ಚುರುಕಿನಿಂದ ಕಾರ್ಯಪ್ರವೃತ್ತರಾಗಿ ಯಶಸ್ಸನ್ನು ಗಳಿಸುವಿರಿ. ಉದಾಸೀನತೆ ಯಾವುದೇ ಕಾರಣಕ್ಕೂ ಸಲ್ಲದು. ಸಕಾಲದಲ್ಲಿ ಆದಾಯದಲ್ಲಿ ವೃದ್ಧಿಯಾಗಿ ತೃಪ್ತಿಯ ಹಿತಾನುಭವ ಅನುಭವಿಸುವಿರಿ.

ವೃಷಭ: ಕೈಗೊಂಡ ದೊಡ್ಡ ದೊಡ್ಡ ಯೋಜನೆಗಳಿಗೆ ವಿಘ್ನಗಳುಂಟಾಗದಂತೆ ಎಚ್ಚರಿಕೆ ಅಗತ್ಯ. ಗಂಭೀರ ನಡವಳಿಕೆಯಿಂದ ಉನ್ನತ ವ್ಯಕ್ತಿತ್ವದ ನಿರ್ಮಾಣ. ಅಧಿಕಾರ ಗೌರವ ಲಾಭವು ಉಂಟಾಗಲಿದೆ.

ಮಿಥುನ: ಜಾಣ್ಮೆಯಿಂದ ಕಷ್ಟಸಾಧ್ಯವಾದುದರ ಸಾಧನೆ. ಅಧಿಕಾರ ಪ್ರಾಪ್ತಿಯ ಜೊತೆಗೆ ಕಷ್ಟದಲ್ಲಿರುವವರಿಗೆ ಸಹಾಯ ಹಸ್ತ ನೀಡಿ ತೃಪ್ತಿ ಹೊಂದುವಿರಿ. ಆಸೆ ಆಕಾಂಕ್ಷೆಗಳು ನೆರವೇರಿದ ಸಂಭ್ರಮ.

ಕರ್ಕಾಟಕ: ಹುಚ್ಚು ಓಟದಿಂದ ಕೂಡಿದ ವ್ಯಾಪಾರ ವ್ಯವಹಾರಗಳು ಒಂದು ಹಂತಕ್ಕೆ ಬರಲಿವೆ. ಜವಾಬ್ದಾರಿಯ ಸ್ಥಾನವೊಂದನ್ನು ಅಲಂಕರಿಸಬೇಕಾದೀತು. ಆತ್ಮವಿಶ್ವಾಸದಿಂದಾಗಿ ಜೀವನದ ದಿಕ್ಕು ಬದಲಾವಣೆ.

ಸಿಂಹ: ಅತ್ಯಂತ ಶುಭದಿನವಾಗಿದ್ದು, ಹಮ್ಮಿಕೊಂಡ ಕೆಲಸ ಕಾರ್ಯಗಳಲ್ಲಿ ಹಿಂಜರಿಕೆಯಿಲ್ಲದೆ ಮುನ್ನಡೆ ಅನುಭವಿಸುವಿರಿ. ಮೃದುವಾದ ಮಾತುಗಳ ಮೂಲಕ ಮುಕ್ತ ಚರ್ಚೆಗಳಲ್ಲಿ ಭಾಗವಹಿಸುವಿರಿ. ವ್ಯಾಪಾರಸ್ಥರಿಗೆ ಮುನ್ನಡೆ.

ಕನ್ಯಾ: ಗುರಿಸಾಧನೆಗಾಗಿ ತಾಳ್ಮೆ ವಹಿಸುವುದು ಉತ್ತಮ. ವೃತ್ತಿ ಜೀವನದಲ್ಲಿನ ತೊಡಕಿನ ನಿವಾರಣೆಗಾಗಿ ಸಹಾಯ ಪಡೆಯುವ ಸಾಧ್ಯತೆ. ತೊಡಕಿನ ನಿವಾರಣೆಗಾಗಿ ಯೋಗ್ಯ ನಿರ್ಣಯ ಕೈಗೊಳ್ಳುವ ಸಾಧ್ಯತೆ.

ತುಲಾ: ವಿರೋಧಿಗಳ ಸಂಚು ಫಲಿಸದು. ಸಮಸ್ಯೆಗಳಿಂದ ಹೊರಬರುವುದಕ್ಕಾಗಿ ಇಮ್ಮಡಿ ಉತ್ಸಾಹದಿಂದ ಮುನ್ನುಗ್ಗಿ. ನಿರಾಶರಾಗದೆ ಆಶಾವಾದ ಬೆಳೆಸಿಕೊಳ್ಳುವುದು ಉತ್ತಮ. ಹಿರಿಯರ ಮಾತನ್ನು ಗೌರವಿಸಿ.

ವೃಶ್ಚಿಕ: ಹೊಸ ಹೊಸ ಆದಾಯದ ದಾರಿಯಿಂದಾಗಿ ಮಾನಸಿಕ ನೆಮ್ಮದಿ. ರಾಜಕೀಯದಲ್ಲಿ ಹೊಸ ಮಾರ್ಗ ಗೋಚರವಾಗಲಿದೆ. ಹೊಸ ಹೊಸ ಯೋಜನೆಗಳ ರೂಪುರೇಷೆಗಳನ್ನು ರಚಿಸಲು ಉತ್ತಮ ಕಾಲ.

ಧನು: ವೃತ್ತಿಯಲ್ಲಿ ನಿರೀಕ್ಷಿತ ಬದಲಾವಣೆ ಕಂಡುಬರಬಹುದು. ಆಸೆಪಟ್ಟು ನಿರ್ವಹಿಸಿದ ಕೆಲಸಕಾರ್ಯಗಳು ಸುಗಮವಾಗಿ ನೆರವೇರುವುದು. ಅನಗತ್ಯ ಭಯದಿಂದ ಮುಕ್ತರಾಗಿ ನಿರಾಳತೆ ಕಂಡುಬರುವುದು.

ಮಕರ: ಬದುಕಿಗೆ ಸಂಬಂಧಿಸಿದ ವಿಚಾರಗಳ ಬಗ್ಗೆ ಮಹತ್ವದ ತೀರ್ಮಾನ ಕೈಗೊಳ್ಳುವಿರಿ. ಅಪೇಕ್ಷಿತರ ಭೇಟಿಯ ಸಾಧ್ಯತೆ. ಒಪ್ಪಂದ ವಿಚಾರಗಳಲ್ಲಿ ಯಶಸ್ಸನ್ನು ಸಾಧಿಸುವಿರಿ.

ಕುಂಭ: ಸಹೋದ್ಯೋಗಿಗಳ ಇಚ್ಛೆ ಪೂರೈಕೆಗಾಗಿ ಶಕ್ತಿಮೀರಿ ಶ್ರಮ ವಹಿಸುವಿರಿ. ಕೆಲಸ ಕಾರ್ಯಗಳಲ್ಲಿ ಒತ್ತಡ ವಿಲ್ಲದೆ ನಿರಾಳತೆ. ದೂರಾಲೋಚನೆಯಿಂದಾಗಿ ಸಂಭವಿಸಬಹುದಾದ ಅವಘಡಗಳಿಂದ ಪಾರಾಗುವಿರಿ.

ಮೀನ: ಇಚ್ಛಾಶಕ್ತಿಯ ಬಲದಿಂದಾಗಿ ಕೈಗೊಂಡ ಯೋಜನೆಗಳು ಉತ್ತಮ ಹಂತವನ್ನು ತಲುಪಿ ಹೆಚ್ಚಿನ ಸಮಾಧಾನ ದೊರೆಯಲಿದೆ. ನೆರೆಹೊರೆಯವರೊಡನೆ ಉತ್ತಮ ಬಾಂಧವ್ಯ ವೃದ್ಧಿ.

ನಿಮ್ಮ ಜನ್ಮದಿನ 26-ನವೆಂಬರ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಆಡಳಿತಗಾರರಿಗೆ, ರಾಜಕಾರಣಿಗಳಿಗೆ, ಹಿರಿಯ ಅಧಿಕಾರಿಗಳಿಗೆ, ಉನ್ನತ ಸ್ಥಾನದಲ್ಲಿರುವವರಿಗೆ ಹೆಚ್ಚಿನ ಜವಾಬ್ದಾರಿಯೊಂದಿಗೆ ಉನ್ನತ ಸ್ಥಾನಮಾನಗಳು ಒದಗಿ ಬರುವವು. ರೈತಾಪಿ ವರ್ಗದವರಿಗೆ ಪರಿಸರ ವ್ಯತ್ಯಯದಿಂದಾಗಿ ಸ್ವಲ್ಪಮಟ್ಟಿನ ಆತಂಕ ಸೃಷ್ಟಿಯಾಗುವುದು.

ಬೆರಗಿನ ಬೆಳಕು

ಗುರುರಾಜ ಕರಜಗಿ

ಕರುಣೆಗೆ ಕೃತಜ್ಞತೆ

ದೊರೆಗೆ ನೀಂ ಬಿನ್ನಯಿಸೆ ನೂರೆಂಟು ಬಯಕೆಗಳ|
ಸರಿ ತನಗೆ ತೋರ್ದನಿತನ್ ಅದರೊಳವನೀವಂ||
ಅರಿಕೆಯೆಲ್ಲವ ನಡಸದಿರೆ ದೊರೆಯೆ ಸುಳ್ಳಹನೆ?||
ಕರುಣೆ ನಿರ್ಬಂಧವೇಂ? – ಮಂಕುತಿಮ್ಮ ||506||

ಪದ-ಅರ್ಥ: ಬಿನ್ನಯಿಸೆ (ಬೇಡಿದರೆ), ತೋರ್ದನಿತನ್ = ತೋರ್ದ (ತೋರಿದ) + ಅನಿತನ್ (ಕೆಲವನ್ನು), ಅದರೊಳವನೀವಂ = ಅದರೊಳ್ (ಅದರಲ್ಲಿ) + ಅವನು + ಈವಂ (ನೀಡುತ್ತಾನೆ), ಅರಿಕೆಯೆಲ್ಲವ = ಅರಿಕೆ (ಬೇಡಿಕೆ) + ಎಲ್ಲವ, ನಿರ್ಬಂಧವೇಂ = ಬಲವಂತವೇ

ವಾಚ್ಯಾರ್ಥ: ರಾಜನಿಗೆ ನೀನು ನೂರೆಂಟು ಬಯಕೆಗಳನ್ನು ಬೇಡಿದರೆ, ತನಗೆ ಸರಿ ಎಂದು ತೋಚಿದ ಕೆಲವನ್ನು ಆತ ನೀಡುತ್ತಾನೆ. ಕೇಳಿದ್ದ ಎಲ್ಲವನ್ನು ಆತ ನಡೆಸದಿದ್ದರೆ, ಆತ ರಾಜನಿದ್ದದ್ದು ಸುಳ್ಳೇ? ಕರುಣೆ ಏನು ಬಲವಂತವೇ?

ವಿವರಣೆ: ಒಂದು ಸುಂದರವಾದ ಚಿತ್ರವನ್ನು ಕಗ್ಗ ನೀಡುತ್ತದೆ. ನಮ್ಮ ಬಯಕೆಗಳಿಗೆ ಕೊನೆಯೇ ಇಲ್ಲ. ಒಬ್ಬ ಮನುಷ್ಯ ತನ್ನ ರಾಜ್ಯದ ದೊರೆಯ ಮುಂದೆ ಹೋಗಿ ತನ್ನ ಬಯಕೆಗಳ ಪಟ್ಟಿಯನ್ನಿಟ್ಟು ಬೇಡಿಕೊಂಡರೆ ರಾಜ ಏನು ಮಾಡುತ್ತಾನೆ? ಪಟ್ಟಿಯನ್ನು ಗಮನಿಸಿ, ಅದರೊಂದಿಗೆ, ಬೇಡಿದವನ ಯೋಗ್ಯತೆಯನ್ನು ತಾಳೆ ಹಾಕಿ, ಬೇಡಿಕೆಗಳಲ್ಲಿ ಯಾವುದು ಯೋಗ್ಯವೋ, ಅವನ ಶಕ್ತಿಗೆ ಹಿತವೋ ಅದನ್ನು ನೋಡಿ ಕೆಲವನ್ನು ಪೂರೈಸಬಹುದು. ಕೇಳಿದ್ದನ್ನೆಲ್ಲ ಕೊಡಲಾರ. ಹಾಗೆ ಕೊಡದೆ ಹೋದರೆ ಅವನು ರಾಜನಾದದ್ದು ಸುಳ್ಳೇ? ಕರುಣೆಯಿಂದ ನೀಡುವುದಕ್ಕೆ ಬಲವಂತ ಸಲ್ಲದು. ಈ ಉದಾಹರಣೆಯಲ್ಲಿ ಬೇಡುವವ ಮತ್ತು ರಾಜನ ಚಿತ್ರಣವಿದ್ದರೂ, ಅದರ ಹಿನ್ನಲೆಯ ಆಶಯ ಮನುಷ್ಯ ಮತ್ತು ಭಗವಂತನ ಸಂಬಂಧವೇ ಆಗಿದೆ. ಮನುಷ್ಯನಿಗೆ ಸಾವಿರಾರು ಬಯಕೆಗಳು. ನಮ್ಮ ಪ್ರತಿಯೊಂದು ಪ್ರಾರ್ಥನೆ, ಪೂಜೆಯಲ್ಲಿ, ಬೇಡಿಕೆಗಳ ಪಟ್ಟಿಯೇ ಇರುತ್ತದೆ. ದೇವರು ಎಲ್ಲ ಆಶಯಗಳನ್ನು ಪೂರೈಸುವುದಿಲ್ಲ. ಬಹುಶಃ ಅದಕ್ಕೆ ಎರಡು ಕಾರಣಗಳು. ಮೊದಲನೆಯದು, ಎಲ್ಲರ ಬೇಡಿಕೆಗಳನ್ನು ನಡೆಸುತ್ತ ಬಂದರೆ ಜಗತ್ತಿನ ವ್ಯವಸ್ಥೆ ತಪ್ಪಿ ಹೋಗುತ್ತದೆ. ಯಾಕೆಂದರೆ ಒಬ್ಬರ ಬಯಕೆ, ಮತ್ತೊಬ್ಬರ ಅವಶ್ಯಕತೆಗೆ ವಿರುದ್ಧವಾಗಿರಬಹುದು. ಎರಡನೆಯದು, ಬೇಡಿಕೆಯ ಈಡೇರಿಕೆಯಿಂದ ಅವನಿಗೆ ತೊಂದರೆಯೇ ಆಗಬಹುದು. ನಾವು ಪುರಾಣಗಳಲ್ಲಿ ಓದಿಲ್ಲವೇ? ಭಸ್ಮಾಸುರ, ಹಿರಣ್ಯಕಶಿಪು, ಸುಂದ-ಉಪಸುಂದರು ಏನು ಬೇಕೆಂಬುದು ತಿಳಿಯದೆ ವರ ಬೇಡಿ ಪಡೆದು ನಾಶವಾದರು. ಇದರೊಂದಿಗೆ ನಾವು ಮಾಡಿದ ಕರ್ಮಫಲವೊಂದಿದೆ. ಅದನ್ನು ದಾಟುವಂತಿಲ್ಲ. ಇವನ್ನೆಲ್ಲ ಗಮನಿಸಿ ದೇವರು ನಾವು ಬೇಡಿದವುಗಳಲ್ಲಿ ಕೆಲವೊಂದನ್ನು ಮಾತ್ರ ಕರುಣೆಯಿಂದ ದಯಪಾಲಿಸುತ್ತಾನೆ. ಅದು ಕರುಣೆ, ಏಕೆಂದರೆ ಅದರಿಂದಲೇ ನಮಗೆ ಒಳಿತು. ಅದು ಆ ಕ್ಷಣಕ್ಕೆ ತೋರಲಿಕ್ಕಿಲ್ಲ. ಕೆಲಸಮಯದ ನಂತರ ಹಾಗೆ ಆದದ್ದು ಒಳ್ಳೆಯದೇ ಎನ್ನಿಸೀತು. ಕರುಣೆಯಿಂದ ನೀಡಿದ್ದನ್ನು ವಿನಮ್ರತೆಯಿಮದ ಸ್ವೀಕರಿಸಬೇಕು. ಕರುಣೆಯನ್ನು ಬಲವಂತದಿಂದ, ಒತ್ತಾಯದಿಂದ ಕೇಳಲಾಗುತ್ತದೆಯೇ?

ಪದಬಂಧ 4789 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕದಲದೇ ಇರುವಂಥದ್ದು (2)
3.ನೂಲುವ ರಾಟೆ (3)
5.ಮರದ ಸಮೀಪ ನಡೆದ ಕಾಳಗ (3)
7.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
9.ಗೆಲ್ಲಿಸಲು ಬಂದಾತ ತೋರಿದ ಅತೀ ಪರಿಚಯ (3)
10.ದೂರವೇನಿಲ್ಲ! ಬಹಳ ಹತ್ತಿರ! (3)
11.ಯುದ್ಧ ಮಾಡಲು ಸಜ್ಜಾದ ಭೂಮಿ (4)
13.ಒರಟ ಹಿಡಿರುವುದೆಲ್ಲಾ ನಿಸ್ಸಾರವಾದುದು! (3)
15.ಜೂಜಿನಲ್ಲಿ ಒಡ್ಡುವ ಪಣ (3)
16.ಜರೂರಾಗಿ ಹಾಕಿದ ಸಹಿ (2)

ಮೇಲಿಂದ ಕೆಳಕ್ಕೆ
2.ಭರವಸೆ ನೀಡಿದಾಗ ಹೆಚ್ಚಿದ ವೇಗ! (3)
3.ಚರ್ಮದ ಕೆಲಸಗಾರ (3)
4.ಮಂಗಳಾರತಿಯಲ್ಲಿ ಉರಿಸುವ ಸುಗಂಧ ದ್ರವ್ಯ (3)
6.ಕಡೆದ ಮೊಸರು (3)
8.ಚಿಟ್ಟೆಯಿಲ್ಲಿ ತಿರುವು ಮುರುವಾಗಿದೆ (3)
9.ಸರ ತಂದವನಿಗೆ ತೋರಿಸಿದ ಆದರ (3)
10.ಸಮೀಪದಲ್ಲಿಯೇ ಗಾಳಿ ಬೀಸುತ್ತಿದೆ (3)
12.ಗರ ಬಡಿದವನಿರುವ ಗವಿ (3)
13.ಪದ್ಯಗಳ ಸಾಲು (3)
14.ಗಂಡು ಕುರಿ ಇಲ್ಲಿದೆ (3)



4788ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸಾಕ್ಷಿಗಾರ 3.ಪರೋಕ್ಷ 4.ವಿಶಾರದ 6.ರಥ 7.ಅಡಾವುಡಿ 8.ಸಹಜ 9.ಅನುಮತಿ 12.ಕಂದು 13.ಕನ್ನಡಕ 15.ರಂಜಕ 16.ಡಮರುಗ

ಮೇಲಿಂದ ಕೆಳಕ್ಕೆ: 1.ಸಾಕ್ಷರತೆ 2.ರವಿ 3.ಪಕಳೆ 4.ದಮ್ಮಡಿ 7.ಅಜ 8.ಸತಿ 9.ಅಳ್ಳಕ 10.ಚದುರಂಗ 11.ಭೌತಿಕ 14.ಕಡ

ಸುಡೊಕು 5175

4		7		8			2	
6		5		9		4	1	
	2		6				3	5
5			2		1	8		
	1				9		4	2
	6			2		3		
		8	9				5	7
	5			3	4		9	1

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5174 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

‘ಗೊಂದಲ ಮೂಡಿಸಿದ ಪಕ್ಷೇತರ ಅಭ್ಯರ್ಥಿ ಸ್ಪರ್ಧೆ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಜಿಲ್ಲೆಯಲ್ಲಿ ಮೇಲ್ಮನೆ ಚುನಾವಣೆ 3ನೇ ವ್ಯಕ್ತಿ ಸ್ಪರ್ಧೆಯಿಂದಾಗಿ ರಂಗೇರಿದೆ. ಬಿಜೆಪಿ, ಕಾಂಗ್ರೆಸ್ ನಾಯಕರಿಗೆ ಪಕ್ಷೇತರ ಅಭ್ಯರ್ಥಿ ಲಖನ್ ಜಾರಕಿಹೊಳಿ ಗೊಂದಲ ಮೂಡಿಸಿದ್ದಾರೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಹೇಳಿದರು.

ಸತೀಶ ಜಾರಕಿಹೊಳಿ

ರಾಯಬಾಗದಲ್ಲಿ ಗುರುವಾರ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಯಲ್ಲಿ ಅವರು, ‘ಅವರು ವಿವಿಧ ಮುಖಂಡರನ್ನು ಭೇಟಿಯಾಗಿ ಫೋಟೊ ಹಂಚಿಕೊಳ್ಳುತ್ತಾರೆ. ಗೊಂದಲ ಸಹಜ. ಪಕ್ಷದ ಮತದಾರರು ಅಭ್ಯರ್ಥಿ ಚನ್ನರಾಜ ಹಟ್ಟಿಹೊಳಿ ಬೆಂಬಲಿಸಬೇಕು’ ಎಂದರು.

‘ನಿಯಮಿತವಾಗಿ ಬರುವ ಬಸ್ ಬೇರೆ, ಜಾತ್ರೆ ಬಸ್ ಬೇರೆ ಎನ್ನುವುದನ್ನು ಮರೆಯಬಾರದು. ಅವರೀಗ ಹವಾನಿಯಂತ್ರಿತ ಬಸ್ ತಂದಿದ್ದಾರೆ. ಗೋಕಾಕ ಕರದಂಟಿದೆ. ನೀರಿನ ಬಾಟಲಿ ಇದೆ. ಹತ್ತಿ ಎನ್ನುತ್ತಾರೆ. ಇದಕ್ಕೆಲ್ಲಾ ಮರುಳಾಗಬಾರದು’ ಎಂದರು.

‘ಬಿಜೆಪಿಯದ್ದು ದಪ್ಪ ಚರ್ಮದ ಸರ್ಕಾರ. ಅದಕ್ಕೆ ಕಡಿವಾಣ ಹಾಕಲು ಚುನಾವಣೆಯಲ್ಲಿ ಪಾಠ ಕಲಿಸಬೇಕು. ಕೋವಿಡ್ ಸಂಕಷ್ಟ ಹಾಗೂ ಪ್ರವಾಹದ ಸಂದರ್ಭದಲ್ಲಿ ನೆರವಾಗಲು ಬಾರದವರು ಈಗ ಮತ ಕೇಳಲು ಬರುತ್ತಿದ್ದಾರೆ’ ಎಂದು ಲೇವಡಿ ಮಾಡಿದರು.

ಶಾಸಕಿ ಲಕ್ಷ್ಮಿ ಹೆಬ್ಬಾಳಕರ, ‘ಮಹಿಳೆಯನ್ನು ಗೌರವಿಸುವ ಸಂಸ್ಕೃತಿ ನಮ್ಮದು. ಒಬ್ಬರು ಥೂ ಥೂ... ಎಂದು ಹೇಗೆ ಗೌರವಿಸಿದ್ದಾರೆ ಎಂಬುದನ್ನು ನೀವೇ ಗಮನಿಸಿದ್ದೀರಿ’ ಎಂದು ಗೋಕಾಕ ಶಾಸಕ ರಮೇಶ ಜಾಕಿಹೊಳಿ ಹೆಸರು ಪ್ರಸ್ತಾಪಿಸದೆ ಟೀಕಿಸಿದರು.

ಮೈಸೂರು–ಚಾಮರಾಜನಗರ ಕ್ಷೇತ್ರ ನಾಮಪತ್ರ ಪುರಸ್ಕೃತ; ಕಾಂಗ್ರೆಸ್ ನಿರಾಳ

ಮೈಸೂರು: ವಿಧಾನ ಪರಿಷತ್‌ಗೆ ಚುನಾವಣೆಯಲ್ಲಿ ಮೈಸೂರು–ಚಾಮರಾಜನಗರ ದ್ವಿಸದಸ್ಯ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಡಿ.ತಿಮ್ಮಯ್ಯ ಅವರ ನಾಮಪತ್ರ ಗುರುವಾರ ಪುರಸ್ಕೃತಗೊಂಡಿದೆ. ಪಕ್ಷದ ನಾಯಕರಲ್ಲಿ ನಿರಾಳ ಭಾವ ಮೂಡಿದೆ.

ತಿಮ್ಮಯ್ಯ ಅವರ ನಾಮಪತ್ರದಲ್ಲಿ ದೋಷವಿದೆ ಎಂದು ಬಿಜೆಪಿ ಅಭ್ಯರ್ಥಿ ಆರ್.ರಘು (ಕೌಟಿಲ್ಯ) ಬುಧವಾರ ಆಕ್ಷೇಪಣೆ ಸಲ್ಲಿಸಿದ್ದರು. ಚುನಾವಣಾಧಿಕಾರಿಯಾಗಿರುವ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಅವರು ಗುರುವಾರ ಎರಡೂ ಕಡೆಯವರ ವಾದ ಪ್ರತಿವಾದ ಆಲಿಸಿ, ನಾಮಪತ್ರ ಕ್ರಮಬದ್ಧವಾಗಿರುವುದಾಗಿ ಪ್ರಕಟಿಸಿದರು.

‘ಬಿಜೆಪಿ ಅಭ್ಯರ್ಥಿಯ ಮೂರೂ ಆಕ್ಷೇಪಣೆಗಳನ್ನು ಚುನಾವಣಾಧಿಕಾರಿ ತಳ್ಳಿಹಾಕಿದ್ದಾರೆ. ಅಭ್ಯರ್ಥಿಯ ನಾಮಪತ್ರ ಅಂಗೀಕರಿಸಿದ್ದಾರೆ’ ಎಂದು ಕಾಂಗ್ರೆಸ್ ಅಭ್ಯರ್ಥಿ ಪರ ವಾದ ಮಂಡಿಸಿದ ಹೈಕೋರ್ಟ್‌ನ ಹಿರಿಯ ವಕೀಲ ಎ.ಎಸ್. ಪೊನ್ನಣ್ಣ ಹೇಳಿದರು.

‘ಟೈಪಿಂಗ್ ವೇಳೆ ನಾಮಪತ್ರದಲ್ಲಿ ಸಣ್ಣ ಲೋಪವಾಗಿತ್ತು. ಆ ಬಗ್ಗೆ ವಕೀಲರು ಮನವರಿಕೆ ಮಾಡಿಕೊಟ್ಟರು. ನನ್ನ ನಾಮಪತ್ರ ಸ್ವೀಕೃತವಾಯಿತು. ಬಿಜೆಪಿಯವರು ಕೆಟ್ಟಮನಸ್ಸಿನವರು, ತಪ್ಪು ಹುಡುಕುವ ಕೆಲಸ ಮಾಡಿದ್ದಾರೆ’ ಎಂದು ತಿಮ್ಮಯ್ಯ ಪ್ರತಿಕ್ರಿಯಿಸಿದರು.

ಬಿಜೆಪಿ ಅಭ್ಯರ್ಥಿ ಆರ್.ರಘು ಅವರು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡದೆಯೇ ಚುನಾವಣೆಗೆ ಸ್ಪರ್ಧಿಸಿರುವುದು ನೀತಿ ಸಂಹಿತೆಯ ಉಲ್ಲಂಘನೆಯಾಗಿರುವುದರಿಂದ, ಅವರ ನಾಮಪತ್ರವನ್ನು ತಿರಸ್ಕರಿಸಬೇಕು ಎಂದು ಕೆಪಿಸಿಸಿ ಕಾರ್ಯದರ್ಶಿ ಎಂ.ಲಕ್ಷ್ಮಣ ಅವರು ಚುನಾವಣಾಧಿಕಾರಿಗೆ ಆಕ್ಷೇಪಣೆ ಸಲ್ಲಿಸಿದ್ದಾರೆ.

‘ನಾನು ಜೆಡಿಎಸ್ ಪ್ರಾಡಕ್ಟ್ ಅಲ್ಲ’

ಎಚ್.ಎಂ. ವಿಶ್ವನಾಥ್

ಸಕಲೇಶಪುರ: ‘ನಾನು ಜೆಡಿಎಸ್ ಪ್ರಾಡಕ್ಟ್ ಅಲ್ಲ. ಆಲೂರು–ಸಕಲೇಶಪುರ ವಿಧಾನಸಭಾ ಕ್ಷೇತ್ರದಲ್ಲಿ ನಾನು ಕಟ್ಟಿದ ಕೋಟೆಗೆ ಜೆಡಿಎಸ್ ಒಕ್ಕಲು ಹಾಕಿದ್ದಾರೆ’ ಎಂದು ವಿಧಾನ ಪರಿಷತ್ ಬಿಜೆಪಿ ಅಭ್ಯರ್ಥಿ ಎಚ್.ಎಂ.ವಿಶ್ವನಾಥ್ ದೂರಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು, ‘ಶಾಸಕ ಎಚ್.ಡಿ.ರೇವಣ್ಣ ನನ್ನನ್ನು ಪಕ್ಷದ ಪ್ರಾಡಕ್ಟ್ ಎಂದು ಟೀಕಿಸಿದ್ದರು. ನನ್ನ ಸಾರ್ವಜನಿಕ ಜೀವನ ಆರಂಭವಾಗಿದ್ದೇ ಸಂಘ ಪರಿವಾರದಿಂದ, ನನ್ನದೇ ಹೋರಾಟದಿಂದ ನಾಯಕತ್ವ ಗಳಿಸಿದ್ದೇನೆ’ ಎಂದು ಪ್ರತಿಪಾದಿಸಿದರು.

‘ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಪಕ್ಷಕ್ಕೆ ಆಹ್ವಾನಿಸಿ ಟಿಕೆಟ್ ನೀಡಿದ್ದರು. ಜಿಲ್ಲೆಯಲ್ಲಿ ವಿಧಾನಸಭೆ ಕ್ಷೇತ್ರ ಸೇರಿದಂತೆ ವಿಇಧೆಡೆ ಆಡಳಿತವನ್ನು ಜೆಡಿಎಸ್ ತೆಕ್ಕೆಗೆ ತಂದಿದ್ದೆ. ಅಂದಿನ ಬುನಾದಿಯೇ ಇಂದಿಗೂ ಆ ಪಕ್ಷಕ್ಕೆ ಶ್ರೀರಕ್ಷೆಯಾಗಿದೆ’ ಎಂದರು.

‘ಗೌಡರ ಕುಟುಂಬದಲ್ಲಿ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಸೇರಿ ಏಳು ಮಂದಿಗೆ ಅಧಿಕಾರ ಸಿಕ್ಕಿದೆ. ಎಂಟನೆಯವರಿಗೆ ಅಧಿಕಾರ ನೀಡಲು ಹೊರಟಿದ್ದಾರೆ. ಅವರ ಕುಟುಂಬ ರಾಜಕಾರಣದ ದಾಹ ಜಿಲ್ಲೆಯ ಜನರಿಗೆ ಹೇಸಿಗೆ ಮೂಡಿಸಿದೆ’ ಎಂದರು.

‘ಚುನಾವಣೆ ವೇಳೆ ಕಾಂಗ್ರೆಸ್ ನಾಯಕರಿಗೆ ಜೆಡಿಎಸ್ ಜ್ವರ’

ಪ್ರಜಾವಾಣಿ ವಾರ್ತೆ

ಶಿಡ್ಲಘಟ್ಟ (ಚಿಕ್ಕಬಳ್ಳಾಪುರ): ‘ಚುನಾವಣಾ ಸಮಯದಲ್ಲಿ ಕಾಂಗ್ರೆಸ್ ನಾಯಕರಿಗೆ ಜೆಡಿಎಸ್ ಜ್ವರ ಶುರುವಾಗುತ್ತದೆ. ಬಿಜೆಪಿ ಮತ್ತು ಜೆಡಿಎಸ್ ಒಳಒಪ್ಪಂದ ಮಾಡಿಕೊಂಡಿವೆ ಎಂದು ಅಪಪ್ರಚಾರ ಆರಂಭಿಸುತ್ತಾರೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಗುರುವಾರ ಲೇವಡಿ ಮಾಡಿದರು.

ತಾಲ್ಲೂಕಿನ ಮೇಲೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚುನಾವಣೆ ಸಂದರ್ಭದಲ್ಲಿ ಮಾತ್ರ ಕಾಂಗ್ರೆಸ್ ನಾಯಕರು ಒಳಒಪ್ಪಂದದ ಅಪಪ್ರಚಾರ ಮಾಡುತ್ತಾರೆ. ನಂತರ ಮರೆತು ಹೋಗುತ್ತಾರೆ. ನಮ್ಮ ಅಭ್ಯರ್ಥಿಗಳು ಸ್ಪರ್ಧಿಸಿರುವ ಕಡೆ ಬಿಜೆಪಿ ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ನಾವು ಅವರ ವಿರುದ್ಧವೂ ಹೋರಾಡಬೇಕಿದೆ’ ಎಂದು ಹೇಳಿದರು.

‘ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರಾಗಿದ್ದವರು ಕಳೆದ ಲೋಕಸಭಾ ಚುನಾವಣೆಯಲ್ಲಿ ಹಾಸನದಿಂದ ಬಿಜೆಪಿ ಅಭ್ಯರ್ಥಿಯಾಗಿದ್ದರು. ಈಗ ಅವರ ಮಗನಿಗೆ ಕೊಡಗು ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ನೀಡಿದೆ. ಈಗ ಸಚಿವರಾಗಿರುವವರ ಆಪ್ತ ಸಹಾಯಕರಾಗಿದ್ದವರು ಈಗ ಮಂಡ್ಯ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಆಗಿದ್ದಾರೆ. ಇದು ಕಾಂಗ್ರೆಸ್, ಬಿಜೆಪಿ ನಡುವಣ ಹೊಂದಾಣಿಕೆ ತಿಳಿಸುತ್ತದೆ’ ಎಂದರು.

ಮಳೆ ಹಾನಿ ಪ್ರದೇಶಗಳಿಗೆ ಸಿಎಂ ಮತ್ತು ಸಚಿವರು ಬಂದಾ ಪುಟ್ಟ ಹೋದ ಪುಟ್ಟ ಎನ್ನುವಂತಿದೆ. 3 ವರ್ಷಗಳ ಹಿಂದೆ ಆದ ಬೆಳೆ ಹಾನಿಗೆ ಇಂದಿಗೂ ಪರಿಹಾರ ನೀಡಿಲ್ಲ. ಇದು ಘೋಷಣೆಗಳಿಗೆ ಸೀಮಿತವಾದ ಸರ್ಕಾರ

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಗೋವಾದಲ್ಲಿ ನಡತೆ ಸಂಹಿತೆ ರೂಪಿಸಿ: ಬಿಜೆಪಿ ಅಧ್ಯಕ್ಷ ಜೆ.ಪಿ ನಡ್ಡಾ ಕರೆ

ಪಣಜಿ: ಗೋವಾದಲ್ಲಿ ಅಧರ್ಮವನ್ನು ತಡೆಯಬೇಕು ಮತ್ತು ರಾಜ್ಯವನ್ನು ಮತ್ತೆ ಧರ್ಮದ ಹಾದಿಗೆ ತರಬೇಕು. ಸಮಾಜಕ್ಕೆ ಪ್ರಯೋಜನವಾಗುವ ರೀತಿಯಲ್ಲಿ ನಡತೆ ಸಂಹಿತೆಯನ್ನು ರೂಪಿಸಬೇಕು ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ.

ಮುಂದಿನ ವರ್ಷದ ಆರಂಭದಲ್ಲಿ ವಿಧಾನಸಭೆ ಚುನಾವಣೆ ನಡೆಯಲಿರುವ ಗೋವಾಕ್ಕೆ ಅವರು ಎರಡು ದಿನಗಳ ಭೇಟಿಗಾಗಿ ಬಂದಿದ್ದಾರೆ. ಚುನಾವಣೆಯಲ್ಲಿ ಪಕ್ಷವು ಅಧಿಕಾರಕ್ಕೆ ಮರಳುವ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ. ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರ ಕ್ಷೇತ್ರ ಅಮೋನಾದಲ್ಲಿ ನಡೆದ ಸಭೆಯಲ್ಲಿ ನಡ್ಡಾ ಮಾತನಾಡಿದರು.

ವಾಲ್‌ಪೋಯಿಯಲ್ಲಿ ನಡೆದ ಪಕ್ಷದ ಇನ್ನೊಂದು ಸಭೆಯಲ್ಲಿಯೂ ನಡ್ಡಾ ಭಾಗವಹಿಸಿದರು. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮತ್ತು ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಮಮತಾ ಬ್ಯಾನರ್ಜಿ, ದೆಹಲಿ ಮುಖ್ಯಮಂತ್ರಿ ಮತ್ತು ಎಎಪಿ ನಾಯಕ ಅರವಿಂದ ಕೇಜ್ರಿವಾಲ್ ಅವರ ವಿರುದ್ಧ ನಡ್ಡಾ ಹರಿಹಾಯ್ದರು. ಗೋವಾದಲ್ಲಿ ಅಸ್ತಿತ್ವ ಕಂಡುಕೊಳ್ಳಲು ಎಎಪಿ ಮತ್ತು ತೃಣಮೂಲ ಕಾಂಗ್ರೆಸ್ ಯತ್ನಿಸುತ್ತಿವೆ.

ಮದರಸಗಳು ಉಗ್ರರ ತಾಣ: ಉತ್ತರ ಪ್ರದೇಶ ಸಚಿವ ರಘುರಾಜ್ ಸಿಂಗ್

‘ಮದರಸಗಳು ಉಗ್ರರ ತಾಣಗಳಾಗಿವೆ. ಇವು ಉಗ್ರರನ್ನು ಸಿದ್ಧಪಡಿಸುತ್ತಿವೆ. ಮದರಸದಲ್ಲಿ ಕಲಿತವರು ಉಗ್ರರಾಗಿಯೇ ಹೊರಬರುತ್ತಾರೆ’ ಎಂದು ಉತ್ತರ ಪ್ರದೇಶದ ಕಾರ್ಮಿಕ ಸಚಿವ ರಘುರಾಜ್ ಸಿಂಗ್ ಹೇಳಿದ್ದಾರೆ.

ರಾಜ್ಯದಲ್ಲಿ ಮೊದಲು 250 ಮದರಸಗಳು ಮಾತ್ರ ಇದ್ದವು. ಈಗ ಅವುಗಳ ಸಂಖ್ಯೆ 22 ಸಾವಿರಕ್ಕೂ ಹೆಚ್ಚು ಎಂದು ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡುತ್ತಾ ಅವರು ಹೇಳಿದ್ದಾರೆ. ಜಮ್ಮು ಮತ್ತು ಕಾಶ್ಮೀರದಲ್ಲಿ 2016ರಲ್ಲಿ ಭದ್ರತಾ ಪಡೆಯ ಗುಂಡಿಗೆ ಬಲಿಯಾದ, ಹಿಜ್ಬುಲ್ ಮುಜಾಹಿದೀನ್ ಭಯೋತ್ಪಾದನಾ ಸಂಘಟನೆಯ ಕಮಾಂಡರ್ ಬುರ್ಹಾನ್ ವಾನಿ ಕೂಡ ರಾಜ್ಯದ ಮದರಸವೊಂದರ ಉತ್ಪನ್ನ ಎಂದು ಸಿಂಗ್ ಹೇಳಿದ್ದಾರೆ.

ಅವಕಾಶ ಸಿಕ್ಕರೆ ಎಲ್ಲ ಮದರಸಗಳನ್ನು ಮುಚ್ಚಿಸಲು ಹಿಂದೇಟು ಹಾಕುವುದಿಲ್ಲ ಎಂದು ಸಚಿವರು ತಿಳಿಸಿದ್ದಾರೆ. ರಾಜ್ಯದ ಮದರಸಗಳ ನವೀಕರಣ ಮತ್ತು ಆಧುನೀಕರಣ ಮಾಡಲಾಗುವುದು ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಘೋಷಿಸಿದ ಬೆನ್ನಿಗೇ ಸಚಿವರ ಈ ಹೇಳಿಕೆ ಹೊರಬಿದ್ದಿದೆ.

‘ಇದು ಬಿಜೆಪಿಯ ಮುಸ್ಲಿಂ ವಿರೋಧಿ ಮನಸ್ಥಿತಿಯನ್ನು ಬಿಂಬಿಸುತ್ತದೆ. ಸಚಿವರು ಒಬ್ಬರೇ ಅಲ್ಲ, ಬಿಜೆಪಿಯ ಹಲವು ಶಾಸಕರು ಕೂಡ ಹೀಗೆ ಮಾತನಾಡುತ್ತಾರೆ. ಅವರು ಮುಸ್ಲಿಮರ ವಿರುದ್ಧ ಆಕ್ಷೇಪಾರ್ಹ ರೀತಿಯಲ್ಲಿಯೇ ಮಾತನಾಡುತ್ತಾರೆ’ ಎಂದು ಎಸ್‌ಪಿಯ ಮುಖಂಡರೊಬ್ಬರು ಹೇಳಿದ್ದಾರೆ.

ಅಪ್ನಾ ದಳ, ಆರ್‌ಎಲ್‌ಡಿ ಬಳಿಕ ಜನವಾದಿ ಸೋಷಿಯಲಿಸ್ಟ್ ಪಕ್ಷದ ಜತೆಗೂ ಮೈತ್ರಿ ಮಾಡಿಕೊಂಡ ಅಖಿಲೇಶ್

ಜಾತಿ ಆಧಾರಿತ ಸಣ್ಣ ಪಕ್ಷಗಳ ಜತೆ ಎಸ್‌ಪಿ ನಂಟು

ಪ್ರಜಾವಾಣಿ ವಾರ್ತೆ

ಲಖನೌ: ಜಾತಿ ಆಧಾರಿತವಾಗಿರುವ ಸಣ್ಣ ಪಕ್ಷಗಳ ಜತೆ ಮೈತ್ರಿ ಮಾಡಿಕೊಳ್ಳುವ ಕಾರ್ಯತಂತ್ರವನ್ನು ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಇನ್ನಷ್ಟು ವಿಸ್ತರಿಸಿಕೊಂಡಿದ್ದಾರೆ. ಜನವಾದಿ ಸೋಷಿಯಲಿಸ್ಟ್ ಪಕ್ಷದ (ಜೆಎಸ್‌ಪಿ) ಅಧ್ಯಕ್ಷ ಸಂಜಯ್ ಚೌಹಾಣ್ ಜತೆಗೆ ಅಖಿಲೇಶ್ ಅವರು ಗುರುವಾರ ವೇದಿಕೆ ಹಂಚಿಕೊಂಡಿದ್ದಾರೆ. ಜೆಎಸ್‌ಪಿಗೆ ಚೌಹಾಣ್ ಸಮುದಾಯದ (ಇತರ ಹಿಂದುಳಿದ ವರ್ಗಗಳಲ್ಲಿ ಬರುವ ಜಾತಿ) ಬೆಂಬಲ ಇದೆ. ಉತ್ತರ ಪ್ರದೇಶದ ಪೂರ್ವ ಭಾಗದಲ್ಲಿ ಈ ಸಮುದಾಯದ ಜನರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಹಿಂದುಳಿದ ವರ್ಗದ ಜಾತಿಗಳೆಲ್ಲವೂ ಒಂದಾಗಿ ಬಿಜೆಪಿಯನ್ನು ಅಧಿಕಾರದಿಂದ ಉಚ್ಚಾಟಿಸಬೇಕು ಎಂದು ಅಖಿಲೇಶ್ ಅವರು ಎಸ್‌ಪಿ–ಜೆಎಸ್‌ಪಿ ಜಂಟಿ ಸಭೆಯನ್ನು ಉದ್ದೇಶಿಸಿ ಹೇಳಿದರು.

ವಿಮಾನ ನಿಲ್ದಾಣ ನಿರ್ಮಾಣದ ಹೊಸ ಯೋಜನೆ ಕೈಗೆತ್ತಿಕೊಂಡ ಕೇಂದ್ರ ಸರ್ಕಾರವನ್ನು ಅಖಿಲೇಶ್ ಟೀಕಿಸಿದ್ದಾರೆ. ವಿಮಾನ ನಿಲ್ದಾಣ ಅಭಿವೃದ್ಧಿಪಡಿಸಿ ಅದನ್ನು ಖಾಸಗಿ ಸಂಸ್ಥೆಗಳಿಗೆ ಮಾರುವುದೇ ಸರ್ಕಾರದ ಉದ್ದೇಶ ಎಂದು ಅವರು ಹೇಳಿದರು.

‘ಓಂ ಪ್ರಕಾಶ್ ರಾಜ್‌ಭರ್ ಅವರ ಸುಹೇಲ್‌ದೇವ್ ಭಾರತೀಯ ಸಮಾಜ ಪಕ್ಷ ಮತ್ತು ಕೃಷ್ಣಾ ಪಟೇಲ್ ಅವರ ಅಪ್ನಾ ದಳದ ಜತೆಗೆ ಈಗಾಗಲೇ ಮೈತ್ರಿ ಮಾಡಿಕೊಳ್ಳಲಾಗಿದೆ. ಈಗ, ಚೌಹಾಣ್ ಸಮುದಾಯವೂ ನಮ್ಮ ಜತೆಗೆ ಬಂದಿದೆ. ಇಷ್ಟೊಂದು ಪಕ್ಷಗಳ ಮೈತ್ರಿಕೂಟವನ್ನು ಯಾರೂ ಸೋಲಿಸಲಾಗದು’ ಎಂದು ಅಖಿಲೇಶ್ ಹೇಳಿದರು.

ಅಖಿಲೇಶ್ ಯಾದವ್ ಅವರು ಲಖನೌದಲ್ಲಿ ಗುರುವಾರ ನಡೆದ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ್ದರು ಪಿಟಿಐ ಚಿತ್ರ

‘ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲು ನಮ್ಮ ಸಮುದಾಯವು ನಿರ್ಧಾರ ಮಾಡಿದೆ. ಬಿಜೆಪಿಗೆ ನಾವು ಪಾಠ ಕಲಿಸಲೇಬೇಕು. ನಮ್ಮ ಸಮುದಾಯದ ಅಭಿವೃದ್ಧಿಯು ಬಿಜೆಪಿಗೆ ಬೇಕಾಗಿಲ್ಲ’ ಎಂದು ಸಂಜಯ್ ಚೌಹಾಣ್ ಹೇಳಿದರು.

ಉತ್ತರ ಪ್ರದೇಶದ ಪೂರ್ವ ಭಾಗದ 10ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಚೌಹಾಣ್ ಸಮುದಾಯದ ಮತಗಳ ಪ್ರಮಾಣ ಗಣನೀಯವಾಗಿದೆ.

ಮೌರ್ಯ ಮತ್ತು ಸೈನಿ ಸಮುದಾಯಗಳ ಬೆಂಬಲ ಹೊಂದಿರುವ ಮಹಾನ್ ದಳದ ಜತೆಗೂ ಅಖಿಲೇಶ್ ಮಾತುಕತೆ ಆರಂಭಿಸಿದ್ದಾರೆ.

ಒಂದೆಡೆ, ಇರುವ ವಿಮಾನ ನಿಲ್ದಾಣಗಳನ್ನು ಮಾರಲಾಗುತ್ತಿದೆ. ಇನ್ನೊಂದೆಡೆ ಹೊಸ ವಿಮಾನ ನಿಲ್ದಾಣಗಳನ್ನು ನಿರ್ಮಿಸಲಾಗುತ್ತಿದೆ. ಬಿಜೆಪಿಯನ್ನು ನಂಬುವುದು ಹೇಗೆ?

ಅಖಿಲೇಶ್ ಯಾದವ್, ಎಸ್‌ಪಿ ಮುಖ್ಯಸ್ಥ

ಈ ಮಧ್ಯೆ, ರಘುರಾಜ್ ಪ್ರತಾಪ್ ಸಿಂಗ್ ಅಲಿಯಾಸ್ ರಾಜಾ ಭಯ್ಯಾ ಅವರು ಎಸ್‌ಪಿ ನಾಯಕ ಮುಲಾಯಂ ಸಿಂಗ್ ಯಾದವ್ ಅವರನ್ನು ಗುರುವಾರ ಭೇಟಿಯಾದರು. ಸುಮಾರು 30 ನಿಮಿಷ ಅವರಿಬ್ಬರು ಚರ್ಚಿಸಿದ್ದಾರೆ. ಇದೊಂದು ಸೌಜನ್ಯದ ಭೇಟಿ ಎಂದು ಮಾಧ್ಯಮ ಪ್ರತಿನಿಧಿಗಳಿಗೆ ರಾಜಾ ಭಯ್ಯಾ ಅವರು ತಿಳಿಸಿದರು. ಇಬ್ಬರು ನಾಯಕರು ಮೈತ್ರಿಯ ಬಗ್ಗೆ ಚರ್ಚಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ರಾಜಾ ಭಯ್ಯಾ ಅವರು ಠಾಕೂರ್ ಸಮುದಾಯದ ಪ್ರಭಾವಿ ನಾಯಕ. ಉತ್ತರ ಪ್ರದೇಶದ ಪೂರ್ವ ಭಾಗದ ಹಲವು ಜಿಲ್ಲೆಗಳಲ್ಲಿ ಈ ಸಮುದಾಯದ ಜನಸಂಖ್ಯೆ ಗಣನೀಯವಾಗಿದೆ. ಎಸ್‌ಪಿ ಜತೆಗೆ ಮೈತ್ರಿ ಮಾಡಿಕೊಳ್ಳಲು ತಮಗೆ ಅಭ್ಯಂತರ ಇಲ್ಲ ಎಂದು ರಾಯಾ ಭಯ್ಯಾ ಅವರು ಈ ಹಿಂದೆಯೇ ಹೇಳಿದ್ದರು.

ಬ್ರಾಹ್ಮಣರು ಬಿಜೆಪಿ ಬಗ್ಗೆ ಬೇಸರಗೊಂಡಿದ್ದಾರೆ ಎಂದು ಹೇಳುವವರು ಹೇಳುತ್ತಲೇ ಇರಲಿ. ಸಮಾಜದ ಎಲ್ಲ ವರ್ಗಗಳ ಬಹುಸಂಖ್ಯಾತರು ಬಿಜೆಪಿ ಜತೆಗೇ ಇದ್ದಾರೆ

ಜಿತಿನ್ ಪ್ರಸಾದ, ಉತ್ತರ ಪ್ರದೇಶದ ಸಚಿವ

ಮತ್ತೆ ಜಿನ್ನಾ ಉಲ್ಲೇಖಿಸಿದ ಯೋಗಿ

‘ರಾಜ್ಯದಲ್ಲಿ ಬೆಳೆಯುವ ಕಬ್ಬಿನ ಸಿಹಿಯನ್ನು ಹೆಚ್ಚಿಸಬೇಕೇ ಅಥವಾ ಪಾಕಿಸ್ತಾನ ಸ್ಥಾಪಕ ಮೊಹಮ್ಮದ್ ಆಲಿ ಜಿನ್ನಾ ಅವರ ಅನುಯಾಯಿಗಳು ರಾಜ್ಯದಲ್ಲಿ ದುಷ್ಕೃತ್ಯ ಎಸಗಲು ಅವಕಾಶ ಸೃಷ್ಟಿಸಬೇಕೇ ಎಂಬುದನ್ನು ದೇಶವು ನಿರ್ಧರಿಸುವ ಸಮಯ ಬಂದಿದೆ’ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿದ್ದಾರೆ.

ಮಹಾತ್ಮ ಗಾಂಧಿ, ಸರ್ದಾರ್ ವಲ್ಲಭಭಾಯಿ ಪಟೇಲ್, ಜವಾಹರಲಾಲ್ ನೆಹರೂ, ಜಿನ್ನಾ ಮುಂತಾದವರು ದೇಶವು ಸ್ವಾತಂತ್ರ್ಯ ಪಡೆಯಲು ಕಾರಣ ಎಂದು ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಇತ್ತೀಚೆಗೆ ಹೇಳಿದ್ದರು. ಅದನ್ನು ಉಲ್ಲೇಖಿಸಿ ಯೋಗಿ ಅವರು ಅಖಿಲೇಶ್ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದ್ದಾರೆ.

ಬಿಎಸ್‌ಪಿ ತೊರೆದ ಶಾಸಕಾಂಗ ಪಕ್ಷದ ನಾಯಕ

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆಯಲ್ಲಿ ಬಿಎಸ್‌ಪಿ ಶಾಸಕಾಂಗ ಪಕ್ಷದ ನಾಯಕ ಶಾ ಆಲಂ ಅವರು ಶಾಸಕ ಸ್ಥಾನ ಮತ್ತು ಪಕ್ಷದ ಸದಸ್ಯತ್ವಕ್ಕೆ ಗುರುವಾರ ರಾಜೀನಾಮೆ ನೀಡಿದ್ದಾರೆ. ಪಕ್ಷದ ಮುಖ್ಯಸ್ಥೆ ಮಾಯಾವತಿ ಅವರಿಗೆ ತಮ್ಮ ಮೇಲೆ ವಿಶ್ವಾಸ ಇಲ್ಲದ ಕಾರಣ ರಾಜೀನಾಮೆ ನೀಡಿದ್ದಾಗಿ ಹೇಳಿದ್ದಾರೆ. ಮುಂದೆ ಯಾವ ಪಕ್ಷಕ್ಕೆ ಸೇರಲಿದ್ದಾರೆ ಎಂಬುದನ್ನು ಅವರು ಬಹಿರಂಗಪಡಿಸಿಲ್ಲ. ಆಲಂ ಅವರು 2012 ಮತ್ತು 2017ರ ವಿಧಾನಸಭಾ ಚುನಾವಣೆಯಲ್ಲಿ ಮುಬಾರಕ್‌ಪುರ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿದ್ದರು.

ಬಿಎಸ್‌ಪಿ ಮುಖಂಡ ಲಾಲ್‌ಜಿ ವರ್ಮಾ ಅವರನ್ನು ಪಕ್ಷ ವಿರೋಧಿ ಚಟುವಟಿಕೆಗಳ ಆರೋಪದಲ್ಲಿ ಈ ವರ್ಷದ ಆರಂಭದಲ್ಲಿ ಪಕ್ಷದಿಂದ ಉಚ್ಚಾಟಿಸಲಾಗಿತ್ತು.

ಉತ್ತರಪ್ರದೇಶ: ಏಷ್ಯಾದ ಅತಿದೊಡ್ಡ ವಿಮಾನನಿಲ್ದಾಣಕ್ಕೆ ಶಂಕುಸ್ಥಾಪನೆ

ನೋಯಿಡಾ (ಪಿಟಿಐ): ಏಷ್ಯಾದ ಅತಿ ದೊಡ್ಡ ವಿಮಾನ ನಿಲ್ದಾಣವು ಉತ್ತರಪ್ರದೇಶದಲ್ಲಿ ಅಸ್ತಿತ್ವಕ್ಕೆ ಬರಲಿದೆ. ಮೊದಲ ಹಂತದ ನಿರ್ಮಾಣ ಕಾರ್ಯಕ್ಕೆ ₹34 ಸಾವಿರ ಕೋಟಿ ಹೂಡಿಕೆಯಾಗಲಿದ್ದು, ಕಾಮಗಾರಿಯು 2024ಕ್ಕೆ ಮುಗಿಯಲಿದೆ.

ನೊಯ್ಡಾ ಅಂತರರಾಷ್ಟ್ರೀಯ ವಿಮಾನನಿಲ್ದಾಣವು ಗೌತಮಬುದ್ಧನಗರ ಜಿಲ್ಲೆಯ ಜೆವರ್‌ನಲ್ಲಿ ನಿರ್ಮಾಣವಾಗಲಿದೆ. ಮೊದಲ ಹಂತದಲ್ಲಿ ವಾರ್ಷಿಕ 1.2 ಕೋಟಿ ಪ್ರಯಾಣಿಕರ ನಿರ್ವಹಣೆಯ ಸಾಮರ್ಥ್ಯವನ್ನು ಹೊಂದಿರಲಿದೆ.

ಗುರುವಾರ ನಡೆದ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ನಿರ್ದೇಶನದಂತೆ ಇಲ್ಲಿ ವಿಮಾನನಿಲ್ದಾಣ ನಿರ್ಮಿಸಲಾಗುತ್ತಿದೆ ಎಂದು ಹೇಳಿದರು.

ಕೊನೆಯ ಹಂತದ ನಿರ್ಮಾಣ ಪ್ರಕ್ರಿಯೆ ಮುಗಿದ ಬಳಿಕ ಈ ನಿಲ್ದಾಣವು ದೆಹಲಿಯ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ನಿಲ್ದಾಣವನ್ನೂ ಮೀರಿಸಲಿದೆ. ಏಷ್ಯಾದ ಅತಿದೊಡ್ಡ ವಿಮಾನನಿಲ್ದಾಣ ಎಂಬ ಹಿರಿಮೆಗೆ ಪಾತ್ರವಾಗಲಿದೆ ಎಂದು ಸಿಂಧಿಯಾ ತಿಳಿಸಿದರು.

‘ಉತ್ತರ ಪ್ರದೇಶದಲ್ಲಿ ಈ ಹಿಂದೆ ಕೇವಲ ನಾಲ್ಕು ವಿಮಾನ ನಿಲ್ದಾಣಗಳಿದ್ದವು. ಈಗ ಒಂಬತ್ತು ನಿಲ್ದಾಣಗಳು ಕಾರ್ಯನಿರ್ವಹಿಸುತ್ತಿವೆ. ಈಗ 10ನೇ ವಿಮಾನನಿಲ್ದಾಣ ನಿರ್ಮಿಸಲು ಚಾಲನೆ ನೀಡಲಾಗಿದೆ’ ಎಂದು ಅವರು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಅವಧಿ ವಿಸ್ತರಣೆಗೆ ಸುಗ್ರೀವಾಜ್ಞೆ: ವಿಚಾರಣೆಗೆ ‘ಸುಪ್ರೀಂ’ ಒಪ್ಪಿಗೆ

ನವದೆಹಲಿ (ಪಿಟಿಐ): ಸಿಬಿಐ ಹಾಗೂ ಜಾರಿ ನಿರ್ದೇಶನಾಲಯ (ಇ.ಡಿ) ಮುಖ್ಯಸ್ಥರ ಅವಧಿಯನ್ನು ಎರಡು ವರ್ಷ ವಿಸ್ತರಿಸಲು ಅವಕಾಶ ಮಾಡಿ ಹೊರಡಿಸಿರುವ ಎರಡು ಸುಗ್ರೀವಾಜ್ಞೆಗಳ ಸಿಂಧುತ್ವ ಪ್ರಶ್ನಿಸಿರುವ ಅರ್ಜಿಯನ್ನು ವಿಚಾರಣೆಗೆ ಎತ್ತಿಕೊಳ್ಳುವುದಾಗಿ ಸುಪ್ರೀಂ ಕೋರ್ಟ್ ಗುರುವಾರ ತಿಳಿಸಿದೆ.

ಮುಖ್ಯನ್ಯಾಯಮೂರ್ತಿ ಎನ್.ವಿ. ರಮಣ ಮತ್ತು ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಮತ್ತು ಹಿಮಾ ಕೊಹ್ಲಿ ಅವರ ಪೀಠ, ಸದ್ಯದಲ್ಲೇ ವಿಚಾರಣೆ ದಿನವನ್ನು ನಿಗದಿ ಮಾಡುವುದಾಗಿ ತಿಳಿಸಿದೆ.

ಕೋವಿಡ್ ಹೊಸ ರೂಪಾಂತರ ಪತ್ತೆ

ಜೋಹಾನ್ಸ್‌ಬರ್ಗ್: ದಕ್ಷಿಣ ಆಫ್ರಿಕಾದ ವಿಜ್ಞಾನಿಗಳು ಕೋವಿಡ್–19 ಹೊಸ ರೂಪಾಂತವನ್ನು ಪತ್ತೆ ಹಚ್ಚಿದ್ದು, ಅದರಿಂದ ಆಗಬಹುದಾದ ಸಂಭಾವ್ಯ ಪರಿಣಾಮಗಳ ಕುರಿತು ಅಧ್ಯಯನ ನಡೆಸುತ್ತಿದ್ದಾರೆ.

ಹೊಸ ರೂಪಾಂತರವನ್ನು ಬಿ.1.1.529 ಎಂದು ಕರೆಯಲಾಗಿದೆ. ಇದು ಅಸಾಮಾನ್ಯ ರೂಪಾಂತರವಾಗಿದ್ದು, ದೇಹದ ಪ್ರತಿಕಾಯಗಳಿಂದ ತಪ್ಪಿಸಿಕೊಂಡು, ಹೆಚ್ಚಾಗಿ ವ್ಯಾಪಿಸುವ ಸಾಮರ್ಥ್ಯ ಹೊಂದಿವೆ ಎಂದು ವಿಜ್ಞಾನಿಗಳು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ನಟಿ ಕಂಗನಾ ರನೌತ್‌ಗೆ ಸಮನ್ಸ್ ಜಾರಿ

ನವದೆಹಲಿ (ಪಿಟಿಐ): ಸಾಮಾಜಿಕ ಜಾಲತಾಣಗಳಲ್ಲಿ ದ್ವೇಷಪೂರಿತ ಪೋಸ್ಟ್ ಹಾಕಿದ್ದ ಪ್ರಕರಣದಲ್ಲಿ ಡಿ.6ರಂದು ವಿಚಾರಣೆಗೆ ಬರುವಂತೆ ನಟಿ ಕಂಗನಾ ರನೌತ್ ಅವರಿಗೆ ದೆಹಲಿ ವಿಧಾನಸಭೆಯ ಶಾಂತಿ ಮತ್ತು ಸೌಹಾರ್ದ ಸಮಿತಿ ಸಮನ್ಸ್ ಜಾರಿ ಮಾಡಿದೆ.

ನಟಿಯು ತನ್ನ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಆಕ್ಷೇಪಾರ್ಹ ಮತ್ತು ಮಾನಹಾನಿಕರವಾದ ಪೋಸ್ಟ್ ಹಾಕಿದ್ದಾರೆ ಎಂದು ಆರೋಪಿಸಿ ನೀಡಿದ್ದ ದೂರು ಆಧರಿಸಿ ಸಮನ್ಸ್ ಅನ್ನು ಜಾರಿ ಮಾಡಲಾಗಿದೆ ಎಂದು ಸಮಿತಿಯು ಹೇಳಿಕೆ ನೀಡಿದೆ.

ವರದಕ್ಷಿಣೆಗಾಗಿ ಇಟ್ಟಿದ್ದ ₹75 ಲಕ್ಷ ಹಾಸ್ಟೆಲ್ ಕಟ್ಟಲು ಕೊಟ್ಟ ವಧು

ಬಾರ್ಮೇರ್ (ರಾಜಸ್ಥಾನ): ಇಲ್ಲಿನ ವಧುವೊಬ್ಬರು ತಮ್ಮ ಮದುವೆಯಲ್ಲಿ ವರದಕ್ಷಿಣೆ ನೀಡಲು ಎಂದು ತೆಗೆದಿರಿಸಿದ್ದ ₹75 ಲಕ್ಷವನ್ನು ಬಾಲಕಿಯರ ವಿದ್ಯಾರ್ಥಿನಿಲಯ ನಿರ್ಮಾಣ ಮಾಡಲು ದೇಣಿಗೆ ನೀಡಿದ್ದಾರೆ ಎಂದು ದೈನಿಕ ಭಾಸ್ಕರ ಪತ್ರಿಕೆಯು ವರದಿ ಮಾಡಿದೆ. ಈ ವರದಿಯು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ವಧುವಿನ ನಡೆಗೆ ಭಾರಿ ಮೆಚ್ಚುಗೆ ವ್ಯಕ್ತವಾಗಿದೆ.

ಬಾರ್ಮೇರ್ ಜಿಲ್ಲೆಯ ಉದ್ಯಮಿ ಕಿಶೋರ್ ಸಿಂಗ್ ಕನೋದ್ ಎಂಬುವವರು ಇದೇ 21ರಂದು ತಮ್ಮ ಮಗಳಾದ ಅಂಜಲಿ ಕನ್ವಾರ್ ಅವರ ವಿವಾಹವನ್ನು ನೆರವೇರಿಸಿದ್ದರು. ಮದುವೆ ಸಂದರ್ಭದಲ್ಲಿ, ವರ ಪ್ರವೀಣ್ ಸಿಂಗ್‌ಗೆ ವರದಕ್ಷಿಣೆ ನೀಡಲು ಎಂದು ಕಿಶೋರ್ ಅವರು ₹75 ಲಕ್ಷವನ್ನು ತೆಗೆದಿರಿಸಿದ್ದರು. ಆದರೆ ಮದುವೆಯ ಮುನ್ನಾದಿನ ಅಂಜಲಿ, ‘ವರದಕ್ಷಿಣೆ ನೀಡಲು ತೆಗೆದಿರಿಸಿರುವ ಹಣವನ್ನು ಬಾಲಕಿಯರ ವಿದ್ಯಾರ್ಥಿನಿಲಯ ನಿರ್ಮಾಣಕ್ಕೆ ನೀಡಿ’ ಎಂದು ತಮ್ಮ ತಂದೆಯನ್ನು ಕೇಳಿಕೊಂಡಿದ್ದಾರೆ. ಇದಕ್ಕೆ ಕಿಶೋರ್ ಸಹ ಸಮ್ಮತಿ ಸೂಚಿಸಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

ಮದುವೆಯ ದಿನ ಮಂಟಪದಲ್ಲಿಯೇ ಈ ಬಗ್ಗೆ ಕಿಶೋರ್ ಘೋಷಣೆ ಮಾಡಿದ್ದಾರೆ. ತಮ್ಮ ಮಗಳಿಗೆ ಖಾಲಿ ಚೆಕ್ ನೀಡಿ, ಎಷ್ಟು ದೇಣಿಗೆ ನೀಡಬೇಕೊ ಅದನ್ನು ಚೆಕ್‌ನಲ್ಲಿ ನಮೂದಿಸು ಎಂದು ಹೇಳಿದ್ದಾರೆ. ಅಂಜಲಿ ಆ ಚೆಕ್‌ನಲ್ಲಿ ₹75 ಲಕ್ಷ ನಮೂದಿಸಿದ್ದಾರೆ. ಆ ಚೆಕ್ ಅನ್ನು ತಾರಾತರ ಮಠದ ಮುಖ್ಯಸ್ಥರಿಗೆ ಮಂಟಪದಲ್ಲಿಯೇ ಹಸ್ತಾಂತರಿಸಲಾಗಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

‘ನಾವು ನಿರ್ಮಿಸುತ್ತಿರುವ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಕಿಶೋರ್ ಅವರು ಈ ಮೊದಲೇ ₹1 ಕೋಟಿ ದೇಣಿಗೆ ನೀಡಿದ್ದರು. ಕಾಮಗಾರಿ ಪೂರ್ಣಗೊಳಿಸಲು ಇನ್ನೂ ₹50–75 ಲಕ್ಷದ ಅಗತ್ಯವಿತ್ತು. ಕಿಶೋರ್ ಅವರು ಈಗ ಅದನ್ನೂ ಒದಗಿಸಿದ್ದಾರೆ’ ಎಂದು ತಾರಾತರ ಮಠವು ಮಾಹಿತಿ ನೀಡಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಕುಟುಂಬ ಆರೋಗ್ಯ ಸಮೀಕ್ಷೆ ವರದಿಯಲ್ಲಿ ಉಲ್ಲೇಖ

ಫಲವಂತಿಕೆ ದರ 2ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ದೇಶದ ಮಹಿಳೆಯರ ಫಲವಂತಿಕೆಯ ದರ 2.2ರಿಂದ 2ಕ್ಕೆ ಇಳಿಕೆಯಾಗಿದೆ’ ಎಂದು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–5ರ ಎರಡನೇ ಹಂತದ ವರದಿಯಲ್ಲಿ ಹೇಳಲಾಗಿದೆ.

ಉತ್ತರ, ಪೂರ್ವ ಮತ್ತು ಈಶಾನ್ಯದ ರಾಜ್ಯಗಳು ಸೇರಿ ಒಟ್ಟು 14 ರಾಜ್ಯಗಳಲ್ಲಿ ಎರಡನೇ ಹಂತದ ಸಮೀಕ್ಷೆಯನ್ನು ನಡೆಸಲಾಗಿತ್ತು. ಸಮೀಕ್ಷೆಯ ವರದಿಯನ್ನು ಕೇಂದ್ರ ಆರೋಗ್ಯ ಸಚಿವಾಲಯವು ಈಗ ಬಿಡುಗಡೆ ಮಾಡಿದೆ.

ದೇಶದಮಹಿಳೆಯರಫಲವಂತಿಕೆಯ ದರ ಇಳಿಕೆಯಾಗಿರುವುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ. ದೇಶದಲ್ಲಿನ ಒಟ್ಟು ಜನನ ಪ್ರಮಾಣವನ್ನು, ಫಲವಂತಿಕೆ ವಯಸ್ಸಿನ ಒಟ್ಟು ಮಹಿಳೆಯರ ಸಂಖ್ಯೆಯೊಂದಿಗೆ ತಾಳೆ ಮಾಡಿ ಫಲವಂತಿಕೆ ದರವನ್ನು ಲೆಕ್ಕಹಾಕಲಾಗುತ್ತದೆ. 2015–16ರಲ್ಲಿ ಫಲವಂತಿಕೆ ದರವು 2.2ರಷ್ಟು ಇತ್ತು. 2019–21ರಲ್ಲಿ ಈ ದರವು 2ಕ್ಕೆ ಇಳಿದಿದೆ. ದೇಶದ ನಗರ ಪ್ರದೇಶದಲ್ಲಿ ಫಲವಂತಿಕೆ ದರವು 1.6ರಷ್ಟು ಇದೆ. ಗ್ರಾಮೀಣ ಪ್ರದೇಶಗಳಲ್ಲಿ 2.1ರಷ್ಟು ಇದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

2015–16ಕ್ಕೆ ಹೋಲಿಸಿದರೆ, ಗರ್ಭನಿರೋಧಕ ಕ್ರಮಗಳನ್ನು ಅನುಸರಿಸುವವರ ಪ್ರಮಾಣವು 2019–21ರಲ್ಲಿ ಏರಿಕೆಯಾಗಿದೆ. 2015–16ರಲ್ಲಿ ದೇಶದ ಶೇ 54ರಷ್ಟು ಮಂದಿ ಇಂತಹ ಕ್ರಮಗಳನ್ನು ಅನುಸರಿಸುತ್ತಿದ್ದರು. 2019–21ರಲ್ಲಿ ದೇಶದ ಶೇ 67 ರಷ್ಟು ಜನರು ಇಂತಹ ಕ್ರಮಗಳನ್ನು ಅನುಸರಿಸುತ್ತಿದ್ದಾರೆ. ಹೀಗಾಗಿಯೇ ಫಲವಂತಿಕೆಯ ದರದಲ್ಲಿ ಇಳಿಕೆ ಸಾಧ್ಯವಾಗಿದೆ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ. ಎರಡನೇ ಹಂತದಲ್ಲಿ ಸಮೀಕ್ಷೆಗೆ ಒಳಪಟ್ಟ ರಾಜ್ಯಗಳಲ್ಲಿ ಜನಸಂಖ್ಯೆಯ ಮಟ್ಟ ಕಾಯ್ದುಕೊಳ್ಳಲು ಅಗತ್ಯವಾದ ಫಲವಂತಿಕೆ ದರವು 2.1ರಷ್ಟು ಇದೆ ಎಂದು ವರದಿಯು ಹೇಳಿದೆ.

ಪುರುಷರಿಗಿಂತ ಹೆಚ್ಚು ಮಹಿಳೆಯರು

ದೇಶದ ಲಿಂಗಾನುಪಾತದಲ್ಲಿ ಮಹಿಳೆಯರ ಸಂಖ್ಯೆ ಇದೇ ಮೊದಲ ಬಾರಿ ಪುರುಷರಿಗಿಂತಲೂ ಹೆಚ್ಚು ಇದೆ ಎಂದು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–5ರ ವರದಿಯನ್ನು ಉಲ್ಲೇಖಿಸಿ ಆರೋಗ್ಯ ಸಚಿವಾಲಯವು ಹೇಳಿದೆ.

ದೇಶದಲ್ಲಿ ಈಗ 1,020 ಮಹಿಳೆಯರಿಗೆ 1,000 ಪುರುಷರು ಇರಬಹುದು ಎಂದು ಸಮೀಕ್ಷೆಯು ಅಂದಾಜಿಸಿದೆ. ಇದು ಮಾದರಿ ಆಧಾರದಲ್ಲಿ ಹಾಕಿದ ಲೆಕ್ಕಾಚಾರ. ಇದು ಜನಸಂಖ್ಯೆ ಪ್ರವೃತ್ತಿಯ ಸೂಚಕ ಮಾತ್ರ. ವಾಸ್ತವದಲ್ಲಿ ಪರಿಸ್ಥಿತಿ ಹೇಗಿದೆ ಎಂಬುದು ಜನಗಣತಿಯ ವರದಿ ಬಂದ ಬಳಿಕವಷ್ಟೇ ತಿಳಿಯುತ್ತದೆ. 2011ರ ಜನಗಣತಿ ಪ್ರಕಾರ, ದೇಶದಲ್ಲಿ ಸಾವಿರ ಪುರುಷರಿಗೆ 940 ಮಹಿಳೆಯರು ಮಾತ್ರ ಇದ್ದರು.

28 ಮನೆ ಮಾಲೀಕ ವಾಸುದೇವ

ಒಂದನೇ ಪುಟದಿಂದ

ಕೋಟಿ ವೀರರ ಧನಕನಕ

- ಶಾಂತಗೌಡ ಬಿರಾದಾರ್, ಪಿಡಬ್ಲ್ಯೂಡಿ ಕಿರಿಯ ಎಂಜಿನಿಯರ್, ಜೇವರ್ಗಿ; ಒಟ್ಟು ಆಸ್ತಿ ಮೌಲ್ಯ ₹4.15 ಕೋಟಿ, ಆದಾಯ ಮೀರಿ ಶೇ 406.17ರಷ್ಟು ಆಸ್ತಿ ಸಂಪಾದನೆ, ಕಲಬುರ್ಗಿಯಲ್ಲಿ 2 ಮನೆ, ಬೆಂಗಳೂರಿನಲ್ಲಿ 1 ನಿವೇಶನ, 36 ಎಕರೆ ಕೃಷಿ ಜಮೀನು, 3 ಕಾರು, 1 ಸ್ಕೂಲ್ ಬಸ್, 2 ಟ್ರ್ಯಾಕ್ಟರ್, ₹54.50 ಲಕ್ಷ ನಗದು, 100 ಗ್ರಾಂ ಚಿನ್ನ, ₹15 ಲಕ್ಷ ಬೆಲೆ ಬಾಳುವ ಗೃಹೋಪಯೋಗಿ ವಸ್ತುಗಳು.
- ಟಿ.ಎಸ್. ರುದ್ರೇಶಪ್ಪ, ಜಂಟಿ ನಿರ್ದೇಶಕ, ಕೃಷಿ ಇಲಾಖೆ ಗದಗ; ಒಟ್ಟು ಆಸ್ತಿ ಮೌಲ್ಯ ₹6.65 ಕೋಟಿ, ಆದಾಯ ಮೀರಿ ಶೇ 400ರಷ್ಟು ಆಸ್ತಿ ಸಂಪಾದನೆ, ಶಿವಮೊಗ್ಗದಲ್ಲಿ 2 ಮನೆ, ವಿವಿಧೆಡೆ 4 ನಿವೇಶನ, 9 ಕೆ.ಜಿ. 400 ಗ್ರಾಂ ಚಿನ್ನದ ಗಟ್ಟಿ, 3 ಕೆ.ಜಿ. ಬೆಳ್ಳಿ, 2 ಕಾರು, 3 ದ್ವಿಚಕ್ರ ವಾಹನ, 8 ಎಕರೆ ಕೃಷಿ ಜಮೀನು, ₹15.94 ಲಕ್ಷ ನಗದು, ₹20 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು.
- ಕೆ. ಶ್ರೀನಿವಾಸ್, ಕಾರ್ಯಪಾಲಕ ಎಂಜಿನಿಯರ್, ಎಚ್‌ಎಲ್‌ಬಿಸಿ–3 ಕೆ.ಆರ್.ಪೇಟೆ; ಒಟ್ಟು ಆಸ್ತಿ ಮೌಲ್ಯ ₹3.10 ಕೋಟಿ, ಆದಾಯ ಮೀರಿ ಶೇ 179.37ರಷ್ಟು ಆಸ್ತಿ ಸಂಪಾದನೆ. ಮೈಸೂರಿನಲ್ಲಿ 1 ಮನೆ, 1 ಫ್ಲ್ಯಾಟ್, 2 ನಿವೇಶನ, ವಿವಿಧಡೆ 4 ಎಕರೆ 34 ಗುಂಟೆ ಕೃಷಿ ಭೂಮಿ, ನಂಜನಗೂಡಿನಲ್ಲಿ ಫಾರ್ಮ್ ಹೌಸ್, 2 ಕಾರು, 1 ಕೆ.ಜಿ. ಚಿನ್ನ, 8.84 ಕೆ.ಜಿ ಬೆಳ್ಳಿ, ₹9.85 ಲಕ್ಷ ನಗದು, ₹22 ಲಕ್ಷದ ಠೇವಣಿ, 8 ಲಕ್ಷ ಬೆಲೆಬಾಳುವ ಗೃಹೋಪಯೋಗಿ ವಸ್ತುಗಳು.
- ಕೆ.ಎಸ್. ಲಿಂಗೇಗೌಡ, ಕಾರ್ಯಪಾಲಕ ಎಂಜಿನಿಯರ್ ಸ್ಮಾರ್ಟ್‌ಸಿಟಿ ಮಂಗಳೂರು ಮಹಾನಗರ ಪಾಲಿಕೆ; ಒಟ್ಟು ಆಸ್ತಿ ಮೌಲ್ಯ ₹2.03 ಕೋಟಿ, ಆದಾಯ ಮೀರಿ ಶೇ 146.33 ರಷ್ಟು ಆಸ್ತಿ ಸಂಪಾದನೆ. ಮಂಗಳೂರಿನಲ್ಲಿ 1 ಮನೆ, ಚಾಮರಾಜನಗರ, ಮಂಗಳೂರಿನಲ್ಲಿ 3 ನಿವೇಶನ, 2 ಕಾರು, 1 ಕೆ.ಜಿ ಬೆಳ್ಳಿ, ₹10 ಲಕ್ಷ ಬೆಲೆಬಾಳುವ ಗೃಹೋಪಯೋಗಿ ವಸ್ತುಗಳು.
- ಎಲ್.ಸಿ. ನಾಗರಾಜ್, ಸಕಾಲ ಆಡಳಿತಾಧಿಕಾರಿ; ಒಟ್ಟು ಆಸ್ತಿ ಮೌಲ್ಯ ₹10.82 ಕೋಟಿ, ಶೇ 198 ರಷ್ಟು ಆಸ್ತಿ ಸಂಪಾದನೆ. ಬೆಂಗಳೂರಿನಲ್ಲಿ 1 ಮನೆ ಹಾಗೂ ನಿವೇಶನ, ನೆಲಮಂಗಲದಲ್ಲಿ 1 ಮನೆ, 11 ಎಕರೆ 26 ಗುಂಟೆ ಜಮೀನು, ಕೈಗಾರಿಕಾ ಉದ್ದೇಶದ ಕಟ್ಟಡ, 3 ಕಾರು, 1.76 ಕೆ.ಜಿ ಚಿನ್ನ, 7.28 ಕೆ.ಜಿ ಬೆಳ್ಳಿ, ₹43 ಲಕ್ಷ ನಗದು, ₹14 ಲಕ್ಷ ಬೆಲೆಬಾಳುವ ಗೃಹೋಪಯೋಗಿ ವಸ್ತುಗಳು.
- ಎಸ್.ಎಸ್. ರಾಜಶೇಖರ್, ಪಿಸಿಯೋಥೆರಪಿಸ್ಟ್, ಯಲಹಂಕ ಸರ್ಕಾರಿ ಆಸ್ಪತ್ರೆ; ಒಟ್ಟು ಆಸ್ತಿ ಮೌಲ್ಯ ₹1.40 ಕೋಟಿ, ಆದಾಯ ಮೀರಿ ಶೇ 77 ಆಸ್ತಿ ಸಂಪಾದನೆ. ಮಾರಸಂದ್ರದಲ್ಲಿ 1 ಫ್ಲ್ಯಾಟ್, ಯಲಹಂಕದ ಶಿವನಹಳ್ಳಿಯಲ್ಲಿ 2 ಅಂತಸ್ತಿ ಫ್ಲ್ಯಾಟ್, ಮೈಲನಹಳ್ಳಿಯಲ್ಲಿ 1 ನಿವೇಶನ, 1 ಕಾರು, ₹4 ಲಕ್ಷ ಬೆಲೆಬಾಳುವ ಗೃಹೋಪಯೋಗಿ ವಸ್ತುಗಳು.
- ಮಾಯಣ್ಣ, ಪ್ರಥಮ ದರ್ಜೆ ಸಹಾಯಕ, ಬಿಬಿಎಂಪಿ; ಒಟ್ಟು ಆಸ್ತಿ ಮೌಲ್ಯ ₹4.92 ಕೋಟಿ, ಆದಾಯ ಮೀರಿ ಶೇ 138ರಷ್ಟು ಆಸ್ತಿ ಸಂಪಾದನೆ. ಬೆಂಗಳೂರಿನಲ್ಲಿ 4 ಮನೆ, ವಿವಿಧೆಡೆ 6 ನಿವೇಶನ, 2 ಎಕರೆ ಕೃಷಿ ಜಮೀನು, 1 ಕಾರು, ₹59 ಸಾವಿರ ನಗದು, ₹10 ಲಕ್ಷ ಠೇವಣಿ, ಉಳಿತಾಯ ಖಾತೆಯಲ್ಲಿ ₹1.50 ಲಕ್ಷ, 600 ಗ್ರಾಂ ಚಿನ್ನ, 3 ಸ್ಥಳಗಳಲ್ಲಿ ಬೇನಾಮಿ ಆಸ್ತಿ, ₹12 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು.
- ಕೆ.ಎಸ್. ಶಿವಾನಂದ, ನಿವೃತ್ತ ಉಪನೋಂದಣಾಧಿಕಾರಿ, ಬಳ್ಳಾರಿ; ಒಟ್ಟು ಆಸ್ತಿ ₹1.37 ಕೋಟಿ, ಆದಾಯ ಮೀರಿ ಶೇ 198ರಷ್ಟು ಆಸ್ತಿ ಸಂಪಾದನೆ. ಮಂಡ್ಯದಲ್ಲಿ 1 ಮನೆ, ಬೆಂಗಳೂರಿನಲ್ಲಿ 1 ನಿವೇಶನ, 1 ಕಾರು, ಶಕ್ರಪುರ ಗ್ರಾಮದಲ್ಲಿ ವಾಣಿಜ್ಯ ಸಂಕೀರ್ಣ, ಬಳ್ಳಾರಿ ಜಿಲ್ಲೆಯ ಮೋಕಾ ಗ್ರಾಮದಲ್ಲಿ 7 ಎಕರೆ ಕೃಷಿ ಜಮೀನು, ₹ 8 ಲಕ್ಷ ಬೆಲೆಬಾಳುವ ಗೃಹೋಪಯೋಗಿ ವಸ್ತುಗಳು.
- ಸದಾಶಿವರಾಯಪ್ಪ ಮರಲಿಂಗಣ್ಣನವರ, ಹಿರಿಯ ಮೋಟಾರು ನಿರೀಕ್ಷಕ, ಗೋಕಾಕ; ಒಟ್ಟು ಆಸ್ತಿ ಮೌಲ್ಯ ₹3.05 ಕೋಟಿ, ಆದಾಯ ಮೀರಿ ಶೇ 190.81ರಷ್ಟು ಆಸ್ತಿ ಸಂಪಾದನೆ. ಬೆಳಗಾವಿಯಲ್ಲಿ 1 ಮನೆ, 22 ಎಕರೆ ಕೃಷಿ ಜಮೀನು, 1.35 ಕೆ.ಜಿ ಚಿನ್ನ, ₹8.22 ಲಕ್ಷ ನಗದು, ₹5 ಲಕ್ಷ ಬೆಲೆಬಾಳುವ ಗೃಹೋಪಯೋಗಿ ವಸ್ತುಗಳು.
- ಅಡವಿ ಸಿದ್ದೇಶ್ವರ ಕಾರೆಪ್ಪ ಮಸ್ತಿ, ಸಹಕಾರ ಇಲಾಖೆ ಅಭಿವೃದ್ಧಿ ಅಧಿಕಾರಿ, ಬೆಳಗಾವಿ ಜಿಲ್ಲೆ ರಾಯಭಾಗ; ಒಟ್ಟು ಆಸ್ತಿ ಮೌಲ್ಯ ₹1.74 ಕೋಟಿ, ಆದಾಯ ಮೀರಿ ಶೇ 191.91ರಷ್ಟು ಆಸ್ತಿ ಸಂಪಾದನೆ. ಬೈಲಹೊಂಗಲದಲ್ಲಿ 2 ಮನೆ, 4 ನಿವೇಶನ, 4 ಕಾರು, 6 ದ್ವಿಚಕ್ರ ವಾಹನ, 263 ಗ್ರಾಂ ಚಿನ್ನ, 945 ಗ್ರಾಂ ಬೆಳ್ಳಿ, ₹1.50 ಲಕ್ಷ ಮೌಲ್ಯದ ಠೇವಣಿ, ₹1.10 ಲಕ್ಷ ನಗದು, ₹5 ಲಕ್ಷ ಬೆಲೆಬಾಳುವ ಗೃಹೋಪಯೋಗಿ ವಸ್ತುಗಳು.
- ನಾಥಾಜಿ ಪೀರಾಜಿ ಪಾಟೀಲ, ಲೈನ್ ಮೆಕಾನಿಕ್ ಗ್ರೇಡ್–2 ಹೆಸ್ಕಾಂ, ಬೆಳಗಾವಿ; ಒಟ್ಟು ಆಸ್ತಿ ಮೌಲ್ಯ ₹2.20 ಕೋಟಿ, ಆದಾಯ ಮೀರಿ ಶೇ 141.30ರಷ್ಟು ಆಸ್ತಿ ಸಂಪಾದನೆ. ಬೆಳಗಾವಿಯಲ್ಲಿ 1 ಮನೆ, 2 ನಿವೇಶನ, 1 ಕಾರು, 239 ಗ್ರಾಂ ಚಿನ್ನ, 1.80 ಕೆ.ಜಿ ಬೆಳ್ಳಿ, ₹38 ಸಾವಿರ ನಗದು, ₹20 ಲಕ್ಷ ಬೆಲೆಬಾವಳುವ ಗೃಹೋಪಯೋಗಿ ವಸ್ತುಗಳು.
- ಲಕ್ಷ್ಮೀನರಸಿಂಹಯ್ಯ, ಕಂದಾಯ ನಿರೀಕ್ಷಕ, ದೊಡ್ಡಬಳ್ಳಾಪುರ; ಒಟ್ಟು ಆಸ್ತಿ ಮೌಲ್ಯ ₹1.83 ಕೋಟಿ, ಆದಾಯ ಮೀರಿ ಶೇ 141.30 ರಷ್ಟು ಆಸ್ತಿ ಸಂಪಾದನೆ. 5 ಮನೆ, 6 ನಿವೇಶನ, 25 ಗುಂಟೆ ಜಮೀನು, 765 ಗ್ರಾಂ ಚಿನ್ನ, 15 ಕೆ.ಜಿ ಬೆಳ್ಳಿ, 1 ಕಾರು, 2 ದ್ವಿಚಕ್ರ ವಾಹನ, ₹1.13 ಲಕ್ಷ ನಗದು.
- ಬಿ. ಕೃಷ್ಣಾರೆಡ್ಡಿ, ನಂದಿನ ಹಾಲಿನ ಡೇರಿಯ ಪ್ರಧಾನ ವ್ಯವಸ್ಥಾಪಕ; ಒಟ್ಟು ಆಸ್ತಿ ಮೌಲ್ಯ ₹4.82 ಕೋಟಿ, ಆದಾಯ ಮೀರಿ ಶೇ 305ರಷ್ಟು ಆಸ್ತಿ ಸಂಪಾದನೆ. 3 ಮನೆ, 9 ನಿವೇಶನ, 5 ಎಕರೆ 30 ಗುಂಟೆ ಕೃಷಿ ಜಮೀನು, ಹೊಸಕೋಟೆ ತಾಲ್ಲೂಕಿನಲ್ಲಿ ಪೆಟ್ರೋಲ್ ಬಂಕ್, 383 ಗ್ರಾಂ ಚಿನ್ನ, 3.30 ಕೆಜಿ ಬೆಳ್ಳಿ, ₹3 ಲಕ್ಷ ನಗದು.

ಬಹು ಮಾಧ್ಯಮ ಪ್ರಜಾವಾಣಿ LIVE
ಪ್ರಜಾವಾಣಿ ಕನ್ನಡ ಧ್ವನಿ
Prajavani.net/podcast
ದಿನದ ವಿಶೇಷ: ಸಂಜೆ 4:
ಸಿನಿ ಮ್ಯಾಟನಿ ಬೆಳಿಗ್ಗೆ 7 :
ವಚನವಾಣಿ, ಬೆಳಿಗ್ಗೆ 7.30:
ದಿನದ ಸೂಕ್ತಿ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8: ಪ್ರಜಾವಾಣಿ ವಾರ್ತೆ, ಬುಲೆಟಿನ್, ಬೆಳಿಗ್ಗೆ 9: ಪ್ರಚಲಿತ, ಬೆಳಿಗ್ಗೆ 9.30: ಸಂಪಾದಕೀಯ,
Prajavani.net
Prajavani Prajavani

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಕುಡಿಯುವ ನೀರು: ₹1,577 ಕೋಟಿ ವೆಚ್ಚದ ಯೋಜನೆಗಳಿಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಜಲಜೀವನ್ ಮಿಷನ್ ಕುಡಿಯುವ ನೀರಿನ ಯೋಜನೆಗಳಿಗಾಗಿ ₹1,577 ಕೋಟಿ ಒದಗಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಯಾದಗಿರಿ ಜಿಲ್ಲೆಯ ಎಲ್ಲಾ ಗ್ರಾಮೀಣ ವಸತಿಗಳಿಗೆ ಮತ್ತು 3 ನಗರ ಸ್ಥಳೀಯ ಸಂಸ್ಥೆಗಳಾದ ಕಕ್ಕೇರಾ, ಕೆಂಭಾವಿ ಮತ್ತು ಹುಣಸಗಿ ಪಟ್ಟಣಗಳಿಗೆ ಕುಡಿಯುವ ನೀರನ್ನು ಒದಗಿಸುವ ₹1,358.62 ಕೋಟಿ ಮೊತ್ತದ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮತ್ತು ಮೂಡುಬಿದಿರೆ ತಾಲ್ಲೂಕಿನ 39 ಹಳ್ಳಿಗಳಿಗೆ (583 ಜನವಸತಿ) ₹145.48 ಕೋಟಿ ಹಾಗೂ ಬಂಟ್ವಾಳ ಮತ್ತು ಮಂಗಳೂರು ಅನುಮೋದನೆ ನೀಡಲಾಗಿದೆ.

ಅಲ್ಲದೆ, ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಘಟ ಬಸವಣ್ಣ ಕುಡಿಯುವ ನೀರು ಸರಬರಾಜು ಯೋಜನೆಗೆ ₹990 ಕೋಟಿ ಮೊತ್ತದ ವಿಸ್ತೃತ ಯೋಜನಾ ವರದಿಗೆ(ಡಿಪಿ-ಆರ್) ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಇತರ ಪ್ರಮುಖ ನಿರ್ಧಾರಗಳು

- ₹41 ಕೋಟಿ ಅಂದಾಜು ವೆಚ್ಚದಲ್ಲಿ 164 'ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ' ವಾಹನಗಳನ್ನು ಖರೀದಿಸಲು ನಿರ್ಧಾರ.
- ಕೇಂದ್ರ ಪ್ರಾಯೋಜಿತ ಆರ್‌ಕೆವಿವೈ-27 ಯೋಜನೆಗಳಡಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ-ಗಳಿಗೆ ಅನುಮೋದನೆಯನ್ನಾಗಿಸುವ ₹79.66 ಕೋಟಿ ಮೊತ್ತದ ಸಿವಿಲ್ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ.
- ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ಕಲಬುರಗಿ ಜಿಲ್ಲೆಯ ಜೇವರ್ಗಿ, ಕೊಪ್ಪಳ ಜಿಲ್ಲೆಯ ಕುಷ್ಟಗಿಯಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಕಟ್ಟಡ ನಿರ್ಮಾಣ ಕಾಮಗಾರಿ, ಚಿಕ್ಕಬಳ್ಳಾಪುರ ಜಿಲ್ಲೆಯ ಮಂಚೇನಹಳ್ಳಿಯಲ್ಲಿ ಹೊಸದಾಗಿ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯ ಜತೆಗೆ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಕಟ್ಟಡ ನಿರ್ಮಿಸುವ ಕಾಮಗಾರಿಗಳಿಗೆ ₹93 ಕೋಟಿಗೆ ಆಡಳಿತಾತ್ಮಕ ಅನುಮೋದನೆ.
- ಕೋವಿಡ್–19 ಮೂರನೇ ಅಲೆ ಸಿದ್ಧತೆಗಾಗಿ ₹317 ಕೋಟಿ ಮೊತ್ತದ ಉಪಕರಣ ಮತ್ತು ಪರಿಕರಗಳನ್ನು ಖರೀದಿಸಲು ಹಾಗೂ ₹52 ಕೋಟಿ ಮೊತ್ತದಲ್ಲಿ ಸಿವಿಲ್ ಕಾಮಗಾರಿಗಳಿಗೆ ಘಟನೋತ್ತರ ಅನುಮೋದನೆ.

'ಅಡಿಗಾಸ್' ಪ್ರವಾಸಿ ಕೈಪಿಡಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದಿಂದ 'ಅನುಮೋದಿತ ಸೇವಾ ಪೂರೈಕೆದಾರ' ಎನ್ನುವ ಮಾನ್ಯತೆ ಪಡೆದ ಅಡಿಗಾಸ್ ಯಾತ್ರಾ ಸಂಸ್ಥೆಯು ತನ್ನ 28ನೇ ವರ್ಷದ ಪ್ರವಾಸಿ ಕೈಪಿಡಿ ಬಿಡುಗಡೆ ಮಾಡಿದೆ.

ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದ ದಕ್ಷಿಣ ವಿಭಾಗದ ಪ್ರಾದೇಶಿಕ ನಿರ್ದೇಶಕ ಮಹಮದ್ ಫಾರೂಕ್ ಅವರು ನೂತನ ಕೈಪಿಡಿ ಬಿಡುಗಡೆ ಮಾಡಿದರು.

'ಪ್ರವಾಸೋದ್ಯಮ ಕ್ಷೇತ್ರಕ್ಕೆ ಅಡಿಗಾಸ್ ಸಂಸ್ಥೆಯು ಅಪಾರ ಕೊಡುಗೆ ನೀಡಿದ್ದು, 50 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಲಿ' ಎಂದು ಫಾರೂಕ್ ಅವರು ಶುಭ ಹಾರೈಸಿದರು.

'ಈ ಪ್ರವಾಸಿ ಕೈಪಿಡಿಯಲ್ಲಿ 2022ರಲ್ಲಿ ಕೈಗೊಳ್ಳುವ ಎಲ್ಲ ಪ್ರವಾಸ ದಿನಗಳನ್ನು ಪ್ರಕಟಿಸಲಾಗಿದೆ. ಈ ವರ್ಷದಲ್ಲಿ ಸಂಸ್ಥೆಯ ಜನಪ್ರಿಯ ಪ್ರವಾಸಗಳಾದ ಕಾಶಿ, ಗಯಾ ಯಾತ್ರಾ, ಗುಜರಾತ್, ಶಿಮ್ಲಾ, ವೈಷ್ಣೋದೇವಿ, ಚಾರ್ ಧಾಮ್ ಯಾತ್ರಾ, ನೇಪಾಳ ಸೇರಿದಂತೆ ಕೆಲವು ನೂತನ ಸ್ಥಳಗಳ ಪ್ರವಾಸದ ವಿವರಗಳನ್ನು ಒಳಗೊಂಡಿದೆ.

ಅದರಲ್ಲಿ ಶಕ್ತಿಪೀಠ ಹಾಗೂ ಹಿಮಾಚಲ ಪ್ರದೇಶದ ಉತ್ತಮವಾದ ಪ್ರವಾಸವು ಸೇರಿದೆ. ಪ್ರವಾಸದ ಸಂದರ್ಭದಲ್ಲಿ ದಿನನಿತ್ಯ ಸಂಸ್ಥೆಯ ಸಿಬ್ಬಂದಿಯಿಂದ ತಯಾರಾಗುವ ಉತ್ತಮ ಸಸ್ಯಹಾರಿ ಊಟ, ಹವಾನಿಯಂತ್ರಿತ ಕೊಠಡಿ ಮತ್ತು ನುರಿತ ಸಿಬ್ಬಂದಿ ಮಾರ್ಗದರ್ಶನದ ಸೌಲಭ್ಯ ದೊರೆಯಲಿದೆ. ಕಳೆದ 28 ವರ್ಷಗಳಿಂದ ಯಾತ್ರಿಕರು ನಮ್ಮನ್ನು ಪ್ರೋತ್ಸಾಹಿಸಿ ಬೆಳೆಸಿದ್ದಾರೆ.

ಮುಂದಿನ ದಿನಗಳಲ್ಲಿಯೂ ಇದೇ ರೀತಿ ಸಹಕಾರ ನೀಡಲಿ' ಎಂದು ಸಂಸ್ಥಾಪಕ ಕೆ. ನಾಗರಾಜ್ ಅಡಿಗ ಕೋರಿದ್ದಾರೆ.

ಈ ಪ್ರವಾಸದ ಕುರಿತ ಹೆಚ್ಚಿನ ಮಾಹಿತಿಯನ್ನು ಸಂಸ್ಥೆಯ ಕಚೇರಿಯಲ್ಲಿ ಪಡೆಯಬಹುದು ಅಥವಾ 080-26616678, 9611600810, 7022259003 ಸಂಪರ್ಕಿಸಬಹುದು ಎಂದು ನಿರ್ದೇಶಕಿ ಆಶಾ ಅಡಿಗ ತಿಳಿಸಿದ್ದಾರೆ.

ಅಡಿಗಾಸ್ ಯಾತ್ರಾ ಸಂಸ್ಥೆಯ 28ನೇ ವರ್ಷದ ಪ್ರವಾಸಿ ಕೈಪಿಡಿಯನ್ನು ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದ ದಕ್ಷಿಣ ವಿಭಾಗದ ಪ್ರಾದೇಶಿಕ ನಿರ್ದೇಶಕ ಮಹಮದ್ ಫಾರೂಕ್ ಬಿಡುಗಡೆ ಮಾಡಿದರು. ಅಡಿಗಾಸ್ ಸಂಸ್ಥಾಪಕ ಕೆ. ನಾಗರಾಜ್ ಅಡಿಗ, ನಿರ್ದೇಶಕಿ ಆಶಾ ಅಡಿಗ, ಪ್ರವಾಸೋದ್ಯಮ ಇಲಾಖೆಯ ಗೋಪಾಲ್, ಸಂಸ್ಥೆಯ ಸಿಬ್ಬಂದಿಗಳಾದ ದ್ವಾರಕಾನಾಥ್, ಸುಹಾಸ್, ನಾಗೇಂದ್ರ, ಯೋಗೀಶ್ ಬಿ ಕೆ ರಾವ್, ನಮ್ರತಾ ಇದ್ದರು

ವಿದ್ಯುತ್ ತಾಗಿ ಯುವಕ ಸಾವು- ಮಾಲೀಕನ ಹತ್ಯೆ

ಗೌರಿಬಿದನೂರು (ಚಿಕ್ಕಬಳ್ಳಾಪುರ): ತಾಲ್ಲೂಕಿನ ಚರಕಮಟ್ಟೇನಹಳ್ಳಿಯಲ್ಲಿ ತೋಟದ ಸುತ್ತ ಹಾಕಿದ್ದ ವಿದ್ಯುತ್ ತಂತಿ ತಗುಲಿ ಬುಧವಾರಸಂಜೆ ಯುವಕನೊಬ್ಬ ಮೃತಪಟ್ಟಿದ್ದು, ರೊಚ್ಚಿಗೆದ್ದ ಆತನ ಕುಟುಂಬದವರು ತೋಟದ ಮಾಲೀಕನನ್ನು ದೊಣ್ಣೆಗಳಿಂದ ಹೊಡೆದು ಸಾಯಿಸಿದ್ದಾರೆ.

ಅಶ್ವತ್ಥ ರಾವ್ (47) ಅವರು ತೋಟದ ಸುತ್ತ ವಿದ್ಯುತ್ ತಂತಿ ಬೇಲಿ ಅಳವಡಿಸಿದ್ದರು. ತೋಟಕ್ಕೆ ನುಗ್ಗಿದ್ದ ತನ್ನ ಮೇಕೆ ಮರಿಯನ್ನು ತರಲು ಹೋಗಿದ್ದ ವಸಂತ ರಾವ್ (27) ಅವರು ವಿದ್ಯುತ್ ತಂತಿ ತಗುಲಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ತೋಟದ ಬಳಿ ಬಂದಿದ್ದ ಅಶ್ವತ್ಥ ರಾವ್ ಮೇಲೆ ಮೃತನ ಕುಟುಂಬ ಸದಸ್ಯರು ದೊಣ್ಣೆಗಳಿಂದ ಹಲ್ಲೆ ನಡೆಸಿದ್ದಾರೆ. ಮಧ್ಯೆ ಪ್ರವೇಶಿಸಿದ್ದ ಗ್ರಾಮಸ್ಥರು ತೀವ್ರವಾಗಿ ಗಾಯಗೊಂಡಿದ್ದ ಅಶ್ವತ್ಥ ರಾವ್ ಅವರನ್ನು ಚಿಕಿತ್ಸೆಗೆ ಬೆಂಗಳೂರಿನ ಕರೆದೊಯ್ಯುವ ವೇಳೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಶ್ವತ್ಥ ರಾವ್, ವಸಂತ ರಾವ್ ಕುಟುಂಬಗಳ ನಡುವೆ ಆಗಾಗ್ಗೆ ಜಗಳ ನಡೆಯುತ್ತಿತ್ತು. ಗ್ರಾಮಸ್ಥರು ಸಂಧಾನ ಮಾಡಿದ್ದರು. ಅಶ್ವತ್ಥ ರಾವ್ ತೋಟದ ಪಕ್ಕದಲ್ಲಿಯೇ ವಸಂತ ರಾವ್ ಮೇಕೆ ಶೆಡ್ ಇತ್ತು. ಗ್ರಾಮದಲ್ಲಿ ಬಿಗುವಿನ ವಾತಾವರಣವಿದೆ.

'ಮತಾಂತರ ನಿಲ್ಲಿಸದಿದ್ದರೆ ಸಿಕ್ಕಲ್ಲಿ ಒದೆಯುತ್ತೇವೆ'

ವಿಜಯಪುರ: 'ಪಾದ್ರಿಗಳು, ಕ್ರೈಸ್ತ ಧರ್ಮಗುರುಗಳು ಬಾಯಿ ಮುಚ್ಚಿಕೊಂಡು ತಮ್ಮ ಪಾಡಿಗೆ ಚರ್ಚ್‌ಗಳಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದರೆ ಸರಿ. ಹಿಂದೂಗಳ ಮತಾಂತರ ನಿಲ್ಲಿಸದಿದ್ದರೆ ಸಿಕ್ಕಸಿಕ್ಕಲ್ಲಿ ಒದೆಯಬೇಕಾಗುತ್ತದೆ' ಎಂದು ಶ್ರೀರಾಮ ಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಎಚ್ಚರಿಕೆ ನೀಡಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಅವರು, 'ಮತಾಂತರ ದೇಶದ್ರೋಹದ ಕೆಲಸವಾಗಿದೆ. ರಾಜ್ಯ ಸರ್ಕಾರ ಎಚ್ಚೆತ್ತುಕೊಂಡು, ಮತಾಂತರ ನಿಷೇಧ ಕಾಯ್ದೆ ಜಾರಿಗೊಳಿಸಬೇಕು. 'ಅಶಿಕ್ಷಿತರು, ಬಡವರು ಹಿಂದೆ ಮತಾಂತರಗೊಳ್ಳುತ್ತಿದ್ದರು. ಈಗ ಬ್ರಾಹ್ಮಣರು, ಲಿಂಗಾಯತರು, ಕುರುಬರು, ನಾಯಕ ಸಮುದಾಯದವರೂ ಮತಾಂತರವಾಗುತ್ತಿರುವುದು ಆತಂಕ ಮೂಡಿಸಿದೆ' ಎಂದರು.

'ನಾಡಿನ ವಿವಿಧ ಮಠಾಧೀಶರು, ಸ್ವಾಮೀಜಿಗಳು ಮಠ ಬಿಟ್ಟು ಹೊರಬರಬೇಕು, ಊರು, ಕೇರಿ ಸುತ್ತಾಡಿ ಮತಾಂತರ ತಡೆಗೆ ಜಾಗೃತಿ ಮೂಡಿಸಬೇಕು. ಅಸ್ಪೃಶ್ಯತೆ ಆಚರಣೆ ತಡೆಯಬೇಕು' ಎಂದು ಒತ್ತಾಯಿಸಿದರು.

'ಕ್ರೈಸ್ತರು ದೇಶದಲ್ಲಿ ಈಗಾಗಲೇ ಮತಾಂತರದ ಮೂಲಕ ನಾಗಾಲ್ಯಾಂಡ್, ಗುರ್ಖಾಲ್ಯಾಂಡ್ ನಿರ್ಮಿಸಿದ್ದಾರೆ. ಇವರನ್ನು ಹೀಗೆ ಬಿಟ್ಟರೆ ಭಾರತವನ್ನು ಕ್ರಿಶ್ಚಿಯನ್ ಲ್ಯಾಂಡ್ ಮಾಡುತ್ತಾರೆ' ಎಂದರು.

ಪರಮ್ ಬೀರ್ ಸಿಂಗ್ ವಿಚಾರಣೆಗೆ ಹಾಜರು

ಮುಂಬೈ: ಮಾಜಿ ಪೊಲೀಸ್ ಆಯುಕ್ತ ಪರಮ್ ಬೀರ್ ಸಿಂಗ್ ಅವರು ಮುಂಬೈ ಪೊಲೀಸ್ ಅಪರಾಧ ವಿಭಾಗದ ಮುಂದೆ ಗುರುವಾರ ವಿಚಾರಣೆಗೆ ಹಾಜರಾದರು. ಅವರನ್ನು ಏಳು ಗಂಟೆಗಳ ಕಾಲ ವಿಚಾರಣೆಗೆ ಒಳಪಡಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದರು.

₹100 ಕೋಟಿ ವಸೂಲಿ ಪ್ರಕರಣದಲ್ಲಿ ಮುಂಬೈ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಪರಮ್ ಬೀರ್ ಸಿಂಗ್ ಅವರನ್ನು ಘೋಷಿತ ಅಪರಾಧಿ ಎಂದು ತಿಳಿಸಿದೆ.

ದೆಹಲಿ: ನಿರ್ಮಾಣ ಚಟುವಟಿಕೆಗಳಿಗೆ ತಡೆ

ನವದೆಹಲಿ (ಪಿಟಿಐ): 'ಸುಪ್ರೀಂಕೋರ್ಟ್ ಆದೇಶದಂತೆ ರಾಷ್ಟ್ರ ರಾಜಧಾನಿಯಲ್ಲಿ ಕಟ್ಟಡಗಳ ನಿರ್ಮಾಣ ಹಾಗೂ ನೆಲಸಮಗೊಳಿಸುವ ಚಟುವಟಿಕೆಗಳ ಮೇಲೆ ಮತ್ತೆ ನಿಷೇಧ ಹೇರಲು ನಿರ್ಧರಿಸಲಾಗಿದೆ' ಎಂದು ದೆಹಲಿ ಪರಿಸರ ಸಚಿವ ಗೋಪಾಲ್ ರಾಯ್ ಗುರುವಾರ ತಿಳಿಸಿದರು.

'ಈ ನಿಷೇಧ ಗುರುವಾರದಿಂದಲೇ ಜಾರಿಯಾಗಲಿದೆ. ಈ ಕ್ರಮದಿಂದ ಕಾರ್ಮಿಕರಿಗೆ ಸಾಕಷ್ಟು ತೊಂದರೆಯಾಗುತ್ತಿರುವ ಕಾರಣ, ಅವರಿಗೆ ಹಣಕಾಸು ನೆರವು ನೀಡಲು ನಿರ್ಧರಿಸಲಾಗಿದೆ' ಎಂದು ಅವರು ಹೇಳಿದರು.

ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ನೆಲಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಬಿ.ಆರ್ ಅಂಬೇಡ್ಕರ್ ವೀದಿ, ಬೆಂಗಳೂರು–560 001.
ಸಂಖ್ಯೆ: ನಿಅಚೌಅನಿ/ಪತ್ರಿಕಾ ಪ್ರಕಟಣೆ/ಸಿಆರ್–25/2021–22 ದಿನಾಂಕ: 26.11.2021

ಪ್ರಕಟಣೆ

2021–22ನೇ ಸಾಲಿಗೆ ಸಾಲ ಸೌಲಭ್ಯ ಒದಗಿಸಲು ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನ

1. ಸುವಿಧಾ ತಂತ್ರಾಂಶದ ಮೂಲಕ (Online) ಅರ್ಜಿ ಸ್ವೀಕರಿಸುವ ಯೋಜನೆ:

• ಅರಿವು ಶೈಕ್ಷಣಿಕ ಸಾಲ ಯೋಜನೆ (ನವೀಕರಣಕ್ಕಾಗಿ ಮಾತ್ರ) ಈಗಾಗಲೇ ಕಳೆದ ಸಾಲಿನಲ್ಲಿ ಅರಿವು ಶೈಕ್ಷಣಿಕ ಸಾಲ ಯೋಜನೆಯಡಿ ಸೌಲಭ್ಯ ಪಡೆದ ವಿದ್ಯಾರ್ಥಿಗಳಿಗೆ 2021–22ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿದ್ದಲ್ಲಿ ಮುಂದುವರೆದ ಕಂತುಗಳಿಗೆ (2, 3, 4ನೇ ಕಂತುಗಳು) ಅರ್ಜಿಗಳನ್ನು ಸುವಿಧಾ ಆನ್‌ಲೈನ್ ಪೋರ್ಟಲ್ (Suvidha Online Portal) ಮುಖಾಂತರ https://suvidha.karnataka.gov.in ದಿನಾಂಕ 10.01.2022ರ ಸಂಜೆ 5:30ರೊಳಗೆ ಅರ್ಜಿ ಸಲ್ಲಿಸುವುದು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.

• ದಾಖಲೆಗಳು (ಅರಿವು ನವೀಕರಣಕ್ಕೆ):– ಜಾಮೀನುದಾರರ ಒಪ್ಪಿಗೆ ಪತ್ರ (Collateral Acceptance Letter), ವ್ಯಾಸಂಗ ಪ್ರಮಾಣ ಪತ್ರ (Study Certificate), ಹಣ ಸಂದಾಯ ರಶೀದಿ (Fees Receipt) ತಂದೆ ತಾಯಿ/ಪೋಷಕರ ಒಪ್ಪಿಗೆ ಪತ್ರ (Parents Consent Letter) ಅರ್ಜಿದಾರರ ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆ ಸಂಖ್ಯೆ ಮತ್ತು ಐ.ಎಫ್.ಎಸ್.ಸಿ ಸಂಖ್ಯೆ ಮತ್ತು ಕೇಂದ್ರ ಆಧಾರ್ ಅಧಿನಿಯಮ, 2016 ಸೆಕ್ಷನ್ (7)ರಡಿ ಆಧಾರ್ ಕಾರ್ಡ್ ಕಡ್ಡಾಯವಾಗಿರುತ್ತದೆ.

2. ಹಸ್ತಚಾಲಿತವಾಗಿ (Manual/Offline) ಆಫ್‌ಲೈನ್ ಮೂಲಕ ಅರ್ಜಿ ಸ್ವೀಕರಿಸುವ ಯೋಜನೆ:–

• ಕಿರುಸಾಲ/ಸ್ವಸಹಾಯ ಗುಂಪುಗಳಿಗೆ ಸಾಲ ಮತ್ತು ಸಹಾಯಧನ ಯೋಜನೆ ಅರ್ಜಿಗಳನ್ನು ಹಸ್ತಚಾಲಿತ (Offline/Manual) ಮೂಲಕ ಸಾಲ ಸೌಲಭ್ಯ ಪಡೆಯಲು ಇಚ್ಛಿಸುವವರು ನಿಗದಿತ ಅರ್ಜಿ ನಮೂನೆಗಳಲ್ಲಿ ಭರ್ತಿ ಮಾಡಿ ಅಗತ್ಯ ದಾಖಲಾತಿಗಳೊಂದಿಗೆ ದಿನಾಂಕ 10.01.2022ರ ಸಂಜೆ 5:30ರೊಳಗೆ ಆಯಾ ಜಿಲ್ಲಾ ವ್ಯವಸ್ಥಾಪಕರ ಕಛೇರಿಗಳಲ್ಲಿ ಸಲ್ಲಿಸುವುದು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.

ನಿಗಮದ ಯೋಜನೆಗಳಲ್ಲಿ ಸೌಲಭ್ಯ ಪಡೆಯಲು ಹೊಂದಿರಬೇಕಾದ ಸಾಮಾನ್ಯ ಅರ್ಹತೆಗಳು:–

• ಅರ್ಜಿದಾರರು ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ:30/03/2002ರ ಆದೇಶದಲ್ಲಿನ ಪ್ರವರ್ಗ–Iರ 6(a) ಯಿಂದ 6(ak)ವರೆಗಿನ (a)ಬೆಸ್ತ, (b)ಅಂಬಿಗ(ಅಂಬಿ), (c)ಬಾರ್ಕಿ/ಬಾರಿಕ, (d)ಬೆಸ್ತರ್, (e)ಭೋಯಿ, (f)ರಾಜಬೋಯಿ, (g)ಬುಂಡೆ–ಬೆಸ್ತ್, (h)ದಾಲ್ಜಿ (i)ದಾವತ್, (j)ಗಬಿತ್, (k)ಗಲಾಡಕೊಂಕಣಿ, (l)ಗಂಗೆಮಕ್ಕಳು, (m)ಗಂಗಾಕುಲ, (n)ಗಂಗಾಮತ, (o)ಗಂಗಾಮತಸ್ಥ, (p)ಗಂಗಾಪುತ್ರ, (q)ಗೌರಿಮತ, (r)ಬುಂಡೆ–ಬೆಸ್ತ/ಗುಂಡೆಬೆಸ್ತ, (s)ಹರಕಂತ್ರ, (t)ಜಲಗಾರ, (u)ಕಬ್ಬೇರ/ಕಬ್ಬೇರ್, (v)ಕಬ್ಬಲಿಗ, (w)ಕಬ್ಬಿಲಿ, (x)ಕಹಾರ್, (y)ಖಾರ್ವಿ/ಕೊಂಕಣಖಾರ್ವಿ,(z) ಕೋಳಿ, (aa)ಕೋಳಿಮಹದೇವ್, (ab)ಮಡ್ಡರ್, (ac)ಮೀನಗಾರ್, (ad)ಮೊಗವೀರ, (ae)ಮಗೇರ್, (af)ಮುಕ್ಕವಾನ್, (ag)ಪರಿವಾರ, (ah)ಸಿವಿಯಾರ್, (ai) ಸುಣಗಾರ, (aj)ತೊರೆಯ (ak)ವಾಲಿ ಜಾತಿಗೆ ಸೇರಿದವರಾಗಿರಬೇಕು.
• ಕೇಂದ್ರ ಆಧಾರ್ ಅಧಿನಿಯಮ, 2016 ಸೆಕ್ಷನ್ (7)ರಡಿ ಆಧಾರ್ ಕಾರ್ಡ್ ಕಡ್ಡಾಯವಾಗಿರುತ್ತದೆ.
• ಅರ್ಜಿದಾರರ ಜಾತಿ ಪ್ರಮಾಣ ಪತ್ರ ಕಡ್ಡಾಯವಾಗಿರುತ್ತದೆ.
• ಅರ್ಜಿದಾರರ ಆದಾಯ ಪ್ರಮಾಣ ಪತ್ರವು ಚಾಲ್ತಿಯಲ್ಲಿರಬೇಕು.
• ಸರ್ಕಾರದ/ಯಾವುದಾದರೂ ನಿಗಮಗಳ ಯೋಜನೆಯಡಿಯಲ್ಲಿ ಕುಟುಂಬದ ಯಾರೇ ಆಗಲಿ ಈಗಾಗಲೇ ಯೋಜನಾ ಸೌಲಭ್ಯ ಪಡೆದಿದ್ದಲ್ಲಿ ಅಂತಹವರು ಹಾಗೂ ಅವರ ಕುಟುಂಬದವರು ಮತ್ತೊಮ್ಮೆ ಸೌಲಭ್ಯ ಪಡೆಯಲು ಅರ್ಹರಾಗಿರುವುದಿಲ್ಲ.
• ಒಂದು ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಹೆಚ್ಚಿನವರಿಗೆ ಸೌಲಭ್ಯ ಒದಗಿಸಲಾಗುವುದಿಲ್ಲ.
• ವಯೋಮಿತಿ 18 ವರ್ಷಗಳಿಂದ 55 ವರ್ಷಗಳ ಮಿತಿಯೊಳಗಿರಬೇಕು.
• ಕಿರುಸಾಲ/ಸ್ವಸಹಾಯ ಗುಂಪು ಯೋಜನೆಗೆ ವಾರ್ಷಿಕ ಆದಾಯ ಮಿತಿ ಗ್ರಾಮಾಂತರ ಪ್ರದೇಶದವರಿಗೆ ರೂ 98,000/– ಹಾಗೂ ಪಟ್ಟಣ ಪ್ರದೇಶದವರಿಗೆ ರೂ 1,20,000/– ಗಳನ್ನು ಮೀರಿರಬಾರದು.

ವಿಶೇಷ ಸೂಚನೆ: ಸರ್ಕಾರದಿಂದ ಬಿಡುಗಡೆಯಾಗುವ ಅನುದಾನಕ್ಕೆ ಅನುಗುಣವಾಗಿ ಸಾಲ ಸೌಲಭ್ಯ ಒದಗಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಜಿಲ್ಲೆಗಳಲ್ಲಿರುವ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತ/ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಛೇರಿಗೆ ಭೇಟಿ ನೀಡಿ ಅಥವಾ ನಿಗಮದ ವೆಬ್‌ಸೈಟ್ https://ambigaradevelopment.karnataka.gov.in ನಲ್ಲಿ ಅರ್ಜಿ ನಮೂನೆ ಮತ್ತು ವಿವರ ಪಡೆಯಬಹುದಾಗಿದೆ. ನಿಗಮದ ಕೇಂದ್ರ ಕಛೇರಿ ಸಹಾಯವಾಣಿ ದೂರವಾಣಿ ಸಂಖ್ಯೆ 080–22864099ಗೆ ಪೂರ್ವಾಹ್ನ 10:00 ಗಂಟೆಯಿಂದ ಸಂಜೆ 5:30ರವರೆಗೆ ಸಂಪರ್ಕಿಸಬಹುದಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ದಿನಾಂಕ 10.01.2022ರ ಸಂಜೆ 5:30ರೊಳಗೆ ಆಯಾ ಜಿಲ್ಲಾ ವ್ಯವಸ್ಥಾಪಕರ ಕಛೇರಿಗಳಲ್ಲಿ ಸಲ್ಲಿಸುವುದು.

ಸಹಿ/–
(ಡಾ. ಎನ್. ಶ್ರೀಮಾಧವಿ, ಕೆ.ಎ.ಎ.ಎಸ್.,)
ವ್ಯವಸ್ಥಾಪಕ ನಿರ್ದೇಶಕರು

ವಾಸಾಸಂಇ/ಬೆಂ.ನ./ಜಿಎ/2202/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಾಣಿಜ್ಯ ತೆರಿಗೆಗಳ ಇಲಾಖೆ
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ರವರ ಕಛೇರಿ,
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–6, ಕೆ.ಐ.ಎ.ಡಿ.ಬಿ ಕಟ್ಟಡ, 'ಬಿ' ಬ್ಲಾಕ್,
3ನೇ ಮಹಡಿ, 4ನೇ ಹಂತ, 14ನೇ ಅಡ್ಡರಸ್ತೆ, ಪೀಣ್ಯ 2ನೇ ಹಂತ, ಬೆಂಗಳೂರು–560058.
ದೂರವಾಣಿ ಸಂಖ್ಯೆ: 080–28363927

ಸಂಖ್ಯೆ: ವಾತೆಜಂಆ(ಆ)/ವಿಸ&ಸೇತೆಕ–6/ಡಿ.ಇ.ಓ/ಸಿಆರ್–02/2021–22
ದಿನಾಂಕ: 24–11–2021 ಮತ್ತು
ಸಂಖ್ಯೆ: ವಾತೆಜಂಆ/ವಿಸ&ಸೇತೆಕ–6/ಎಸ್&ಹೆಚ್/ಸಿಆರ್–02/2021–22
ದಿನಾಂಕ: 24–11–2021

ಟೆಂಡರ್ ಪ್ರಕಟಣೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–6, ಕೆ.ಐ.ಎ.ಡಿ.ಬಿ ಕಟ್ಟಡ, 'ಬಿ' ಬ್ಲಾಕ್, 3ನೇ ಮಹಡಿ, 4ನೇ ಹಂತ, ಪೀಣ್ಯ 2ನೇ ಹಂತ, ಬೆಂಗಳೂರು – 560058 ರವರ ಕಛೇರಿಗಾಗಿ ಪ್ರತ್ಯೇಕವಾಗಿ 50 (ಐವತ್ತು) ಜನ ಡಾಟಾ ಎಂಟ್ರಿ ಆಪರೇಟರ್ಸ್ ಹಾಗೂ 5 (ಐದು) ಜನ ಸ್ವಚ್ಛತಾ ಸಿಬ್ಬಂದಿ, 8 (ಎಂಟು) ಜನ ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಗುತ್ತಿಗೆದಾರರು ಒದಗಿಸಲು 1999 ರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಪ್ರತಿಷ್ಠಿತ ಮಾನವ ಸಂಪನ್ಮೂಲ ಸಂಸ್ಥೆಯಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10–12–2021ರಂದು ಸಂಜೆ 5.00 ಗಂಟೆಯೊಳಗೆ.

ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನ್ನು ಗಮನಿಸಿ:
http://www.eproc.karnataka.gov.in
http://www.ctax.kar.nic.in

ಸಹಿ/– ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ)
ವಾಸಾಸಂಇ/ಬೆಂ.ನ/ಅಡ್ವರ್ಟೋರ್/2212/2021–22 ವಿ.ಸ.&ಸೇ.ತೆ.ಕ–6, ಬೆಂಗಳೂರು

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ ನಿಯಮಿತ
ದೇವರಾಜ ಅರಸು ಭವನ, 4ನೇ ಮಹಡಿ, ನಂ.16ಡಿ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052
ಸಂಖ್ಯೆ:ಕಸಸಅನಿ/ಅರ್ಜಿ.ಆ/ಪ್ರಕಟಣೆ/ಸಿಆರ್–46/2021–22 ದಿನಾಂಕ:25.11.2021

ಪ್ರಕಟಣೆ

ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ ನಿಯಮಿತದಿಂದ ಸವಿತಾ ಸಮುದಾಯ ಹಾಗೂ ಅದರ ಉಪ ಜಾತಿಗಳಿಗೆ 2021–22ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

1. ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆ: ಈ ಯೋಜನೆಯಡಿ ಮೇಲೆ ತಿಳಿಸಿರುವ ಸಮಾಜದವರಿಗೆ ಕುಲಕಸುಬು/ಸಾಂಪ್ರದಾಯಿಕ ವೃತ್ತಿಗಳಾದ ಕ್ಷೌರಿಕ ವೃತ್ತಿ, ಬ್ಯೂಟಿಷಿಯನ್, ಡೋಲು, ವಾದ್ಯ ಮತ್ತು ಬ್ಯಾಂಡ್‌ಸೆಟ್ ಮುಂತಾದ ವೃತ್ತಿಗಳನ್ನು ಹಾಗೂ ಕೌಶಲ್ಯತೆ ಹೊಂದಿರುವ ವೃತ್ತಿಗಳನ್ನು ಕೈಗೊಳ್ಳಲು ಗರಿಷ್ಠ ರೂ.2.00 ಲಕ್ಷಗಳವರೆಗೆ ಆರ್ಥಿಕ ನೆರವು, ಇದರಲ್ಲಿ ಗರಿಷ್ಠ ಶೇ.15ರಷ್ಟು ಸಹಾಯಧನ, ಉಳಿಕೆ ಮೊತ್ತ ವಾರ್ಷಿಕ ಶೇ.2ರ ಬಡ್ಡಿದರದಲ್ಲಿ ಸಾಲ.

2. ಸ್ವಯಂ ಉದ್ಯೋಗ ಸಾಲ ಯೋಜನೆ: ಈ ಯೋಜನೆಯಡಿ ಮೇಲೆ ತಿಳಿಸಿರುವ ಸಮಾಜದವರಿಗೆ ಸ್ವಯಂ ಉದ್ಯೋಗಕ್ಕೆ ವ್ಯಾಪಾರ, ಕೈಗಾರಿಕೆ, ಸಾರಿಗೆ ಮತ್ತು ಸೇವಾವಲಯ, ಮುಂತಾದ ಆರ್ಥಿಕ ಚಟುವಟಿಕೆ ಕೈಗೊಳ್ಳಲು ಗರಿಷ್ಠ ರೂ.2.00 ಲಕ್ಷಗಳವರೆಗೆ ಆರ್ಥಿಕ ನೆರವು, ಇದರಲ್ಲಿ ಗರಿಷ್ಠ ಶೇ.15ರಷ್ಟು ಸಹಾಯಧನ, ಉಳಿಕೆ ಮೊತ್ತ ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಸಾಲ.

ಸೌಲಭ್ಯ ಪಡೆಯ ಬಯಸುವವರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.98,000/–ಗಳು ಮತ್ತು ಪಟ್ಟಣ ಪ್ರದೇಶದವರಿಗೆ ರೂ.1,20,000/–ಗಳ ಒಳಗಿರಬೇಕು ಮತ್ತು ಅರ್ಜಿದಾರರ ವಯಸ್ಸು 18 ರಿಂದ 55 ವರ್ಷಗಳ ಮಿತಿಯಲ್ಲಿರಬೇಕು. ಒಂದು ಬಾರಿ ನಿಗಮದ ಯಾವುದಾದರೂ ಯೋಜನೆಯಲ್ಲಿ ಪ್ರಯೋಜನ ಪಡೆದಿದ್ದಲ್ಲಿ ಅಂತಹವರು ಹಾಗೂ ಅವರ ಕುಟುಂಬದವರು ಮತ್ತೊಮ್ಮೆ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ. ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಈ ಮೇಲ್ಕಂಡ ಯೋಜನೆಗಳಲ್ಲಿ ಸೌಲಭ್ಯ ಪಡೆಯಲು ಇಚ್ಛಿಸುವ, ಈ ಮೇಲ್ಕಂಡ ಸಮಾಜದವರು ಉಚಿತವಾಗಿ ಅರ್ಜಿ ನಮೂನೆಯನ್ನು ಜಿಲ್ಲಾ ಕಛೇರಿಯಲ್ಲಿ ಅಥವಾ ನಿಗಮದ ವೆಬ್‌ಸೈಟ್ https://kssd.karnataka.gov.in ನಲ್ಲಿ ಪಡೆದು, ಅರ್ಜಿಯೊಂದಿಗೆ ಚಾಲ್ತಿಯಲ್ಲಿರುವ ಜಾತಿ ಆದಾಯ ಪ್ರಮಾಣ ಪತ್ರ, ಆಧಾರ್‌ಕಾರ್ಡ್ ಜೊಡಣೆಯಾದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತಾ ಪುಸ್ತಕದ ಪ್ರತಿ, ಫೋಟೋ ಮತ್ತು ಇತರೆ ದಾಖಲಾತಿಗಳೊಂದಿಗೆ ಭರ್ತಿ ಮಾಡಿ ಅರ್ಜಿಯನ್ನು ನಿಮ್ಮ ಜಿಲ್ಲೆಯ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಛೇರಿಗೆ ದಿನಾಂಕ:10.01.2022ರೊಳಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಯನ್ನು ಪಡೆಯಲು ನಿಗಮದ ಸಹಾಯವಾಣಿ ಸಂಖ್ಯೆ 080–22374832 ಹಾಗೂ 080–29506174–5 ಸಂಪರ್ಕಿಸಲು ಅಥವಾ ನಿಗಮದ ಆಯಾ ಜಿಲ್ಲಾ ಕಛೇರಿಗಳನ್ನು ಸಂಪರ್ಕಿಸುವಂತೆ ತಿಳಿಸಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು.

DIPR/DDU/2215/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

THE FEDERAL BANK LIMITED
Regd. Office: Aluva, Kerala.
ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/21-22 NOTICE FOR PRIVATE SALE OF GOLD 23/11/2021

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 15-12-2021 as shown below:

Br.Jangamkote Cross:No. 295, HosapetVillage,Jangamakote Cross, ShidlaghttaTaluk, Chikballapur, Karnataka, CHIKKABALLAPURA, 562102:-21696400015038,21696400015541,21696400015780, 21696100021864,21695500001906,21696400014874,21696400011151,21696400011458,21696100021948,21695500002011,21696400017133,21696400011227,21696100021799,21695500001823.
Br.Chikkajala: Sri Byraveshwara Complex, No 82/3, Chikkajala Village,Chikkajala Post,KIAL Road, Bangalore North Taluk,Karnataka - 562157, Ph no: 080-28467032:-2086640017216,2086640019725, 20866400016465,20866400019428,20866400010443,20866400019311,20866400019436,20866400018412,20866400019766,20866400019451,20866400017463,20866400019774,20866400019444, 20866400010765,20866400017687,20866400019287,20866400018149,20866400017679,20866400019980,20866400018164,20866400018958,20866400019642,20866400015657,20866400018933, 20866400019923,20866400019667,20866400018941,20866400015822,20866400019485,20866400017976,20866400019063,20866400019493,20866400017992,20866400011086,20866400019071, 20866400018008,20866400010526,20866400020079,20866400017869,20866400010542,20866400018420,20866400017950,20866400010534,20866400018594,20866400017968,20866400019154, 20866400019048,20866400017943,20866400019139,20866400019022,20866400019659,20866400019147,20866400018388,20866400019576,20866400019790,20866400019519,20866400015400, 20866400019808,20866400019329,20866400018602,20866400018867,20866400019345,20866400018610,20866400018883,20866400019337,20866400018834,20866400018875,20866400018081, 20866400018479,20866400015988,20866400017885,20866400018073,20866400017133,20866100034867,20866400017141,20866400020053,20866400009981,20866400018099,20866400019295, 20866400019030,20866400016051,20866400018032,20866400019824,20866400018263. Br. Hoskote: Gangamma Gudi Road, M V Extension, Hoskote-562 114, Ph: 080-27933430:-
15856400017818,15856400017826,15856100085669,15856400019558,15856400017172,15856400018915,15856100084993,15856100087384,15856400019822,15856400017693,15856400018808,15856100085289, 15856100087558,15856400017685,15856100085594,15856100085743,15856100088432,15856400018907,15856100083359,15856400017701,15856100085735,15856100085057,15856100083540,15856100085933, 15856100088176,15856100087996,15856100085651,15856100085263,15856100088390,15856400018865,15856100089323,15856100086329.
